
ಸಂಪುಟ 24 ಸಂಚಿಕೆ 23
ಜೂನ್ 9, 2002 ಬೆಲೆ ರೂ. 3.00

ಐಕ್ಯರಂಗ


ದುಡಿವ ಜನರ ಪ್ರಾಣಮಿತ್ರ

http:// www.geocities.com/aikyaranga






ಕೋಮುವಾದಿಗಳ ಹೂಂಕಾರ ಜನತೆಯ ಉತ್ತರ




ಇನ್ನಿಲ್ಲವಾದ ಕ್ರಾಂತಿಕಾರಿ ಸಿ.ಎನ್



ಹೋಂಟ್ರೇಡ್ ಹಗರಣ ನುಂಗಿದರಯ್ಯ ಜನರ ಹಣ




2002
ಫಿಫಾ ವಿಶ್ವಕಪ್
ಕೊರಿಯಾ-ಜಪಾನ್



ಪ್ಯಾಲೆಸ್ಟೈನ್ : ಮುಗಿಯದ ಹೋರಾಟ

ವಿಶ್ವಕಪ್ ಫುಟ್‌ಬಾಲ್ ಜನರ ಬೆಸೆವ ಕ್ರೀಡೆ





ಕಾಂಗ್ರೆಸ್ ಸರ್ಕಾರವೂ ಪತನ

ನಮ್ಮ ಭಾಷಣಗಳಲ್ಲಿ ನಾನು ವಿಶೇಷವಾಗಿ ಬ್ರಿಟೀಷ್ ಸಾಮ್ರಾಜ್ಯಶಾಹಿಗಳ ವಿರುದ್ಧ ಗಾಂಧೀಜಿ ಮತ್ತು ಅವರ ಸತ್ಯಾಗ್ರಹ ಚಳವಳಿ ನಿರ್ವಹಿಸಿದ ಪಾತ್ರವನ್ನು ಉಲ್ಲೇಖಿಸಿದೆ. ಸಾಮ್ರಾಜ್ಯಶಾಹಿಗಳ ಮುಖವನ್ನು ಬಯಲು ಮಾಡಿ ತುಳಿತಕ್ಕೊಳಗಾದ ಜನತೆಯ ಜತೆ ಸಹಾನುಭೂತಿ ವ್ಯಕ್ತಪಡಿಸುವ ಟಾಗೂರರ "ಆಫ್ರಿಕಾ" ಕವನವನ್ನೂ ನಾನು ಉಲ್ಲೇಖಿಸಿದೆ.

ಆಳುವ ಸಮ್ಮಿಶ್ರ ಕೂಟದ ಎಎನ್‌ಸಿ, ಎಸ್‌ಎಸಿಪಿ ಮತ್ತು ದಕ್ಷಿಣ ಆಫ್ರಿಕಾ ಕಾರ್ಮಿಕ ಸಂಘಗಳ ಮಹಾ ಒಕ್ಕೂಟ (cosaty) ಪ್ರತಿನಿಧಿಗಳ ಜತೆ ಮಾತುಕತೆ ನಡೆಸುವ ಅವಕಾಶವೂ ನನಗೆ ಸಿಕ್ಕಿತು. ಜೋಹಾನ್ಸ್‌ಬರ್ಗ್, ಪ್ರಿಟೋರಿಯಾ, ಕೇಪ್‌ಟೌನ್ ಮತ್ತು ಡರ್ಬನ್‌ನಲ್ಲಿ ದಕ್ಷಿಣ ಆಫ್ರಿಕಾ ಕಮ್ಯುನಿಸ್ಟ್ ಪಕ್ಷ (ಎಸ್‌ಎಸಿಪಿ) ನಾಯಕರ ಜತೆ ಸಮಾಲೋಚಿಸಿದೆ.


ಮಂಡೇಲಾ

ಪಕ್ಷದ ಪ್ರಧಾನ ಕಾರ್ಯದರ್ಶಿ ಚಾರ್ಲ್ಸ್ ಎಂಕಗುಲಾ, ಸಹಾಯಕ ಪ್ರಧಾನ ಕಾರ್ಯದರ್ಶಿ ಜೆರೆಮಿ ಕ್ರೊನಿಸ್, ಕೇಂದ್ರ ಸಮಿತಿ ಸದಸ್ಯ ಲಾಂಗಾ ಜಟಾ, ರಾಷ್ಟ್ರೀಯ ಶಿಕ್ಷಣ ಘಟಕದ ಕಾರ್ಯದರ್ಶಿ ಬಿಶ್ವಾಸ್ ಸತ್ಸರ, ಪಕ್ಷದ ಕೇಂದ್ರ ಸಮಿತಿ ಸದಸ್ಯ ಕೆ.ಮುನಿಸ್ವಾಮಿ, ಗೋತೆಂಗ್ ಅಸೆಂಬ್ಲಿ ಸ್ಪೀಕರ್ ಟ್ರೆವರ್ ಫಾಲ್ಲರ್ ಮತ್ತು ಸಂಸತ್ ಸದಸ್ಯ ಇಳಾಗಾಂಧಿ ಈ ಮುಖಂಡರಲ್ಲಿ ಸೇರಿದ್ದರು.

ದಕ್ಷಿಣ ಆಫ್ರಿಕಾದ ಪುನರುತ್ಥಾನ ಒಂದು ಮಹಾಸಾಧನೆ. ಶತಮಾನಗಳ ಕಾಲ ಸಾಮ್ರಾಜ್ಯಶಾಹಿ ದಾಸ್ಯದಲ್ಲಿ ನಲುಗಿದ ದೇಶವೊಂದು ಅಕ್ಷರಶಃ ಬೂದಿಯಿಂದ ಮೇಲೆದ್ದು ಬಂದ ದೃಷ್ಟಾಂತವಂತು. 18 ವರ್ಷಕ್ಕೂ ಹೆಚ್ಚು ಕಾಲ ಮಂಡೇಲಾರನ್ನು ಸೆರೆಯಲ್ಲಿಟ್ಟ ರಾಬಿನ್ ದ್ವೀಪದ ಸೆರೆಮನೆಗೆ ನಾನು ಭೇಟಿ ಕೊಟ್ಟೆ. ಈಗ ಸಂಸತ್ ಸದಸ್ಯರಾಗಿರುವ ಅಹಮದ್ ಕಥ್ರಡಾ ನನ್ನ ಜತೆಯಲ್ಲಿದ್ದರು. ಅವರು ಕೂಡ ಇದೇ ಸೆರೆಮನೆಯಲ್ಲಿ ಮಂಡೇಲಾ ಜತೆ ಬಂಧಿಯಾಗಿದ್ದರು. ಇದೇ ಜೈಲಿನಲ್ಲಿ ಕಾಲ ಕಳೆದಿದ್ದ ದುಲ್ಲಾ ಜಮದ್ ಕೂಡ ನಮ್ಮೊಂದಿಗಿದ್ದರು.

ದಕ್ಷಿಣ ಆಫ್ರಿಕಾ ಕಮ್ಯುನಿಸ್ಟ್ ಪಕ್ಷದ ಅನುಭವದಿಂದ ಕಲಿಯಬೇಕಾದ್ದೂ ಬಹಳಷ್ಟಿದೆ. ಜನತೆಯ ಕಲ್ಯಾಣಕ್ಕಾಗಿ ಸಮರ್ಥ ನಾಯಕತ್ವದೊಂದಿಗೆ ಹೋರಾಟವನ್ನು ಮುಂದಕ್ಕೊಯ್ಯಲು ಪಕ್ಷಕ್ಕೆ ಸಾಧ್ಯವಾಗಿತ್ತು. ದೇಶದ ಜನಸಂಖ್ಯೆ 4.4 ಕೋಟಿ ಆ ಪೈಕಿ ಶೇಕಡ 80ರಷ್ಟು ಜನರು ನಗರವಾಸಿಗಳು. ಹಣಬಲ ಇರುವ ಬಿಳಿಯರ ಸಂಖ್ಯೆ ಕೇವಲ 53 ಲಕ್ಷ. ಹೀಗಾಗಿ ಅಲ್ಲಿನ ನಾಯಕತ್ವ ರೂಪಿಸಬೇಕಾದ ಕಾರ್ಯಕ್ರಮ ಸ್ಪಷ್ಟವಾಗಿಯೇ ಭಾರತದ ಸ್ವರೂಪಕ್ಕಿಂತ ಭಿನ್ನವಾಗಿರಬೇಕಿತ್ತು. ಬಂಗಾಳದ ಪಂಚಾಯತ್ ರಾಜ್ ವ್ಯವಸ್ಥೆ ಹಾಗೂ ಭೂಸುಧಾರಣೆಗಳನ್ನು ನಾನು ನಾಯಕರಿಗೆ ವಿವರಿಸಿದೆ.

ಕರಿಯರೇ ಹೆಚ್ಚಿರುವ ಸೊವೆಟೊಗೆ ನಾನು ಪ್ರವಾಸ ಮಾಡಿದೆ. ಗಾಂಧೀಜಿ ಸಂಪರ್ಕ ಹೊಂದಿದ್ದ ಪ್ರಖ್ಯಾತ ಟಾಲ್‌ಸ್ಟಾಯ್ ಫಾರ್ಮ್‌ಗೆ ಭೇಟಿ ನೀಡಿದೆ. ಗಾಂಧಿಗೆ ಅವಮಾನ ಮಾಡಲಾದ ಪೀಟರ್ ಮಾರಿಟ್ಸ್‌ಬರ್ಗ್ ರೈಲ್ವೆ ನಿಲ್ದಾಣಕ್ಕೆ ಕೂಡ ನಾನು ಹೋದೆ. ನಿರ್ಲಕ್ಷ್ಯಕ್ಕೆ ಒಳಗಾಗಿರುವ ಫೀನಿಕ್ಸ್ ಅನ್ನು ಈಗ ದಕ್ಷಿಣ ಆಫ್ರಿಕಾ ಸರ್ಕಾರದ ಸಕ್ರಿಯ ನೆರವಿನೊಂದಿಗೆ ಪುನರುಜ್ಜೀವನಗೊಳಿಸಲಾಗುತ್ತಿದೆ.

ಭಾರತಕ್ಕೆ ಸಂಬಂಧಿಸಿ ಎಲ್ಲ ಮಟ್ಟಗಳಲ್ಲೂ ಅಪಾರ ಆಸಕ್ತಿ ಕಂಡು ಬಂತು. ಬಂಗಾಳದಲ್ಲಿ ಸಿಐಟಿಯು ಜತೆ ವಿಚಾರ ವಿನಿಮಯ ಮಾಡಿಕೊಳ್ಳಲು ಬರುವಂತೆ ಕೊಸಾಟು ನಿಯೋಗವನ್ನು ನಾನು ಆಹ್ವಾನಿಸಿದೆ. ದಕ್ಷಿಣ ಆಫ್ರಿಕಾದ ಪ್ರಮುಖ ನಗರಗಳು ಸ್ವರೂಪ ಹಾಗೂ ನೋಟದಲ್ಲಿ ಯುರೋಪಿನ ನಗರಗಳನ್ನು ಹೋಲುವುದು ಮಹತ್ವದ ಸಂಗತಿಯಾಗಿದೆ. ಹೆದ್ದಾರಿ ಮತ್ತು ಸಾರಿಗೆ ವ್ಯವಸ್ಥೆಗಳು ಒಂದೇ ರೀತಿಯವು. ದಕ್ಷಿಣ ನಗರಗಳು ಅಭಿವೃದ್ಧಿ ಹೊಂದುತ್ತಿರುವ ದೇಶವೊಂದರ ಭಾಗಗಳೆಂದು ಭಾಸವಾಗುವುದೇ ಇಲ್ಲ.

ಜನತಾದಳ ವಿಭಜನೆ

ಭಾರತದಲ್ಲಿ ತೀವ್ರ ಗತಿಯಲ್ಲಿ ರಾಜಕೀಯ ವಿದ್ಯಮಾನಗಳು ನಡೆಯುತ್ತಿದ್ದವು. ಲಾಲೂ ಪ್ರಸಾದ್ ಯಾದವ್ ಸಂಯುಕ್ತರಂಗವನ್ನು ರಚಿಸುವಲ್ಲಿ ಒಂದು ಮಹತ್ವದ ಪಾತ್ರ ನಿರ್ವಹಿಸಿದ್ದರು ಹಾಗೂ ಬಿಹಾರದಲ್ಲಿ ಕೋಮುವಾದಿ ಶಕ್ತಿಗಳ ವಿರುದ್ಧ ಹೋರಾಡುವಲ್ಲಿ ಶ್ಲಾಘನೀಯ ಕೆಲಸ ಮಾಡಿದ್ದರು. ಆದರೆ ದುರದೃಷ್ಟವಶಾತ್, ಅವರು ಹಲವು ಭ್ರಷ್ಟಾಚಾರ ಪ್ರಕರಣಗಳಲ್ಲಿ ಸಿಕ್ಕಿಹಾಕಿಕೊಂಡರು. ಬಿಹಾರದ ಜನರಿಂದ ಪ್ರತ್ಯೇಕಗೊಳ್ಳತೊಡಗಿದರು. ನಾವು ಅವರಿಗೆ ಆಗಾಗ ಎಚ್ಚರಿಕೆ ನೀಡಿದ್ದೆವು. ರಾಜಿನಾಮೆ ನೀಡಿ ನ್ಯಾಯಾಲಯಗಳನ್ನು ಎದುರಿಸುವಂತೆ ಅವರಿಗೆ ಹೇಳಿದೆವು. ನಿರಪರಾಧಿ ಎಂದು ಸಾಬೀತಾದರೆ ಅವರು ಮರಳಬಹುದಿತ್ತು. ರಂಗದ ಮುಖ್ಯ ಅಂಗಪಕ್ಷವೊಂದರ ನಾಯಕರು ಮೇವು ಹಗರಣದಂಥ ಪ್ರಕರಣದಲ್ಲಿ ಒಳಗೊಂಡಿರುವುದು ನಮಗೆ ಸಹಿಸಲಾಗದ ವಿಚಾರ. ಆದರೆ ಲಾಲೂ ಪ್ರಸಾದ್ ಸಲಹೆಗಳಿಗೆ ಕಿವಿಗೊಡಲಿಲ್ಲ. ಜುಲೈ 5ರಂದು ಜನತಾದಳ ವಿಭಜನೆಗೊಂಡಿತು. ಅವರು ರಾಷ್ಟ್ರೀಯ ಜನತಾದಳ (ಆರ್‌ಜೆಡಿ) ರಚಿಸಿದರು.

ಅವರು ರಂಗದೊಂದಿಗೆ ಇರಬಾರದು ಎಂದು ನಾವು ಹೇಳಿದೆವು. ಆದರೆ ಗುಜ್ರಾಲ್ ಸರಕಾರ ಆರ್‌ಜೆಡಿ ಮಂತ್ರಿಗಳನ್ನು ಸಂಪುಟದಲ್ಲಿ ಮುಂದುವರಿಯಲು ಬಿಟ್ಟಿತು. ಕಾಂಗ್ರೆಸ್ ತನ್ನ ಶೈಲಿಗೆ ತಕ್ಕಂತೆ ಲಾಲೂರನ್ನು ಬೆಂಬಲಿಸಿತು. ಆದರೆ ಬಿಹಾರದಲ್ಲಿ ಇನ್ನಷ್ಟು ನಾಟಕ ನಡೆಯಲಿತ್ತು. ಲಾಲೂ ವಿರುದ್ಧ ಸಿ.ಬಿ.ಐ ಆರೋಪ ಪಟ್ಟಿಯನ್ನು ನ್ಯಾಯಾಲಯ ಅಂಗೀಕರಿಸಿದ ಮೇಲೆ ಲಾಲೂ ಮುಖ್ಯಮಂತ್ರಿ ಸ್ಥಾನಕ್ಕೆ ರಾಜಿನಾಮೆ ನೀಡಿದರು. ಆದರೆ ಅವರ ಪತ್ನಿ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದರು. ಲಾಲೂ ಪ್ರಸಾದ್ ಜುಲೈ 30ರಂದು ನ್ಯಾಯಾಲಯದಲ್ಲಿ ಶರಣಾದರು.

ರಾಷ್ಟ್ರದ ಸ್ವಾತಂತ್ರ್ಯದ ಸ್ವರ್ಣಮಹೋತ್ಸವ ಸಂಭ್ರಮಪಡುವಂಥ ಸಂದರ್ಭವೇನೂ ಆಗಿರಲಿಲ್ಲ. ಜನಸಂಖ್ಯೆಯ ಶೇಕಡ 15ರಷ್ಟು ಮಂದಿ ಮಾತ್ರ ಫಲ ಉಣ್ಣುತ್ತಿದ್ದರು. ಬಡವರು ಇನ್ನೂ ಬಡವರಾಗುತ್ತಿದ್ದರು. ಸಂಯುಕ್ತರಂಗ ಸರಕಾರ ರಾಜರ ಆರ್ಥಿಕ ನೀತಿಗಳನ್ನೇ ಮುಂದುವರಿಸುತ್ತಿತ್ತು. ಹಾಗೂ ದೇಶದ ಸಾರ್ವಭೌಮತ್ವವನ್ನು ದೂರುತ್ತಿತ್ತು. ವಿದೇಶ ಬಂಡವಾಳ ಹೂಡಿಕೆ ಬೇಡವೇ ಬೇಡ ಎಂದೇನೂ ನಾನು ಹೇಳುವುದಿಲ್ಲ. ಆದರೆ ಸ್ವಲ್ಪ ವಿವೇಚನೆಯಿಂದ ಅದನ್ನು ಮಾಡಬೇಕೆಂಬುದು ನನ್ನ ಅಭಿಮತ.

ಇದೀಗ ಉತ್ತರ ಪ್ರದೇಶದ ಸರದಿ. ಮಾಯಾವತಿಯ ಆರು ತಿಂಗಳ ಅವಧಿ ಮುಗಿದಿತ್ತು. ಕಲ್ಯಾಣ್‌ಸಿಂಗ್ ಬಿಜೆಪಿ ಮುಖ್ಯಮಂತ್ರಿಯಾಗಿ 1997 ಅಕ್ಟೋಬರ್ ಮಧ್ಯಭಾಗದಲ್ಲಿ ಅಧಿಕಾರ ಸ್ವೀಕರಿಸಿದರು. ಆದರೆ ಒಂದೇ ವಾರದಲ್ಲಿ ಬಿ.ಎಸ್.ಪಿ ಬೆಂಬಲವನ್ನು ವಾಪಸ್ ಪಡೆಯಿತು. ಶಾಸಕರ ಖರೀದಿಯನ್ನು ತಡೆಯಲು ಕೂಡಲೇ ರಾಷ್ಟ್ರಪತಿ ಆಡಳಿತವನ್ನು ಹೇರಬೇಕೆಂದು ನಾವು ಒತ್ತಾಯಿಸಿದೆವು. ಆದರೆ ರಾಜ್ಯಪಾಲರು ಅವಿಶ್ವಾಸಗೊತ್ತುವಳಿ ಎದುರಿಸಲು ಸೂಚಿಸಿದರು. ಇದು ದೇಶಕ್ಕೆ ಅವಮಾನದ ಅವಧಿಯಾಗಿತ್ತು. ಪಕ್ಷಾಂತರ ಸ್ಪರ್ಧೆಯಲ್ಲಿ ಕಾಂಗ್ರೆಸ್ ಮತ್ತು ಬಿಎಸ್‌ಪಿ ಗೆದ್ದರು. ಒಳಗಡೆಯೇ


ಗುಜ್ರಾಲ್

ಹಿಂಸಾಚಾರ ನಡೆಯಿತು.

ಈ ಹಂತದಲ್ಲಿ ರಾಜ್ಯಪಾಲ ರಮೇಶ ಭಂಡಾರಿ ರಾಷ್ಟ್ರಪತಿ ಆಡಳಿತಕ್ಕೆ ಶಿಫಾರಸು ಮಾಡಿತು. ರಾಷ್ಟ್ರಪತಿ ಇದಕ್ಕೆ ಒಪ್ಪಲಿಲ್ಲ. ಇದಕ್ಕೆ ಯಾವುದೇ ಪೂರ್ವೋದಾಹರಣೆ ಇರಲಿಲ್ಲ; ಎರಡನೇ ಬಾರಿಗೆ ಕಳಿಸಿದರೆ ಸರಕಾರದ ಶಿಫಾರಸನ್ನು ಒಪ್ಪದೇ ರಾಷ್ಟ್ರಪತಿಗೆ ಬೇರೆ ಪರ್ಯಾಯವಿಲ್ಲ ಎಂದು ಸಂವಿಧಾನ ಸ್ಪಷ್ಟವಾಗಿ ಹೇಳಿದೆ. ಆದರೆ ಗುಜ್ರಾಲ್ ಸರಕಾರ ಅದನ್ನು ಮಾಡಲಿಲ್ಲ; ಶಿಫಾರಸನ್ನು ಅಂಗೀಕರಿಸಲು ಒತ್ತಾಯ ಮಾಡಲಿಲ್ಲ. ಇದೊಂದು ವಿವೇಕಯುತ ಕ್ರಮವಾಗಿತ್ತು.

ಉತ್ತರ ಪ್ರದೇಶದ ಅನುಭವದಿಂದ ಪಾಠ ಕಲಿತ ನಾವು ಶಾಸಕರ ಖರೀದಿಯನ್ನು ತಡೆಯಬೇಕು ಎಂದು ನಾವು ಒತ್ತಾಯಿಸಿದೆವು. ಪಕ್ಷಾಂತರ ವಿರೋಧಿ ಕಾನೂನಿಗೆ ತಿದ್ದುಪಡಿ ತಂದರೆ ಮಾತ್ರವೇ ಇದು ಸಾಧ್ಯ ಎಂದು ಹೇಳಿದೆವು. ಶಾಸಕ ಅದೂ ಸಂಸತ್ ಸದಸ್ಯ ಯಾವ ಪಕ್ಷದಿಂದ ಆಯ್ಕೆಯಾಗಿರುತ್ತಾರೋ ಆ ಪಕ್ಷವನ್ನು ತೊರೆದರೆ ಅವರನ್ನು ಅನರ್ಹಗೊಳಿಸಬೇಕು. ಅಂಥವರು ಮತ್ತೆ ಜನರ ಬಳಿಗೆ ಹೋಗಬೇಕು.

ಗುಜ್ರಾಲ್ ನಿರ್ಗಮನ

ಕೇಸರಿಯವರ ಕಾಂಗ್ರೆಸ್ ಮತ್ತೆ ಆಟಾಟೋಪ ನಡೆಸಿದರು. ನವೆಂಬರ್ 8ರಂದು ಜೈನ್ ಆಯೋಗದ ವರದಿ ಸೋರಿಕೆಯಾದ ಮೇಲೆ ಇದೆಲ್ಲ ಆರಂಭವಾಯಿತು. ರಾಜೀವ್ ಗಾಂಧಿ ಹತ್ಯೆ ಬಗ್ಗೆ ತನಿಖೆ ನಡೆಸಿದ ಈ ಆಯೋಗದ ವರದಿ ಕರುಣಾನಿಧಿ, ವಿ.ಪಿ.ಸಿಂಗ್, ಚಂದ್ರಶೇಖರ್ ಮೊದಲಾದ ನಾಯಕರನ್ನು ಹೆಸರಿಸಿತು. 'ಸುದೀರ್ಘ ತನಿಖೆಯ' ನಂತರ ಇದನ್ನು ಮಾಡ ಲಾಯಿತು ಎಂದು ನಮಗೆ ತಿಳಿಸಲಾಯಿತು. ವರದಿಯನ್ನು ಸಂಸತ್ತಿನಲ್ಲಿ ಮಂಡಿಸುವ ಮೊದಲೇ ಇಂಗ್ಲೀಷ್ ನಿಯತಕಾಲಿಕವೊಂದಕ್ಕೆ ಕಳಿಸಿದ್ದರಿಂದ ಪರಿಸ್ಥಿತಿ ಇನ್ನಷ್ಟು ಹದಿಗೆಟ್ಟಿತು.

ಕೆಲವು ದಿನ ಸುಮ್ಮನೆ ಇದ್ದ ಕಾಂಗ್ರೆಸ್, ರಂಗದಿಂದ ಡಿಎಂಕೆಯನ್ನು ತೆಗೆದು ಹಾಕಬೇಕೆಂದು ಹೇಳಿತು. ವರದಿಯನ್ನು ಸಂಸತ್ತಿನಲ್ಲಿ ಇನ್ನೂ ಮಂಡಿಸದಿರುವಾಗಲೇ ಅದು ಹೀಗೆ ಮಾಡಿತು. ನವೆಂಬರ್ 20ರಂದು ವರದಿಯನ್ನು ಸರಕಾರ ಸಂಸತ್ತಿನಲ್ಲಿ ಮಂಡಿಸಿತು. ಆದರೆ ವರದಿ ಮೇಲೆ ಚರ್ಚೆ ಕಾಂಗ್ರೆಸ್‌ಗೆ ಬೇಕಿರಲಿಲ್ಲ. ಎಲ್‌ಟಿಟಿಇ ರಾಜಕೀಯ ಸಂಪರ್ಕದ ವಿಚಾರದಲ್ಲಿ ಚರ್ಚೆಯಿಂದ ಸಹಭಾಗಿಯೇ ಕಾಂಗ್ರೆಸ್ ಪಕ್ಷ ಆತಂಕಕ್ಕೆ ಒಳಗಾಗುತ್ತದೆ. ಡಿ.ಎಂ.ಕೆ ಒಂದು ಒಳ್ಳೆಯ ಬಲಿಪಶುವಾಗಿತ್ತು. ಕಾಂಗ್ರೆಸ್‌ನ ಈ ಬೇಡಿಕೆ ಸ್ವೀಕಾರಾರ್ಹವಾಗಿರಲಿಲ್ಲ. ಈ ವಿಚಾರದಲ್ಲೂ ಕಾಂಗ್ರೆಸ್‌ನಲ್ಲಿ ಭಿನ್ನಮತ ಉಂಟಾಯಿತು. ಅದರ ಅನೇಕ ಸಂಸತ್ ಸದಸ್ಯರಿಗೆ ಮತ್ತೊಮ್ಮೆ ಚುನಾವಣೆ ಎದುರಿಸುವ ಇಚ್ಛೆಯಿರಲಿಲ್ಲ. ಹಲವಾರು ಸಭೆಗಳ ನಂತರ ನವೆಂಬರ್ 28ರಂದು ರಾಷ್ಟ್ರಪತಿಯವರನ್ನು ಭೇಟಿ ಮಾಡಿದ ಕೇಸರಿ ಸರಕಾರಕ್ಕೆ ನೀಡಿದ್ದ ಬೆಂಬಲವನ್ನು ವಾಪಸ್ ಪಡೆದರು. ಅದೇ ಸಂಜೆ ಗುಜ್ರಾಲ್ ರಾಜಿನಾಮೆ ಕೊಟ್ಟರು.

ಲೋಕಸಭೆಯನ್ನು ವಿಸರ್ಜಿಸುವಂತೆ ಕಾಂಗ್ರೆಸ್ ಕೇಳಲಿಲ್ಲ. ಸ್ವತಃ ತಾನೇ ಸರಕಾರವನ್ನು ರಚಿಸಬೇಕೆಂಬುದು ಅದರ ಬಯಕೆಯಾಗಿತ್ತು.

(ಮುಂದುವರಿಯುವುದು)


ಕಳೆದ ಸಂಚಿಕೆಯಲ್ಲಿ ಕೇರಳ ವಿಧಾನ ಸಭೆಯಲ್ಲಿ ಎಲ್‌ಡಿಎಫ್ ಜಯಭೇರಿ, ಅಸ್ಸಾಂನಲ್ಲಿ ಕಾಂಗ್ರೆಸ್ ಧೂಳಿಪಟ, ತಮಿಳುನಾಡಿನಲ್ಲಿ ಡಿಎಂಕೆ ಅಧಿಕಾರಕ್ಕೆ, ಜ್ಯೋತಿಬಸುರವರ ಲಂಡನ್ ಪ್ರವಾಸ, ಮತ್ತೆ ಬಾಂಗ್ಲಾ ಪ್ರವಾಸ, ಐತಿಹಾಸಿಕ ನೀರು ಹಂಚಿಕೆ ಒಪ್ಪಂದ, ದೇವೇಗೌಡರ ಸರ್ಕಾರದ ಪತನ ಮತ್ತು ಜ್ಯೋತಿಬಸುರವರ ದ.ಆಫ್ರಿಕಾ ಪ್ರವಾಸದ ಬಗ್ಗೆ ಓದಿರುವಿರಿ. ಈ ಸಂಚಿಕೆಯಲ್ಲಿ ದ. ಆಫ್ರಿಕ ಪ್ರವಾಸದಲ್ಲಿ ಮಂಡೇಲಾ ಸಹಿತ ಅನೇಕರ ಸೌಹಾರ್ದ ಭೇಟಿ, ಜನತಾದಳದ ವಿಭಜನೆ, ಗುಜ್ರಾಲ್ ಸರ್ಕಾರದ ಪತನ, ಉತ್ತರ ಪ್ರದೇಶದ ಕಲ್ಯಾಣ್ ಸಿಂಗ್ ಸರ್ಕಾರಕ್ಕೆ ಮಾಯಾವತಿ ಬೆಂಬಲ ವಾಪಸ್ಸು ಈ ಬಗ್ಗೆ ಓದಿರಿ...

ಶುಭಾಶಯಗಳು

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಹಾವೇರಿ ಶಾಖೆಯ ಕಾರ್ಯದರ್ಶಿ ಕಾಮ್ರೇಡ್ ರುದ್ರಪ್ಪಸಂಗಪ್ಪ ಜಾಬಿನ್ ಅವರ ಮಕ್ಕಳಾದ ಶಂಕರರಾಜ ಮತ್ತು ಬಸವರಾಜ ಅವರು ಮೇ 20 ರಂದು ಅನುಕ್ರಮವಾಗಿ ಗೌರಮ್ಮ ಹಾಗೂ ಮಮತಾರೊಂದಿಗೆ ವಿವಾಹವಾಗಿರುತ್ತಾರೆ. ಈ ಸಂತಸದ ಸವಿನೆನಪಿಗಾಗಿ ಕಾಮ್ರೇಡ್ ಜಾಬಿನ್ ಅವರು 'ಐಕ್ಯರಂಗ'ಕ್ಕೆ ಐದುನೂರು ರೂಪಾಯಿಗಳನ್ನು ದೇಣಿಗೆ ನೀಡಿದ್ದಾರೆ. ನೂತನ ದಂಪತಿಗಳಿಗೆ ಐಕ್ಯರಂಗ ಹಾರ್ದಿಕ ಶುಭಾಶಯಗಳನ್ನು ಕೋರುತ್ತದೆ.

ಇನ್ನಿಲ್ಲವಾದ ಕಾಮ್ರೇಡ್ ಸಿ.ಎನ್.

ಅಗಲಿದ ನಾಯಕನಿಗೆ ಗೌರವಪೂರ್ಣ ಶ್ರದ್ಧಾಂಜಲಿ



ಮಂಗಳೂರಿನಲ್ಲಿ ಅಂತಿಮ ವಿದಾಯ

ಮೇ 26, 2002 ಸಂಜೆ 5 ಘಂಟೆ. ಇತ್ತ ರಾಜ್ಯದ ರಾಜದಾನಿ ಬೆಂಗಳೂರಿನಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನಾಲ್ಕು ದಿನಗಳ ಕೇಂದ್ರ ಸಮಿತಿ ಸಭೆ ಮುಕ್ತಾಯಗೊಂಡು ಬಾರಿ ಬಹಿರಂಗ ಸಭೆ ಸೇರಿತ್ತು. ಸಹಸ್ರಾರು ಜನ ಪಕ್ಷದ ದಿಗ್ಗಜರ ಭಾಷಣ ಕೇಳುತ್ತಿದ್ದಂತೆ, ಅತ್ತ ಕರಾವಳಿ ತೀರದ ಮಂಗಳೂರಿನ ಬೋಳಾರದ ಪಕ್ಷದ ಕಛೇರಿಯಲ್ಲಿ ಹಿರಿಯ ಕ್ರಾಂತಿಕಾರಿ ನಾಯಕ ಕಾಂ.ಸಿ.ನಂಜುಂಡಪ್ಪನವರು ಕೊನೆಯುಸಿರೆಳೆದರು. ಕಾಂ.ಸಿ.ನಂಜುಂಡಪ್ಪರವರ ನಿದನದ ವಾರ್ತೆ ಬಹಿರಂಗ ಸಭೆಯ ವೇದಿಕೆಗೆ ತಲುಪುತ್ತಿದ್ದಂತೆ ನಾಯಕರಲ್ಲಿ ಅಘಾತ ಉಂಟು ಮಾಡಿತು. ಕಾಂ.ಜ್ಯೋತಿ ಬಸುರವರ ಭಾಷಣ ಮುಗಿಯುತ್ತಿದ್ದಂತೆ ಎದ್ದು ನಿಂತ ಪಕ್ಷದ ರಾಜ್ಯ ಕಾರ್ಯದರ್ಶಿ ಕಾಂ.ಸೂರ್ಯನಾರಾಯಣರಾವ್ ಈ ವಿಷಯವನ್ನು ದುಖಃ ತುಂಬಿದ ಹೃದಯದಿಂದ ಸಭೆಗೆ ತಿಳಿಸಿದಾಗ ಸಿ.ಎನ್.ರವರನ್ನು ಹತ್ತಿರದಿಂದ ಬಲ್ಲ, ಅವರೊಡನೆ ದುಡಿದ ಹಲವಾರು ಸಂಗಾತಿಗಳಿಗೆ ಈ ಸುದ್ದಿ ಬರಸಿಡಿಲಿನಂತೆ ಎರಗಿತು. ಸಿ.ಎನ್.ರವರ ಸರಳ, ನಿಸ್ವಾರ್ಥ ಜೀವನ, ಪಕ್ಷ ಮತ್ತು ಕಾರ್ಮಿಕ ವರ್ಗಕ್ಕಾಗಿ ಅವರು ಮಾಡಿದ ತ್ಯಾಗ ಇವುಗಳನ್ನು ಕಾಂ.ಸೂರಿ ನೆನಪಿಸಿದರು ಸಭೆಯಲ್ಲಿದ್ದವರೆಲ್ಲ ಎದ್ದುನಿಂತು ಕೆಲಕಾಲ ಮೌನ ಆಚರಿಸುವುದರೊಂದಿಗೆ ಕಾಂ.ನಂಜುಡಪ್ಪನವರಿಗೆ ಬಾವಪೂರ್ಣ ಶ್ರದ್ಧಾಂಜಲಿ ಅರ್ಪಿಸಿತು.

ಮಂಗಳೂರಿನಲ್ಲಿ ಕರ್ನಾಟಕದ ದುಡಿಯುವ ವರ್ಗದ ಚಳುವಳಿಗೆ ಮಹತ್ವದ ಕೊಡುಗೆ ನೀಡಿದ ಕಾಂ.ಸಿ.ನಂಜುಂಡಪ್ಪನವರ ನಿದನದ ಸುದ್ದಿ ಮಂಗಳೂರಿನ ಕಾರ್ಮಿಕ ವರ್ಗಕ್ಕೆ ಆಘಾತ ವುಂಟುಮಾಡಿತು. ತನ್ನ ಜೀವಮಾನದುದ್ದಕ್ಕೂ ಪಕ್ಷವನ್ನೇ ತನ್ನ ಬದುಕನ್ನಾಗಿಸಿಕೊಂಡ ಕಾಂ.ಸಿ.ಎನ್ ತನ್ನ ಸಾವನ್ನೂ ಪಕ್ಷದ ಕಛೇರಿಯಲ್ಲೇ ಅಪ್ಪಿಕೊಂಡದ್ದು ಈ ದೀಮಂತ ನಾಯಕ ಅಗಲುವಿಕೆಯ ಸುದ್ದಿ ತಿಳಿಯುತ್ತಿದ್ದಂತೆ ನೂರಾರು ಮಂದಿ ಹಿತೈಷಿಗಳು, ಅಭಿಮಾನಿಗಳು, ಪ್ರಜಾಪ್ರಭುತ್ವ ಚಳುವಳಿಯ ವಿವಿಧ ನಾಯಕರು ಬೋಳಾರದ ಎ.ಕೆ.ಜಿ ಭವನಕ್ಕೆ ದಾವಿಸತೊಡಗಿದ ಮರುದಿನದ ಎಲ್ಲಾ ಪತ್ರಿಕೆಗಳಲ್ಲೂ ಈ ಸುದ್ದಿ ಪ್ರಾಮುಖ್ಯ ಪಡೆದಿತ್ತು, ದೂರದರ್ಶನ ಚಾನಲ್‌ಗಳು ಈ ಸುದ್ದಿ ಬಿತ್ತರಿಸಿದವು.

ಮೇ 2ರಂದು ಬೆಳಿಗ್ಗೆ 9 ಗಂಟೆಗೆ ಪಕ್ಷದ ಕಛೇರಿಯಲ್ಲೇ ಅಂತಿಮ ದರ್ಶನಕ್ಕಾಗಿ ವ್ಯವಸ್ಥೆಗೊಳಿಸಲಾಯ್ತು. ಸಿ.ಎನ್‌ರವರ ನಿದನದ ವಾರ್ತೆ ಕೇಳಿದೊಡನೆ ಮಂಗಳೂರಿಗೆ ಬಂದ ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ. ವಿ.ಜೆ.ಕೆ ನಾಯರ್, ಕಾಂ.ಜಿ.ಎನ್ ನಾಗರಾಜ್, ಕಾಂ.ಕೆ.ಶ್ರಿಯಾನ್, ಕಾಂ.ಬಿ.ಮಾದವ್ ಇವರು ಸಿ.ಎನ್.ರವರ ಪಾರ್ಥಿವ ಶರೀರದ ಮೇಲೆ ಕೆಂಬಾವುಟ ಹಾಸಿ ಕೆಂಪು ವಂದನೆ ಸಲ್ಲಿಸಿದರು. ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳಿಂದ ಪಕ್ಷದ, ಸಾಮೂಹಿಕ ಸಂಘಟನೆಗಳ ಮತ್ತು ಇತರೇ ನೂರಾರು ಕಾರ್ಯಕರ್ತರು ಎಕೆ.ಜಿ ಭವನಕ್ಕೆ ದಾವಿಸಿ ಕಾಂ.ಸಿ.ಎನ್ ರವರ ಅಂತಿಮ ದರ್ಶನ ಪಡೆದರು.

ನಂತರ ನದಿಗುಡ್ಡೆ ಚಿತಾಗಾರಕ್ಕೆ ಶವಯಾತ್ರೆ ನಡೆಯಿತು. ನೂರಾರು ಜನರು ಇದನ್ನು ಹಿಂಬಾಲಿಸಿದರು. ಚಿತೆಗೆ ವಿ.ಜೆ.ಕೆ ನಾಯರ್, ಜಿ.ಎನ್.ನಾಗರಾಜ್, ಬಿ.ಮಾದವ್, ಕೆ.ಆರ್.ಶ್ರಿಯಾನ್ ಸ್ಪರ್ಶ ಮಾಡುತ್ತಿದ್ದಂತೆಯೇ ನೆರೆದ ನೂರಾರು ಮಂದಿ ಲಾಲ್ ಸಲಾಂ ಕಾಂ.ಸಿ.ಎನ್'' "ಕಾಂ.ಸಿ.ಎನ್‌ಗೆ ಕೆಂಪು ವಂದನೆಗಳು" ಎಂಬ ಮುಗಿಲು ಮುಟ್ಟುವ ಘೋಷಣೆಯೊಂದಿಗೆ ವಿದಾಯ ಹೇಳಿದರು. ಸುಮಾರು ಐದು ದಶಕಗಳ ಸಿ.ಎನ್.ರವರ ಹೋರಾಟದ ಬದುಕಿಗೆ ಕೊನೆಗೂ ತೆರೆ ಬಿದ್ದಿತು.

ಚಿತಾಗಾರದ ಬಯಲಲ್ಲಿ ಅಗಲಿದ ಸಂಗಾತಿಗೆ ಗೌರವ ಸಲ್ಲಿಸುವ ಸಭೆ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಕೆ.ಆರ್. ಶ್ರೀಯಾನ್‌ರವರು ಮೊದಲಿಗೆ ತಮ್ಮ ಮತ್ತು ಸಿ.ಎನ್‌ರವರ ಆತ್ಮೀಯ ಸಂಭಂದವನ್ನು ನೆನಪಿಸಿಕೊಂಡು, ಸಿ.ಎನರವರ ನಿಸ್ವಾರ್ಥ, ತ್ಯಾಗಮಯ ಬದುಕಿನ ಚಿತ್ರಣವನ್ನು ಎಳೆಎಳೆಯಾಗಿ ಬಿಡಿಸಿದ್ದರು. ದಕ್ಷಿಣಕನ್ನಡ ಜಿಲ್ಲೆಯಲ್ಲಿ 1973ರಿಂದ 197ರವರೆಗೂ ಜಿಲ್ಲಾ ಸಮಿತಿ ಸದಸ್ಯರಾಗಿ ಕೆಲಸ ಮಾಡಿದ್ದು, ಮಾರ್ಕ್ಸ್‌ವಾದಿ ಶಾಲೆಯೊಂದರ ಮುಖ್ಯಸ್ಥರಾಗಿ ದುಡಿದದ್ದನ್ನು ವಿವರಿಸುತ್ತಾ ದ.ಕ.ಜಿಲ್ಲೆಗೆ ಅವರಿಗಿರುವ ಹತ್ತಿರದ ಸಂಬಂಧವನ್ನು ನೆನಪಿಸಿಕೊಂಡರು.

ಬಂದುಬಳಗವಿಲ್ಲದೇ ಮಂಗಳೂರಿನಲ್ಲಿ ಗ್ರಾಮವೊಂದರ ಘೋಷಣೆಯಲ್ಲಿ ಬೆಳೆದದ್ದು ಅವರು ಶಿಕ್ಷಣ ಪಡೆದ ಬಗ್ಗೆ ಸ್ಮರಿಸಿಕೊಂಡ ಕಾಂ.ವಿ.ಜೆ.ಕೆ.ನಾಯರ್, ಸಿ.ಎನ್‌ರವರ ಪಕ್ಷವೇ ತಮ್ಮ ಕುಟುಂಬವೆಂದು ಬಾಳಿದರು ಎಂದರು. ಪುಸ್ತಕಗಳ ಅಧ್ಯಯನ ಮಾಡುತ್ತಿದ್ದ ಬಗ್ಗೆ ನೆನಪಿಸಿಕೊಳ್ಳುತ್ತಾ ಪಕ್ಷದ ರಾಜ್ಯ ಸಮಿತಿ ಮತ್ತು ಸಿ.ಐ.ಟಿಯು ರಾಜ್ಯ ಸಮಿತಿ ಪರವಾಗಿ ಅಗಲಿದ ಸಂಗಾತಿಗೆ ಕ್ರಾಂತಿಕಾರಿ ವಂದನೆಗಳನ್ನು ಅರ್ಪಿಸಿದ ಅವರು, ಪಕ್ಷಕ್ಕಾಗಿ ಎಲ್ಲವನ್ನೂ ತ್ಯಾಗ ಮಾಡಿದ ಅವರು ನಿಜವಾದ ಕಮ್ಯುನಿಸ್ಟ್ ಆಗಿದ್ದರು.

ಮತ್ತೊಬ್ಬ ಮುಖಂಡರಾದ ಕಾಂ. ಜಿ.ಎನ್.ನಾಗರಾಜ್‌ರವರು ಮಾತನಾಡುತ್ತಾ, ಇತ್ತೀಚಿನ ದಿನಗಳಲ್ಲಿ ಸಮಾಜದಲ್ಲಿ ಮತ್ತು ಪಕ್ಷದಲ್ಲಿ ಬಾರಿ ಕಡಿಮೆಯಾಗುತ್ತಿರುವ ಮೂರು ಮುಖ್ಯ ಗುಣಗಳಾದ , ನಿಸ್ವಾರ್ಥ ಸೇವೆ, ಅಧ್ಯಯನಶೀಲತೆ ಮತ್ತು ಪುಸ್ತಕದ ಸಂಗ್ರಹಣೆ ಅದನ್ನು ಸಾಕಷ್ಟು ಜನರಿಗೆ ಮಧ್ಯಮ ವರ್ಗದ, ಭ್ಯಾಂಕ್-ಎಲ್.ಪಿ.ಸಿ ಯಂತಹ ಸಂಸ್ಥೆಗಳಲ್ಲಿ ಕೆಲಸ ಮಾಡುವಂತವರಿಗೆ ಓದಿಸಿ ಅವರನ್ನು ಬೆಳೆಸಲು ಅವರನ್ನು ಪಕ್ಷದ ಕಡೆ ಸೆಳೆಯುವ ಕೆಲಸ ಅವರ ಈ ಮೂರು ಮುಖ್ಯ ಗುಣಗಳನ್ನು ಸಂಗಾತಿಗಳು ಕಲಿಯಬೇಕಾಗಿದೆ ಎಂದರು.

ಕಾಂ.ಬಿ. ಮಾದವರವರು ಮಾತನಾಡುತ್ತಾ ಮಧ್ಯಮ ವರ್ಗದ ಜನತೆಯ ಜೊತೆ ಬಹಳ ಜಾಣ್ಮೆಯಿಂದ ಕೆಲಸ ಮಾಡುತ್ತಿದ್ದರು. ತಮಗೂ ಕೂಡ ಅನೇಕ ಪುಸ್ತಕಗಳನ್ನು ಅಧ್ಯಯನ ಮಾಡಲು ತಿಳಿಸುತ್ತಿದ್ದರು. ಹಲವು ಬಾರಿ ತಾವೆ ಪುಸ್ತಕಗಳನ್ನು ಕಳುಹಿಸುತ್ತಿದ್ದರು ಎಂದರು.

ಉಡುಪಿ ಜಿಲ್ಲಾ ಸಮಿತಿ ಕಾರ್ಯದರ್ಶಿ ಕಾಂ.ಶಂಕರರವರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಿ.ಎನ್.ರವರು ಕೆಲಸ ಮಾಡಿದ ದಿನಗಳ ಅವರ ಸಂಬಂಧವನ್ನು ನೆನಪಿಸಿಕೊಂಡರು. ನಂತರ ಕಾಂ. ಸುಕುಮಾರ್‌ರವರು ಮಾತನಾಡುತ್ತಾ ಪಕ್ಷಕ್ಕೆ ತಾನು ಪೂರ್ಣಕಾಲಂ ಕಾರ್ಯಕರ್ತನಾಗುವುದಕ್ಕೆ ಮೊದಲೇ ಸಿ.ಎನ್.ರವರ ಸಂಪರ್ಕವಿದ್ದುದು ಕೋಟಿ ಕಾರ್ಮಿಕರ ಸಂಘಟನೆಗಾಗಿ ಆರಂಭದ ದಿನಗಳಲ್ಲಿ ಗುಡ್ಡಬೆಟ್ಟಗಳನ್ನು ಹತ್ತಿ ಸುತ್ತಾಡಿ ಸಂಘಟನೆ ಮಾಡಿದ ದಿನಗಳನ್ನು ನೆನಪಿಸಿಕೊಂಡರು.

ಕಾಂ.ಶಿವಶಂಕರ್‌ಮಾತನಾಡಿ ಶ್ರದ್ಧಾಂಜಲಿ ಅರ್ಪಿಸಿದರು. ವಸಂತ ಆಚಾರ್ ವಂದನಾರ್ಪಣೆ ಮಾಡಿದರು.

ಕಾಂ. ಸಿ.ಎನ್‌ರವರಿಗೆ ಶ್ರದ್ಧಾಂಜಲಿ ಸಲ್ಲಿಸಲು ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಬಿ.ಕೆ.ಕೃಷ್ಣಪ್ಪ, ಜನತಾದಳ(ಜಾ) ನಾಯಕರು ಅಖಿಲ ಭಾರತ ವಕೀಲರ ಸಂಘದ ಯಶವಂತ ಮರೋಳಿ, ಬಿ.ಇ.ಎಫ್.ಐ ನ ಬಿ.ಎಂ.ಮಾದವ, ಜೆ.ಎಮ್.ಎಸ್‌ನ ಹೇಮಲತಾ, ಪ್ರಮಿಳಾ ವಿಮಾ ನೌಕರರ ಸಂಘದ ನಾಗೇಶಕುಮಾರ್, ಡಿ.ವೈ.ಎಫ.ಐನ ಸುನಿಲ್‌ಕುಮರ್ ಬಜಾಲ್, ಕೃಷ್ಣಪ್ಪ ಕೊಂಚಾಡಿ, ಸಿಐಟಿಯುನ ಯಾದವಶೆಟ್ಟಿ, ವಿಶ್ವನಾಥ್‌ರೈ ಮುಂತಾದವರು ಆಗಮಿಸಿದ್ದರು.

ಕಾಮ್ರೇಡ್ ಸಿ. ನಂಜುಂಡಪ್ಪನವರ ಅಗಲಿಕೆ ದುಡಿವ ವರ್ಗಕ್ಕೆ ತುಂಬಲಾರದ ನಷ್ಟ

ಸಿಪಿಐ(ಎಂ)ನ ಹಿರಿಯ ನಾಯಕ ಸಿ.ನಂಜುಂಡಪ್ಪನವರು 26-05-2002ರಂದು ಮಂಗಳೂರಿನ ಪಕ್ಷದ ಕಛೇರಿಯಲ್ಲಿ ತಮ್ಮ 62ನೇ ವಯಸ್ಸಿನಲ್ಲಿ ನಿಧನರಾದರು. ಅವರು ಹಲವು ಕಾಲದಿಂದ ಅಸೌಖ್ಯದಿಂದ ಬಳಲುತ್ತಿದ್ದರು.

ಸಂಗಾತಿ ಸಿ. ನಂಜುಂಡಪ್ಪನವರು ಮಾರ್ಕ್ಸ್‌ವಾದದತ್ತ ಆಕರ್ಷಿತರಾಗಿ 1968ರಲ್ಲಿ 1965ರಿಂದ ಸಿಪಿಐ(ಎಂ)ನ ಸದಸ್ಯರಾಗಿ, ಚಳುವಳಿಗೆ ದುಡಿದಿದ್ದಾರೆ. ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾಗಿ 1997ರವರೆಗೆ , ರಾಜ್ಯಸಮಿತಿಯ ಸದಸ್ಯರಾಗಿ 2002ರವರೆಗೆ ದುಡಿದಿದ್ದಾರೆ. 2002ರ ಜನವರಿಯಲ್ಲಿ ನಡೆದ 17 ನೇ ರಾಜ್ಯ ಸಮ್ಮೇಳನದಲ್ಲಿ ಅನಾರೋಗ್ಯ ನಿಮಿತ್ತ ಬಿಡುಗಡೆಯಾದರು.

ಕಾರ್ಮಿಕ ಚಳುವಳಿಯಲ್ಲಿ ಪ್ರಮುಖ ಪಾತ್ರ

ರಾಜ್ಯ ಕಾರ್ಯದರ್ಶಿ ಎಸ್.ಸೂರ್ಯನಾರಾಯಣ ರಾವ್ ಶ್ರದ್ಧಾಂಜಲಿ

ಕೇಂದ್ರ ಸರ್ಕಾರದ ನೌಕರಿಗೆ (ಟೆಲಿಕಾಂ) ರಾಜೀನಾಮೆ ಕೊಟ್ಟು ಕಮ್ಯುನಿಸ್ಟ್ ಪಕ್ಷದಲ್ಲಿ ಪೂರ್ಣಕಾಲದ ಕಾರ್ಯಕರ್ತರಾಗಿ ದುಡಿಯುತ್ತಿದ್ದರು.

ಇಡೀ ಜೀವನವನ್ನೇ ಕಮ್ಯುನಿಸ್ಟ್ ಚಳುವಳಿಗೆ ಮುಡುಪಾಗಿ ಇಟ್ಟಿದ್ದ ನಂಜುಂಡಪ್ಪನವರು, ಕೋಲಾರಜಿಲ್ಲೆಯ ಶಿಡ್ಲಘಟ್ಟದ ಮುತ್ತೂರು ಗ್ರಾಮದಲ್ಲಿ ಜನಿಸಿದರು. ಅವರ ಎರಡು ಮನೆಗಳು, ಮಾವಿನ ಮರಗಳ ತೋಪು, ಒಂದುವರೆ ಎಕರೆ ಹೊಲವನ್ನು ಅದರ ಅನುಭೋಗದಲ್ಲಿ ಇದ್ದವರಿಗೆ 1959ರಲ್ಲಿಯೇ ಮುಫತ್ತಾಗಿ ಕೊಟ್ಟು ಕಮ್ಯುನಿಸ್ಟ್ ಪಕ್ಷಕ್ಕೆ ದುಡಿಯಲು ಮುಂದಾದರು.

ನಿರ್ವಹಿಸಿದ ಸಿ.ಎನ್ ರವರು ,ಸಿಐಟಿಯುವಿನ ರಾಜ್ಯ ಸಮಿತಿಯ ಪ್ರಧಾನ ಕಾರ್ಯದರ್ಶಿಯಾಗಿ ,ಉಪಾದ್ಯಕ್ಷರಾಗಿ, ಕೇಂದ್ರ ಕಾರ್ಯಕಾರಿ ಸಮಿತಿಯ ಸದಸ್ಯರಾಗಿದ್ದರು. ಮಾತ್ರವಲ್ಲ ಪ್ಲಾಂಟೇಶನ್ ಕೆಲಸಗಾರರ ರಾಜ್ಯ ಅಧ್ಯಕ್ಷರೂ ಅಖಿಲ ಭಾರತ ಉಪಾಧ್ಯಕ್ಷರೂ, ಖಜಾಂಚಿಯಾಗಿಯೂ ಅಲ್ಲದೇ 'ಕಾಫಿ ಮಂಡಳಿ' ಗೆ ಎರಡು ಅವಧಿಗೆ, ಪ್ರಾವಿಡೆಂಟ್ ಫಂಡ್ ಸಮಿತಿಗೆ ಸದಸ್ಯರಾಗಿ ಸೇವೆಸಲ್ಲಿಸಿದ್ದಾರೆ.

ಸಿಐಟಿಯುವಿನ ನಿಯೋಗದ ಸದಸ್ಯರಾಗಿ ಚೀನಾ, ಥೈಲಾಂಡ್, ಬರ್ಮಾ ದೇಶಗಳಲ್ಲಿ ಪ್ರವಾಸ ಮಾಡಿದ್ದಾರೆ. ಮಾರ್ಕ್ಸ್‌ವಾದ ಲೆನಿನ್

ಪುಟ 8 ಕ್ಕೆ

ಅಪರೂಪದ ಗುಣಗಳ ಕ್ರಾಂತಿಕಾರಿ ಸಿ.ಎನ್‌ರಿಗೆ ಐಕ್ಯರಂಗ ಶ್ರದ್ಧಾಂಜಲಿ

ದುಡಿಯುವ ವರ್ಗದ ಹಿರಿಯ ನಾಯಕ, ಸಿ.ಪಿ.ಐ(ಎಂ)ನ ರಾಜ್ಯ ಸಮಿತಿಯ ಸದಸ್ಯ ರಾಗಿದ್ದ ಕಾಮ್ರೇಡ್ ಸಿ.ನಂಜುಂಡಪ್ಪನವರ ನಿಧನ ದಿಗ್ಭ್ರಮೆಯ ಅತೀವ ಶೋಕವನ್ನು ತಂದಿದೆ. ಪತ್ರಿಕೆಯ ಸಂಪಾದಕಮಂಡಳಿಯ ಸದಸ್ಯರಾಗಿದ್ದ ಸಿ.ಎನ್‌ರವರ ನಿಧನಕ್ಕೆ ತೀವ್ರ ಸಂತಾಪ ವ್ಯಕ್ತ ಪಡಿಸಿ, ಶ್ರದ್ಧಾಂಜಲಿಯನ್ನು ಐಕ್ಯರಂಗ ಸಲ್ಲಿಸಿದೆ.

ಸಿ.ಎನ್‌ರಂಥ ನಾಯಕರು ಅಪರೂಪ. ಅವರು ಇಡೀ ಜೀವನವನ್ನೇ ದುಡಿವ ವರ್ಗದ ವಿಮೋಚನೆಯ, ಸಮಾಜದ ಬದಲಾವಣೆಯ ಚಳುವಳಿಗೆ ಮೀಸಲಿರಿಸಿದವರು ಹಲವಾರು ಕಷ್ಟ-ನಷ್ಟಗಳನ್ನು ಎದುರಿಸಿ ನಿಂತರು. ಆಳವಾದ ಅಧ್ಯಯನ, ವೈವಿಧ್ಯಮಯ ವಿಷಯಗಳ ಅರಿವು, ಅತೀವ ಕಾಳಜಿಯಿಂದ ದುಡಿವ ಜನತೆಯ ಹಾಗೂ ಹೋರಾಟಗಾರರ ಸೈದ್ಧಾಂತಿಕ ಅರಿವನ್ನು ಹೆಚ್ಚಿಸಲು ಉಪನ್ಯಾಸ, ಸಭೆಗಳು ಮುಖ್ಯವಾಗಿ ಬರಹಗಳಿಂದ, ವೈಯಕ್ತಿಕ ಚರ್ಚೆಯ ಮೂಲಕ ಜಾಗೃತಿಗಾಗಿ ಶ್ರಮಿಸುತ್ತಿದ್ದರು. ಐಕ್ಯರಂಗದ ಬೆಳವಣಿಗೆಯಲ್ಲಿ ಅಪಾರ ಕೊಡುಗೆಯು ಗಮನಾರ್ಹವಾದುದು. ಇಂತಹ ಅಪರೂಪದ ಗುಣಗಳ ಹಿರಿಯ ನಾಯಕನಿಗೆ ಐಕ್ಯರಂಗ ಕ್ರಾಂತಿಕಾರಿ ಶ್ರದ್ಧಾಂಜಲಿ ಸಲ್ಲಿಸುತ್ತಿದೆ.

ಭೂಮಾಲೀಕರನ್ನು ಮಣಿಸಿದ ಕೂಲಿಕಾರರು

ತುಂಗಾಭದ್ರಾ ನದಿಯು ನೀರಿನಿಂದ ಸೊಂಪಾಗಿ ಸಂಪತ್ತಿನ ಗಂಟು ಕಟ್ಟಿದ ಭೂಮಾಲೀಕರು ಕೂಲಿಕಾರರ ಮೇಲೆ ದಬ್ಬಾಳಿಕೆ ನಡೆಸಿದಾಗ ಅದನ್ನು ಪ್ರತಿಭಟಿಸಿದ ಕೂಲಿಕಾರರು ಭೂಮಾಲೀಕರನ್ನು ಮಣಿಸಿದರು. ಸಿರಿಗೆರೆಯ ಕೂಲಿಕಾರರಲ್ಲಿ ಬೆಳೆದ ಆತ್ಮವಿಶ್ವಾಸ ಹಾಗೂ ಒಗ್ಗಟ್ಟಿನ ಬಲದ ಬಗ್ಗೆ ಒಂದು ವರದಿ

ಎನ್.ಕುಮಾರ್, ಸಿರಿಗೆರೆ

ಬಳ್ಳಾರಿಯ ಸಿರುಗುಪ್ಪ ತಾ। ಸಿರಿಗೇರಿಯಲ್ಲಿ ಸುಮಾರು 100ಕ್ಕೆ 60ರಷ್ಟು ಕೂಲಿಕಾರರೇ ಇದ್ದಾರೆ. ಇನ್ನುಳಿದ ವರ್ಗ ವಿಭಾಗದಲ್ಲಿ 2/3 ಮಾತ್ರ ಭೂಮಾಲೀಕರು. ಇವರು ತಮ್ಮ ಸಂಬಳದಾಳುಗಳಿಂದಲೇ ಕೊನೆವರೆಗೂ ಕೆಲಸ ನಿರ್ವಹಿಸಿಕೊಳ್ಳುವುದು. ಶ್ರೀಮಂತ ರೈತರು ಹೊಲಗದ್ದೆಗಳನ್ನು ಬಿತ್ತನೆ ಮಾಡಿ ಬಿಟ್ಟು ಖಾಯಂ ಕೂಲಿಯಾಳುಗಳನ್ನೇ ನೇಮಕಮಾಡಿರುವುದು, ಇನ್ನು ಮಧ್ಯಮ ರೈತರು ತಾವೂ ಸ್ವಲ್ಪ ಭೂಮಿ ಮಾಡಿಕೊಂಡು, ಭೂರಹಿತರಿಗೆ, ಕ್ರಿಮಿನಾಶಕ, ಗೊಬ್ಬರ, ಹಣದ ರೂಪ ಇಲ್ಲವೇ ಉದ್ರಿ ಮೂಲಕ ಸಾಲ ನೀಡಿ ಬಡ್ಡಿಗೆ ಬಡ್ಡಿ ಚಕ್ರಬಡ್ಡಿ ಹಾಕಿ ಸಾತು ನೀಡುವುದು, ಮತ್ತೆ ಬಡರೈತರ ಪರಿಸ್ಥಿತಿಯಂತೂ ಅಷ್ಟಕ್ಕಷ್ಟೇ ಇದೆ. ಸಾಲವೂ ಹುಟ್ಟದೇ, ಉದ್ರಿ ಗೊಬ್ಬರವೂ ಸಿಗದೆ ಭೂಮಿ ಬೀಳುಬಿಡುವುದು, ಇಲ್ಲಾ ಅಗ್ಗದರದಲ್ಲಿ ಮಾರಾಟ ಮಾಡಿ, ಕೂಲಿಕಾರರ ವರ್ಗಕ್ಕೆ ಸೇರುವುದು. ಈ ಭಾಗದಲ್ಲಿ 100ಕ್ಕೆ 40ರಷ್ಟು ಮಾತ್ರ ನೀರಾವರಿ ಇನ್ನು 60ರಷ್ಟು ಭೂಮಿ ಮಳೆಯನ್ನೇ ಅವಲಂಬಿಸಿರುವುದು ಅನಿವಾರ್ಯ.

ಕಠಿಣ ದುಡಿಮೆಯ ಕೂಲಿಕಾರರು

ಈ ಸಿರಿಗೇರಿಯಲ್ಲಿ ಯಥೇಚ್ಛತ ಸಂಖ್ಯೆಯಲ್ಲಿರುವ ಕೂಲಿಕಾರರು ಇಡೀ ಸಿರುಗುಪ್ಪ ತಾಲ್ಲೂಕಿಗೇ ಪ್ರಸಿದ್ಧಿ ಯಾಕೆಂದರೆ ಹಿಡಿದ ಕೆಲಸ ಸವಾಲೆಸೆದಂತೆ ಮಾಡಿ ಮುಗಿಸುವುದು ಇವರ ಕಲೆ, ಆದ್ದರಿಂದ ನಮ್ಮ ಊರಲ್ಲಿ ಕೆಲಸ ಸರಿಯಾಗಿ ಸಿಗದೆ ಬೇರೆ ಬೇರೆ ಊರುಗಳನ್ನೇ ಅವಲಂಬಿಸಿದ್ದು, ಅದರಲ್ಲಿ ಈ ಊರಿನ ಕೂಲಿಕಾರರಿಗೆ ಸಾಕಷ್ಟು ದಿನ ಅನ್ನ ನೀಡುವ ತಾಣವೆಂದರೆ ಪಕ್ಕದಲ್ಲಿನ ನಡವಿ ಗ್ರಾಮ. ಮಾಲೀಕ್ತರು 2 ತಿಂಗಳು ಮುಂಚಿತವಾಗಿಯೇ ಅಗ್ಗ ದರದ ಗುತ್ತಿಗೆಯಲ್ಲಿ ರೇಟು ಕಟ್ಟಿ ಅಡ್ವಾನ್ಸ್ ನೀಡುತ್ತಾರೆ. ಈ ನಡುವೆ ಗ್ರಾಮದಲ್ಲಿ ಹೊಳೆ ನಿರಂತರವಾಗಿ ಹರಿಯುವುದರಿಂದ, ನೀರಿನ ಕೊರತೆಯಿಲ್ಲದ್ದರಿಂದ ಆಂಧ್ರ ಪ್ರದೇಶದಿಂದ ಅನೇಕ ಬಂಢವಾಳಗಾರರು ಬಂದು, ಬಡರೈತರ ಭೂಮಿಯನ್ನು ಅತೀ ಕಡಿಮೆ ದರದಲ್ಲಿ ಖರೀದಿಸಿ ದೊಡ್ಡ ದೊಡ್ಡ ಪೈಪುಗಳೊಂದಿಗೆ ಏತ ನೀರಾವರಿ ಮಾಡಿಕೊಂಡು, ದೌರ್ಜನ್ಯ ನಡೆಸುತ್ತಿದ್ದಾರೆ.

ಇವರಲ್ಲಿ ನಾಗೇಶ್ವರರಾವ್ ಎನ್ನುವ ಒಬ್ಬ ಭೂಮಾಲಿಕ. ಈತನಿಗೆ 55 ಎಕರೆ ನೀರಾವರಿ ಜಮೀನು, ಅಕ್ಕಿ ಮಿಲ್ಲಿನಲ್ಲಿ ಪಾಲುದಾರ. ಅನೇಕ ಸಾರಿ ಕೂಲಿಕಾರರ ಮೇಲೆ ಹಲ್ಲೆ ದೌರ್ಜನ್ಯ ನಡೆಸಿದ್ದಲ್ಲದೆ ಇತ್ತೀಚೆಗೆ 50 ಜನ ಕೂಲಿಕಾರರು ತಮ್ಮ ಗದ್ದೆ ಕೋಯ್ಲು ಮಾಡಲು ಹೋದಾಗ, ಬರೀ ನೆಲ್ಲುಕಡ್ಡಿ ಚೆಲ್ಲಾಪಿಲ್ಲಿ ಮಾಡಿದ್ದಕ್ಕೆ ದೊಡ್ಡ ಗಲಭೆಯನ್ನೇ ಸೃಷ್ಟಿಸಿದರು. ಕೂಲಿಕಾರರು ತುರ್ತಾಗಿ ಕೆಲಸ ನಿರ್ವಹಿಸುವಾಗ ಚೆಲ್ಲಾಪಿಲ್ಲಿಯಾದ ನೆಲ್ಲು ಕಡ್ಡಿಯನ್ನು ಕಂಡ ನಾಗೇಶ್ವರರಾವ್‌ರ ಮಗ ಬಾಬೂರಾವ್ ಎಂಬುವವರು ಕೆಂಡಕಾರಿ ಕಣ್ಣು ಕೆಂಪಾಗಿಸಿಕೊಂಡು ಅಲ್ಲೇ ಪಕ್ಕದಲ್ಲಿದ್ದ ಕೂಲಿಕಾರರಾದ ಆದಿಬಸಪ್ಪ ಮತ್ತು ಹುಸೇನಿ, ಗಾದ್ಲಿಂಗಪ್ಪ ನವರನ್ನು ಕರೆದು "ದಡಾರ್"ನೆ ಕಪಾಳಕ್ಕೆ ಹೊಡೆದು 'ಲೇ ಕೂಲಿ ಮಾಡೋ ಸೂ....... ಮಕ್ಳ, ಆ ರಿಸ್ಗೊಂಡು ತಿನ್ನೋ ಸಣ್ಣ ಜಾತಿ ನನ್ ಮಕ್ಳ' (ಪುನಃ ಮಹಿಳೆಯರನ್ನು ಕುರಿತು) ಏ ತುರುಬು ಕಟ್ಗೊಂಡು ವನುಪು ಮಾಡೋ ಬಡಿವಾರಗಿತ್ತಿರೇ, ಹಿಂಗೇನಾ ಕೆಲ್ಸಮಾಡೋದು ದನಕ್ಕ ಒದ್ದಂಗ್ಗೋದ್ರೆ ನಿಮ್ ಸೊಕ್ಕು ಮರಿತ್ತೇತಿ' ಎಂದು ಅವಾಚ್ಯ ಶಬ್ದ ಮತ್ತು ಜಾತಿ ನಿಂದನೆ ಮಾಡಿದ್ದರಿಂದ, ರೊಚ್ಚಿಗೆದ್ದ ಈ ಕೂಲಿಕಾರರು, 'ಬೇಶ್ ಮಾತಾಡಪ್ಪಾ ದಣಿ ಹೆಣ್ ಮಕ್ಕಳನ್ನ ಹಂಗಾ ಹಿಂಗಾ ಅಂದ್ರ ನಾವ್ ಸುಮ್ಮಿರಾದಿಲ್ಲ ನೋಡು" ಎಂದು ಹೇಳಿ ಕಡ್ಡಿ ಆರಿಸಿಕೊಳ್ಳುತ್ತಿರುವಾಗ, ನಾಗೇಶ್ವರರಾವ್ ಮಗ ಬಾಬೂರಾವ್, ಡ್ರೈವರ್ ಸ್ವಾಮೀ ಪ್ರಸಾದ್ ರಾವ್ ಇನ್ನಿತರ ಸಹಚರರು ಬಡಿಗೆಯಿಂದ ಹಲ್ಲೆ ನಡೆಸಿದರು. ಮಹಿಳಾ ಕೂಲಿಕಾರರಿಗೆ ಕೈ ಹಿಡಿದು ಎಳೆದೊಗೆದು, ಹಾರೆಯಿಂದ ಇರಿಯಲು ಹೋದಾಗ, ಎಲ್ಲಾ ಕೂಲಿಕಾರರು ಬಲವಂತವಾಗಿ ಬಿಡಿಸಿಕೊಂಡು, ಈ ಭೂಮಾಲಿಕನ ದೌರ್ಜನ್ಯಕ್ಕೆ ಹೆದರಿ, ಬೇಗ ಕಣ್ಮರೆಯಾಗಿ ಊರಿಗೆ ಹೋರಟು ಹೋಗುವಂತೆ ಇನ್ನಿತರ ಕೂಲಿಕಾರರು ಸೂಚನೆ ನೀಡಿ ಕಳಿಸಿದರು. ನಡುದಾರಿಯಲ್ಲಿ ಮೋಟಾರ್ ಬೈಕ್‌ಗಳಲ್ಲಿ ಬಂದು ಈ ಐದು ಮಂದಿ ಕೂಲಿಕಾರರನ್ನು ಕ್ಷಮೆ ಬೇಡುವಂತೆ ಒತ್ತಾಯಿಸಿ ಕ್ಷಮೆ ಕೇಳಿಕೊಂಡರೂ ಸಹ ಪುನಃ ಮತ್ತೆ ಹಲ್ಲೆ ನಡೆಸಿದಾಗ, ರೊಚ್ಚಿಗೆದ್ದ ಕೂಲಿಕಾರರು ನಮ್ಮ ಸಂಘಕ್ಕೆ ತಿಳಿಸುತ್ತೇವೆಂದು ಎಲ್ಲರೂ ಅರ್ಧದಲ್ಲೇ ಕೆಲಸ ಬಿಟ್ಟು ಮನೆಗಳಿಗೆ ಮರಳಿ ಕೂಲಿಕಾರ ಸಂಘದ ಮುಖಂಡರಾದ ಹೆಚ್.ಎಂ. ವಿಶ್ವನಾಥ ಸ್ವಾಮಿ ಎನ್. ಕುಮಾರ್ ಮತ್ತಿತರ ಮುಖಂಡರಿಗೆ ತಿಳಿಸಿದ ಮೇಲೆ ಪೆಟ್ಟಾದವರನ್ನು ಆಸ್ಪತ್ರೆಗೆ ದಾಖಲಿಸಿ ಕೇಸು ದಾಖಲಿಸುವುದರೊಳಗಾಗಿ, ಈ ಭೂಮಾಲಿಕರೇ ಹೋಗಿ, ನಮ್ಮ ಮೋಟಾರ್ ಬೈಕ್ ಕಸಿದುಕೊಂಡು, ಮನೆಗೆ ನುಗ್ಗಿ ಹಣ ದೋಚಿ ಕೊಂಡು ಹೋಗಿದ್ದಾರೆಂದು ಸುಳ್ಳು ಮೊಕದ್ದಮೆ ದಾಖಲಿಸಿದ್ದರು. ಇದು ತಿಳಿದ ಮರುಕ್ಷಣವೇ ಸುಮಾರು ಜನ ಕೂಲಿಕಾರರು ಸೇರಿ ಪೋಲೀಸ್ ಠಾಣೆಯನ್ನೇ ಸುತ್ತುವರಿದು ನಿಂತರು. ಇದನ್ನು ನೋಡಿದ ಪೋಲೀಸ್ ಸಿಬ್ಬಂದಿಯೇ ಕಕ್ಕಾಬಿಕ್ಕಿ ಯಾಯ್ತು. ನಂತರ ಅದೇ ಜನರೊಂದಿಗೆ ಬಹಿರಂಗ ಸಭೆ ನಡೆಸಿ, ವಿಶ್ವನಾಥಸ್ವಾಮಿ ಮತ್ತು ಎನ್. ಕುಮಾರ್ ರವರು ಭೂಮಾಲಿಕರ ದೌರ್ಜನ್ಯವನ್ನು ಖಂಡಿಸಿ, ಕೂಲಿಕಾರರನ್ನು ಮುಟ್ಟಿದ ಭೂಮಾಲಿಕ ಶಕ್ತಿಗಳ ವಿರುದ್ಧ ಹೋರಾಡಲು ನಮ್ಮ ಸಂಘಟನೆ ತಯಾರಿದೆ. ಕೂಲಿಕಾರರು ಇನ್ನು ಮುಂದೆ ಇಂತಹ ದೌರ್ಜನ್ಯ ಸಹಿಸುವುದಿಲ್ಲ ಎಂದು ಎಚ್ಚರಿಸಿದ್ದಾರೆ

ಐಕ್ಯರಂಗಕ್ಕೆ ಯಾಕಪ್ಪ ವೆಬ್‌ಸೈಟ್ ?

ಐಕ್ಯರಂಗ 'ವೆಬ್‌ಸೈಟ್' ಸ್ಥಾಪಿಸುವ ಮೂಲಕ ಸೈಬರ್ ಲೋಕಕ್ಕೆ ಕಾಲಿಟ್ಟಿದ್ದು ಈಗ ಎಲ್ಲರಿಗೂ ಗೊತ್ತಿದೆ. ತ್ರಿಪುರಾ ಮುಖ್ಯಮಂತ್ರಿ ಮಣಿಕ್ ಸರ್ಕಾರ್ ಮೇ 24 ರಂದು ಅದನ್ನು ಉದ್ಘಾಟನೆ ಮಾಡಿದರು. ಐಕ್ಯರಂಗದ ಸೈಬರ್ ಲೋಕದ ವಿಳಾಸ www.geocities.com/aikyaranga. ಯಾಹೂ(yahoo) ಎಂಬ ಪ್ರಸಿದ್ಧ ಇಂಟರ್‌ನೆಟ್ ಕಂಪೆನಿಯ ಕಂಪ್ಯೂಟರ್‌ನಲ್ಲಿ ಐಕ್ಯರಂಗ 'ಒಂದು ಕೋಣೆ' ಬಾಡಿಗೆಗೆ ಹಿಡಿದಿದೆ.

ವೆಬ್ ಪತ್ರಿಕೆ ಹೊಸ ಮಾಧ್ಯಮ

ಐಕ್ಯರಂಗಕ್ಕೆ ಯಾಕಪ್ಪಾ ವೆಬ್‌ಸೈಟ್ ಎಂಬ ಪ್ರಶ್ನೆ ಹಲವರಿಗೆ ಬರಬಹುದು. ಐಕ್ಯರಂಗ ವೆಬ್‌ಸೈಟ್ ನೋಡಲು ಕಂಪ್ಯೂಟರ್, ಫೋನ್ ಕನೆಕ್ಷನ್ ಮತ್ತು ಇಂಟರ್‌ನೆಟ್ ಕನೆಕ್ಷನ್ ಇರಬೇಕು. ಇದು ಎಷ್ಟು ಜನರ ಬಳಿ ಇದೆ? ಇದ್ದವರಲ್ಲಿ ಎಷ್ಟು ಜನಕ್ಕೆ ಕನ್ನಡ ಓದುವ ಆಸಕ್ತಿ ಇರಬಹುದು? ಎಂಬ ಪ್ರಶ್ನೆಗಳು ಸಾಮಾನ್ಯ. ಭಾರತದಲ್ಲಿ ಈಗ ಸರಾಸರಿ 200 ಜನಕ್ಕೆ ಒಬ್ಬರಿಗೆ ಇಂಟರ್‌ನೆಟ್ ಕನೆಕ್ಷನ್ ಇದೆ. ಆದರೆ ಈ ಸಂಖ್ಯೆ ವೇಗವಾಗಿ ಏರುತ್ತಿದೆ. ಅಲ್ಲದೆ ಎಸ್.ಟಿ.ಡಿ / ಐ.ಎಸ್.ಡಿ. ಬೂತ್‌ಗಳಂತೆ 'ಇಂಟರ್‌ನೆಟ್ ಬೂತ್' ಗಳು ಹೆಚ್ಚು ಕಡಿಮೆ ಎಲ್ಲಾ ಪಟ್ಟಣಗಳಲ್ಲಿ, ಕೇರಿ-ಕೇರಿಯಲ್ಲಿ ತಲೆಎತ್ತಿವೆ. ಸೈಬರ್ ಬೂತ್ ಬೆಲೆ ಸಹ ಕುಸಿದಿದ್ದು ಗಂಟೆಗೆ ಹತ್ತು ರೂ.ಗೆ ಬಂದಿದೆ. ಶಾಲಾ-ಕಾಲೇಜುಗಳಲ್ಲಿ ವಿಶ್ವವಿದ್ಯಾಲಯಗಳಲ್ಲಿ, ಆಫೀಸುಗಳಲ್ಲಿ, ಕಾರ್ಖಾನೆಗಳಲ್ಲಿ (ಟ್ರೇಡ್ ಯೂನಿಯನ್‌ಗಳೂ ಸೇರಿ) ಸಂಘ ಸಂಸ್ಥೆಗಳ ಕಚೇರಿಗಳಲ್ಲಿ ಲಭ್ಯವಿರುವ ಸಂಪರ್ಕ ಮಾಧ್ಯಮವಾಗಿ ಬೆಳೆಯುತ್ತಿದೆ. ಈಗಾಗಲೇ ಕರ್ನಾಟಕದ ಹೊರಗೆ (ಬೇರೆ ರಾಜ್ಯಗಳಲ್ಲಿ, ಬೇರೆ ದೇಶಗಳಲ್ಲಿ) ವಾಸಿಸುತ್ತಿರುವ ಕನ್ನಡಿಗರಿಗೆ (ಕನ್ನಡ ಪತ್ರಿಕೆಗಳು ಮುಟ್ಟದ ಸ್ಥಳಗಳಲ್ಲಿ) ಇಂಟರ್‌ನೆಟ್ ಮೂಲಕ ಎಲ್ಲಾ ಪತ್ರಿಕೆಗಳನ್ನು ನೋಡುವುದು ಸಾಮಾನ್ಯವಾಗುತ್ತಿದೆ. ಅದರಲ್ಲೂ ಮುಖ್ಯವಾಗಿ ಅಮೆರಿಕದಲ್ಲಿರುವ ಕನ್ನಡಿಗರಿಗೆ ಇದು ಸಾಮಾನ್ಯ.

ಐಕ್ಯರಂಗ ವೆಬ್‌ಸೈಟ್‌ಗೆ ಸಂದೇಶಗಳು

ವಿಜ್ಞಾನ ಮತ್ತು ತಂತ್ರಜ್ಞಾನದ ಹೊಸ ಆವಿಷ್ಕಾರವನ್ನು 'ಐಕ್ಯರಂಗ' ಅಳವಡಿಸಿ ಕೊಂಡಿರುವುದು ಸಂತೋಷದ ಸಂಗತಿ. ಈ ಮಾಹಿತಿ ತಂತ್ರಜ್ಞಾನದ ಈ ಸಾಧನದ ಮೂಲಕ ತಾಜಾ ವಿದ್ಯಮಾನಗಳನ್ನು ಜನರಿಗೆ ತಲುಪಿಸಿ ಅವರಲ್ಲಿ ವೈಚಾರಿಕ ಪ್ರಜ್ಞೆ ಹರಡಲು ಸಾಧ್ಯವಾಗಲಿ. ಇದು ರಾಜ್ಯದಲ್ಲಿ ಚಳುವಳಿ ಬಲಪಡಿಸಲು ಕೊಡುಗೆ ನೀಡಬಹುದು.

ಕಾ. ಹರಿಕಿಷನ್ ಸಿಂಗ್ ಸುರ್ಜಿತ್
ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ

❊ ❊ ❊

ಐಕ್ಯರಂಗ ವೆಬ್‌ಸೈಟ್ ಜಾಲ ದುಡಿಯುವ ಜನರ ಆಂದೋಲನ ಬಲಗೊಳಿಸಲು ನೆರವಾಗಲಿ ಎಂದು ಹಾರೈಸುತ್ತೇನೆ.


ಕಾ. ಸೀತಾರಾಮ ಯೆಚೂರಿ
ಸಂಪಾದಕರು, ಪೀಪಲ್ಸ್ ಡೆಮಾಕ್ರಸಿ

ಇಂಟರ್‌ನೆಟ್ ಈಗಾಗಲೇ ಪ್ರಮುಖ ವೇಗವಾಗಿ ಬೆಳೆಯುತ್ತಿರುವ ಸಮೂಹ ಮಾಧ್ಯಮವಾಗಿಬಿಟ್ಟಿದೆ. ಹೆಚ್ಚು ಕಡಿಮೆ ಎಲ್ಲಾ ಪ್ರಧಾನ ಕನ್ನಡ ದಿನಪತ್ರಿಕೆ ಮತ್ತು ವಾರಪತ್ರಿಕೆಗಳು ಈಗಾಗಲೇ ತಮ್ಮ (ಇಂಟರ್) ನೆಟ್ ಪ್ರಸಾರಗಳನ್ನು ಆರಂಭಿಸಿದೆ. **ಪ್ರಸಾರ ಆರಂಭಿಸಿರುವ ಪ್ರಥಮ ರಾಜಕೀಯ ವಾರಪತ್ರಿಕೆ ಐಕ್ಯರಂಗ ನೆಟ್ ಪ್ರಸಾರ'ದ ಮೂಲಕ ಐಕ್ಯರಂಗ ಕರ್ನಾಟಕದ ಹೊರಗೆ ಒಳಗೆ ಇರುವ ಪ್ರಜ್ಞಾವಂತ ವಿದ್ಯಾವಂತರನ್ನು ಪ್ರಗತಿಪರ ಚಳುವಳಿಯ ಬಗ್ಗೆ ಪರಿಚಯಿಸಿರುವ, ಅಥವಾ ಸಮಾನ್ಯ ಆಸಕ್ತಿ ಇರುವವರನ್ನು ಮುಟ್ಟುವ ಪ್ರಯತ್ನ ನಡೆಸಿದೆ.** ಒಂದು ಹಂತದಲ್ಲಿ ಪತ್ರಿಕೆಯ ನೆಟ್ ಪ್ರಸಾರ' ಪ್ರಿಂಟ್ ಪತ್ರಿಕೆಗೆ ಜಾಹೀರಾತು. ಇಂಟರ್‌ನೆಟ್ ಮೂಲಕ ನೋಡಿದ ಓದುಗನೊಬ್ಬ ಆಸಕ್ತಿವಹಿಸಿ ಚಂದಾದಾರರಾಗಬಹುದು.

ನೆಟ್ ಐಕ್ಯರಂಗದ ಮುನ್ನೋಟ

ಅದಕ್ಕಿಂತಲೂ ಹೆಚ್ಚಾಗಿ ಇಂಟರ್‌ನೆಟ್ ಪತ್ರಿಕೆ'ಯನ್ನು ಐಕ್ಯರಂಗ ಒಂದು ಹೊಸ ಮಾಧ್ಯಮವಾಗಿ ನೋಡುತ್ತದೆ. ಇಂಟರ್‌ನೆಟ್ ಐಕ್ಯರಂಗ' 'ಪ್ರಿಂಟ್ ಐಕ್ಯರಂಗದ' ಪಡಿಯಚ್ಚು ಅಲ್ಲ. ಪ್ರಿಂಟ್ ಪತ್ರಿಕೆಯ ಎಲ್ಲಾ ಅಂಶಗಳನ್ನು ಹೊಸ ಅಂಶಗಳು ಇರುತ್ತವೆ. ನೆಟ್ ಪತ್ರಿಕೆ ಮಾತು, ಹಾಡು, ವಿಡಿಯೋಗಳನ್ನು ಬಳಸಬಹುದು. ಉದಾಹರಣೆಗೆ ಕವನವೊಂದು ಅಕ್ಷರಗಳಲ್ಲಿ ಮಾತ್ರ ಇರದೆ. ಕವನ ವಾಚನವನ್ನು ನೆಟ್‌ನಲ್ಲಿ ಪ್ರಸಾರ ಮಾಡಬಹುದು. ಅದೇ ರೀತಿ ಇಂಟರ್‌ವ್ಯೂವನ್ನು ಪ್ರಸಾರ ಮಾಡಬಹುದು. ಪ್ರಮುಖ ಘಟನೆಗಳ , ವಿದ್ಯಾಮಾನಗಳ ವಿಡಿಯೋ ಸಹ ಹಾಕಬಹುದು. ಇದಲ್ಲದೆ ನೆಟ್ ಪತ್ರಿಕೆ ವಾರಪತ್ರಿಕೆಯಾಗಿ ಉಳಿಯಬೇಕಿಲ್ಲ. ಪ್ರಮುಖ ಸುದ್ದಿಗಳನ್ನು ಫ್ಲಾಷ್ ಮಾಡಬಹುದು. ತತ್‌ಕ್ಷಣ ಸ್ಪಂದಿಸಬಹುದು. ಹಿಂದಿನ ಸಂಚಿಕೆಗಳ ಪ್ರಮುಖ ಲೇಖನಗಳನ್ನು ಸಂಗ್ರಹಿಸಬಹುದು. ಇವೆಲ್ಲಾ ಕೆಲವನ್ನು 'ನೆಟ್ ಸಂಚಿಕೆ' ಈಗಾಗಲೇ

ಸೈಬರ್ ಲೋಕದಲ್ಲಿ ಐಕ್ಯರಂಗ



ಮುಂದಿನಪುಟಕ್ಕೆ

ಸಹಕಾರಿ ಬ್ಯಾಂಕ್ ಮುಳುಗಿಸಿದ ಹೋಮ್‌ಟ್ರೇಡ್ ಹಗರಣ


ಉದಾರೀಕರಣದ ಪ್ರಕ್ರಿಯೆ ಶುರುವಾದಾಗಿನಿಂದ ಹಲವು ತರಹದ ಹಗರಣಗಳು ನಡೆಯುತ್ತಲೇ ಇವೆ. ಸಾರ್ವಜನಿಕರ ಹಣವನ್ನು ಕೊಳ್ಳೆ ಹೊಡೆಯುವುದು ಹಗರಣಕಾರರಿಗೆ ಸಹಜವಾಗಿಬಿಟ್ಟಿದೆ. ಹರ್ಷದ್ ಮೆಹ್ತಾ, ಕೇತನ್ ಪಾರೇಕ್‌ಗಳು ದಿನ ನಿತ್ಯ ಹೊಸರೂಪ ಕೊಟ್ಟು ಬರುತ್ತಿದ್ದಾರೆ. ಈಗ ಅಂತಹದೊಂದು ಹೋಮ್ ಟ್ರೇಡ್ (ಅಂದರೆ ಮನೆ ವ್ಯವಹಾರ - ಅವ್ಯವಹಾರ?) ಎಂಬ ಕಂಪನಿ ನಡೆಸಿದ ಹಗರಣ ಹೊರಬಂದಿದೆ.

ಜಿ.ಎಸ್.ಮಣಿ

ಹಣವನ್ನು ಒಂದಕ್ಕೆರಡು ಮಾಡುವವರು, ಅರ್ಧ ಬೆಲೆಗೆ ಟಿ.ವಿ ಫ್ರಿಜ್ ಇತ್ಯಾದಿಗಳನ್ನು ಮಾರುತ್ತೇವೆಂದು ಜನರಿಂದ ಹಣಸಂಗ್ರಹಿಸಿ ನಾಪತ್ತೆಯಾಗುವವರನ್ನು ನೋಡಿದ್ದೀರಲ್ಲವೇ (ಕೇಳಿದ್ದೀರಲ್ಲವೆ)? ಅಂತಹದ್ದೇ ಮೋಸ ಇದು. ಆದರೆ ಪ್ರಮಾಣ ಬಹಳ ದೊಡ್ಡದು. ಇಲ್ಲಿ ಹಣಕೊಡುವವರು ಒಂದು ರೀತಿಯಲ್ಲಿ ಶಾಮೀಲು ಯಾಕೆಂದರೆ ಹಣ ಅವರದ್ದಲ್ಲ. ಅದು ಬೇರೆಯವರಿಂದ ಸಂಗ್ರಹಿಸಿದ್ದು. ಇಲ್ಲಿ ಹಣ ಲಪಟಾಯಿಸಿದವರು ಹೋಮ್‌ಟ್ರೇಡ್ ಕಂಪನಿಯವರು. ಹಣಕೊಟ್ಟವರು ಸಹಕಾರಿ ಬ್ಯಾಂಕುಗಳ ವ್ಯವಸ್ಥಾಪಕ ಮಂಡಳಿಯವರು. ಹಣ ಜನರದ್ದು. ಈ ಸಹಕಾರಿ ಬ್ಯಾಂಕುಗಳಲ್ಲಿ ಇಟ್ಟದ್ದು.

ಜೂಜಿನತ್ತ ಜಾರಿದ್ದು

ಈ ಹೋಮ್‌ಟ್ರೇಡ್ ಕಂಪನಿ ಎರಡು ತರಹದ ಚಟುವಟಿಕೆಗಳನ್ನು ಪ್ರಾರಂಭಿಸಿತು. ಒಂದನೆಯದು ತನ್ನ ಮುಖ್ಯ ವ್ಯವಹಾರದ ಬಗ್ಗೆ ಮಾಹಿತಿ ನೀಡುವುದು. ಎರಡನೇಯದು ಅವರ ಮುಖ್ಯ ವ್ಯವಹಾರ ಅಂದರೆ ಶೇರು ಮಾರುಕಟ್ಟೆ ವ್ಯವಹಾರ, ಶೇರು ದಲ್ಲಾಳಿತನ. ಶೇರುಗಳನ್ನು ಇಂಟರ್‌ನೆಟ್ ಮೂಲಕ ಶೇರುಗಳ ವ್ಯಾಪಾರ ಮಾಡುವುದನ್ನು ಪ್ರೋತ್ಸಾಹಿಸುವುದು. ಕಂಪನಿಯ ಪ್ರಕಾರ ಅವರ ಉದ್ದೇಶ ಸಣ್ಣ ಹೂಡಿಕೆದಾರರನ್ನು ಆಕರ್ಷಿಸಿ ಅವರು ಶೇರು ವ್ಯಾಪಾರ ಮಾಡುವಂತೆ ಪ್ರೋತ್ಸಾಹಿಸುವುದು. ವಿಚಿತ್ರವೆಂದರೆ ಇದು ಶೇರು ಮಾರುಕಟ್ಟೆಯೇ ಪ್ರೋತ್ಸಾಹ ದಾಯಕ ವಾಗಿಲ್ಲದಿರುವ ಸಮಯದಲ್ಲಿ ಪ್ರಾರಂಭವಾದದ್ದು.



ಈ ಚಟುವಟಿಕೆಯನ್ನು ಸಹ ಅತ್ಯಂತ ದೊಡ್ಡ ಪ್ರಚಾರದೊಂದಿಗೆ ಪ್ರಾರಂಭಿಸಲಾಯಿತು. ಸ್ಟಾರ್‌ಗಳಾದ ಸಚಿನ್ ತೆಂಡೂಲ್ಕರ್, ಹೃತಿಕ್ ರೋಶನ್, ಶಾರೂಖ್ ಖಾನ್‌ರನ್ನು ಬಳಸಿಕೊಂಡು ಪ್ರಚಾರ ನಡೆಸಲಾಯಿತು. ಒಂದು ಅಂದಾಜಿನ ಪ್ರಕಾರ ಇದಕ್ಕೆ ಮಾಡಿದ ಖರ್ಚು 5 ಕೋಟಿ ರೂಪಾಯಿಗಳು. ನಮ್ಮ ಮಾಧ್ಯಮಗಳೂ ಇದಕ್ಕೆ ಬೇಕಾದಷ್ಟು ಪ್ರಚಾರ ನೀಡಿದವು.

ಡಾಟ್‌ಕಾಮ್ ಕಂಪನಿಗಳು ವಿಫಲವಾಗುತ್ತಿದ್ದ ಹಿನ್ನೆಲೆಯಲ್ಲಿ ಸಂಬಂಧಪಟ್ಟವರು ಇಂತಹ ಕಂಪನಿಯ ಕಡೆ ಗಮನಹರಿಸಬೇಕಾಗಿತ್ತು. ಆದರೆ ಅದಾಗಲಿಲ್ಲ.

ನಿಬಂಧಕರು ಈ ಕಂಪನಿಯ ಹಿಂದಿನ ಜನರ ಕಡೆ ಅಥವಾ ಅದರ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾದ ಸಂಜಯ್ ಅಗರ್‌ವಾಲನ ಕಡೆ ಗಮನ ಹರಿಸಿದರೂ ಇಲ್ಲಿ ಹಗರಣ ನಡೆಯುತ್ತಿರುವುದರ ಸುಳಿವು ದೊರೆಯುತ್ತಿತ್ತು. ಸಂಜಯ್ ಅಗರವಾಲ ಲಾಯ್ಡ್, ಬ್ರೊಕರೇಜ್ ಎಂಬ ದಲ್ಲಾಳಿ ಸಂಸ್ಥೆಯಿಂದ ಬಂದವ. ಇದನ್ನು ಪ್ರಾರಂಭಿಸಿದವರು ಲಾಯ್ಡ್ ಫೈನಾನ್ಸ್‌ನವರು ಮುಂಬಯಿಯ ಈ ಕಂಪನಿ ಅಂತರಾಷ್ಟ್ರೀಯ ಮಟ್ಟದ ಕಂಪನಿಯೊಂದರಿಂದ ಈ ಹೆಸರನ್ನು ಕದ್ದಿತ್ತು, ಲಾಯ್ಡ್ಸ್ ಬ್ರೊಕರೇಜ್ ಬಹಳ ಕ್ರಿಯಾಶೀಲ ಎಂಬ ಹೆಸರನ್ನು ಪಡೆದಿತ್ತು ಯಾಕೆಂದರೆ ಒಂದೇ ದಿನದಲ್ಲಿ ಮುಂಬೈ ಶೇರು ವಿನಿಮಯದ ಸೂಚ್ಯಾಂಕ 36 ಪಾಯಿಂಟ್‌ಗಳಷ್ಟು ಕುಸಿಯಲು ಅದು ಕಾರಣವಾಗಿತ್ತು. ಭಾರತೀಯ ಸೆಕ್ಯುರಿಟಿ ವಿನಿಮಯ ಮಂಡಳಿ (ಸೆಬಿ) ಈ ವಿಷಯದಲ್ಲಿ ತನಿಖೆ ನಡೆಸಿತ್ತು.

ಸರಿಯಾದ ಸಾಕ್ಷ್ಯಾಧಾರಗಳಿಲ್ಲದೆಯೂ ಅಥವಾ ಇರುವ ಪುರಾವೆಗಳು ಮೊಕದ್ದಮೆ ನಡೆಸಲು ಪ್ರಯೋಜನವಿಲ್ಲದ್ದರಿಂದಲೂ ಆಯಾ ದಲ್ಲಾಳಿಯ ಅವ್ಯವಹಾರಗಳ ಮೇಲೆ ಕೈಗೊಳ್ಳುವ ಕ್ರಮವನ್ನು ಕೈಬಿಡಲಾಯಿತು. ಇದು ತನ್ನ ಹೆಸರನ್ನೂ ಸಹ ಯುರೋ ವಷಿಯನ್ ಸೆಕ್ಯುರಿಟೀಸ್ ಎಂದು ಬದಲಾಯಿಸಿಕೊಂಡುಬಿಟ್ಟಿತು. ಮಾರಿಷಿಯಸ್ ಮೂಲಕ ಕಂಪನಿಯೂ ಅದಕ್ಕೆ ತನ್ನ ಶೇರುಗಳ ಶೇ.75ರಷ್ಟನ್ನು ಅದು ಮಾರಾಟ ಮಾಡಿಬಿಟ್ಟಿತು.

ಸೆಬಿ ಈ ಕಂಪನಿ ಸಾರ್ವಜನಿಕರಿಗೆ ಶೇರು ನೀಡಿ ಹಣ ಸಂಗ್ರಹಿಸುವುದಕ್ಕೂ ಅನುಮತಿ ನೀಡಿತು. ಅದು 32.94 ಕೋಟಿ ರೂ.ಗಳನ್ನು ಸಂಗ್ರಹಿಸಿತು.

ವಂಚನೆ

ಹೀಗೆ ಸಂಗ್ರಹಿಸಿದ ಹಣದಿಂದ ಹೋಮ್‌ಟ್ರೇಡ್ ಪ್ರಾರಂಭವಾಯಿತು. ಯುರೋ ಡಿಸ್ಕವರ್ ಟೆಕ್ನೊಲಜಿ, ಮತ್ತು ಯುರೋ ಡಿಸ್ಕವರ್‌ಗಳ ಮೂಲಕವೂ ಈ ಕಂಪನಿಗೆ ಹಣ ಬಂದಿತು. ವೇಸ್ ಇಂಡಿಯಾ ಲಿಮಿಟೆಡ್ ಎಂಬ ಇನ್ನೊಂದು ಕಂಪನಿಯನ್ನೂ ಪ್ರಾರಂಭಿಸಲಾಯಿತು. ಇದು ಹೋಮ್‌ಟ್ರೇಡ್‌ನ ಭಾಗವಾಯಿತು.

ಸಹಕಾರಿ ಬ್ಯಾಂಕುಗಳು ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನಗಳು / ನಿಯಮಗಳಿಗನುಗುಣವಾಗಿ ಕೆಲಸ ಮಾಡುತ್ತವೆ. ಆದರೆ ಈ ಬ್ಯಾಂಕುಗಳ ಆಡಳಿತ ರಿಜಿಸ್ಟ್ರಾರ್ ಆಫ್ ಕೋ ಆಪರೇಟಿವ್ ಸೊಸೈಟೀಸ್‌ಗೆ ಸೇರಿದ್ದು

ಭಾರತೀಯ ರಿಸರ್ವ್ ಬ್ಯಾಂಕಿನ ನಿಯಮಗಳಂತೆ ಇವು ನಗದು ಶುಲ್ಕ ನಿಧಿ (CRR) ಮತ್ತು ಶಾಸನ ಬದ್ಧ ಧೃವ ನಿಧಿ (SLR)ಗಳಲ್ಲಿ ಅವರ ಠೇವಣೆಗಳ ಒಂದು ನಿರ್ಧಿಷ್ಟ ಭಾಗವನ್ನು ತೊಡಗಿಸಬೇಕು.

ಇಲ್ಲಿ SLR ಗಾಗಿ ಸರ್ಕಾರಿ ಸೆಕ್ಯುರಿಟಿಗಳಲ್ಲಿ (ಅಂದರೆ ಸರ್ಕಾರಿ ಬಾಂಡ್ ಇತ್ಯಾದಿ) ಹಣ ತೊಡಗಿಸುವುದು ಪದ್ಧತಿ. ಹೀಗೆ ಸರ್ಕಾರಿ ಸೆಕ್ಯುರಿಟಿಗಳಲ್ಲಿ ಹಣ ತೊಡಗಿಸಲು ಸಹಕಾರಿ ಬ್ಯಾಂಕುಗಳ ದಲ್ಲಾಳಿಗಳಿಗೆ ಹಣ ಪಾವತಿಸುತ್ತವೆ.

ಇಲ್ಲೇ ನಡೆದದ್ದು ಹಗರಣ. ಹೋಮ್‌ಟ್ರೇಡ್ ಈ ಬ್ಯಾಂಕುಗಳಿಂದ ಹಣ ಪಡೆಯಿತು. ಆದರೆ ಅದನ್ನು ಸೆಕ್ಯುರಿಟಿಗಳನ್ನು ಕೊಳ್ಳಲು ಬಳಸಲಿಲ್ಲ. ಬದಲಿಗೆ ಸಟ್ಟಾ ವ್ಯವಹಾರದಲ್ಲಿ ತೊಡಗಿಸಿತು. ಸಹಕಾರಿ ಬ್ಯಾಂಕುಗಳಿಗೆ ಸೆಕ್ಯುರಿಟಿಗಳನ್ನು ಅದು ನೀಡಬೇಕಾಗಿತ್ತು. ಈ ಬ್ಯಾಂಕುಗಳ ವ್ಯವಸ್ಥಾಪಕ ಮಂಡಳಿಯವರೂ ಅವರನ್ನು ಕೇಳಲಿಲ್ಲ. ಈ ಕಂಪನಿ ನೀಡಲಿಲ್ಲ. ಕೊಡುವುದು ಕೊಂಡರೇ ತಾನೆ ಕೊಂಡೆ ಇರಲಿಲ್ಲ.

ಇದು ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕು ಆದ ನಬಾರ್ಡ್ ಸಹಕಾರಿ ಬ್ಯಾಂಕುಗಳ ತಪಾಸಣೆ ನಡೆಸಿದಾಗ ಗೊತ್ತಾಯಿತು. ನಂತರ ಅದು ರಿಸರ್ವ್ ಬ್ಯಾಂಕಿನ ಗಮನಕ್ಕೆ ಬಂತು. ರೀಸರ್ವ್ ಬ್ಯಾಂಕ್ ತಾನು ಪುರಾವೆಗಳನ್ನು ಸಂಗ್ರಹಿಸಿ ಈ ಹಗರಣದ ಬಗ್ಗೆ ಪ್ರಚಾರಪಡಿಸುವ ವೇಳೆಗೆ ಎಲ್ಲಾ ಆಗಿ ಹೋಗಿತ್ತು.

ನಾಗಪುರ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ (NDECB)ಯಲ್ಲಿ ಇದು ಗೊತ್ತಾಗಿ ನಬಾರ್ಡ್‌ನವರು ಸೆಕ್ಯುರಿಟಿಗಳು ಎಲ್ಲೆಂದು ಕೇಳಿದಾಗ ಬ್ಯಾಂಕಿನ ಅಧ್ಯಕ್ಷ ಸುನಿಲ್ ಕೇದರ್ ಹೋಮ್‌ಟ್ರೇಡ್‌ನ ವಿರುದ್ಧ ಮೋಸ ಮಾಡಿದ ದೂರನ್ನು ಪೋಲೀಸರಿಗೆ ನೀಡಿದರು. ಈ ದೂರು ನೀಡಿದ ನಂತರ ಮಹಾರಾಷ್ಟ್ರದ ಎಂಟು ಮತ್ತು ಗುಜರಾತಿನ ಹಲವು ಸಹಕಾರಿ ಬ್ಯಾಂಕುಗಳಲ್ಲಿ ಇಂತಹ ಹಗರಣ ನಡೆದಿರುವುದು ಬೆಳಕಿಗೆ ಬಂತು. ಈಗ ಇದು ಹಲವು ನೂರು ಕೋಟಿ ರೂಪಾಯಿಗಳ ಹಗರಣವೆಂದು ಗೊತ್ತಾಗಿದೆ.

ಅಧಿಕ ಪ್ರಸಂಗಿ ಅಗರವಾಲ್

ಈ ಹಗರಣದ ಮುಖ್ಯ ಪಾತ್ರದಾರಿ ಸಂಜಯ್ ಅಗರವಾಲ ಮೊದಲು ತಲೆಮರೆಸಿಕೊಂಡು ನಂತರ ಪೋಲೀಸರಿಗೆ ಶರಣಾಗಿದ್ದಾನೆ. ಈ ಹಗರಣ ನಡೆಸಿದ್ದಲ್ಲದೇ ಆತ ಇಂದೂ ಸಹ ತಾನು ಬಹು ದೊಡ್ಡ ಹಣಕಾಸು ನಿರ್ವಹಣೆಯ ಮಾದರಿಯನ್ನು ತೋರಿಸಿದ್ದೇನೆಂದು ಹೇಳುವ ಅಧಿಕ ಪ್ರಸಂಗತನ ತೋರಿಸಿದ್ದಾನೆ.

ಈ ಪ್ರಕರಣದಲ್ಲಿ ಈ ಸಹಕಾರಿ ಬ್ಯಾಂಕುಗಳ ನಿಯಂತ್ರಕರು ಯಾರೆಂಬುದೇ ಸ್ಪಷ್ಟವಾಗಿಲ್ಲ ಎಂದು ಕೊಂಡರೂ ಉದಾರೀಕರಣದ ವಾತಾವರಣದಲ್ಲಿ ನಿಯಂತ್ರಣವನ್ನು ಪೂರ್ತಿ ತೆಗೆದು ಹಾಕುವ ಮಾತುಗಳು ಬರುತ್ತಿರುವಾಗ ಇಂತಹ ಹಗರಣಕ್ಕೆ ತಡೆ ಹಾಕುವವರಾರು?


ಸಟ್ಟಾ ವ್ಯವಹಾರ ಜೂಜುಗಳೇ ಮಹತ್ವದ ವಿಷಯಗಳಾಗಿರುವಾಗ ಜನರ ಹಣವನ್ನು ಇದಕ್ಕೆ ಬಳಸುವುದೇ ಸರಿಯಾದ ವಿಧಾನ ಎನ್ನುವ ಭಂಡತನ ತೋರುವವರೂ ಇದ್ದಾರೆ.

ಸಹಕಾರಿ ಬ್ಯಾಂಕುಗಳಲ್ಲಿ ಇರುವುದು ಜನಸಾಮಾನ್ಯರ ಹಣ. ಅದನ್ನು ಬಹಳ ಜವಾಬ್ದಾರಿಯಿಂದ ನಿರ್ವಹಿಸಬೇಕೆಂಬ ಕನಿಷ್ಠ ಜವಾಬ್ದಾರಿ ಈ ಉದಾರೀಕರಣದ ದಿನಗಳಲ್ಲಿ ಯಾರಿಗಾದರೂ ಇದೆಯೆ? ಉದಾರೀಕರಣ ವಾದಿಗಳು ಇದೊಂದು ಅಸಾಮಾನ್ಯ ಪ್ರಕರಣವಷ್ಟೇ ಎನ್ನಬಹುದು. ದಿನೇ ದಿನೇ ಹಗರಣಗಳಾದರೆ?

ರಾಷ್ಟ್ರಪತಿ ಸ್ಥಾನಕ್ಕೆ ಕೆ.ಆರ್. ನಾರಾಯಣನ್ ಸೂಕ್ತ ಅಭ್ಯರ್ಥಿ

ರಾಷ್ಟ್ರಪತಿ ಸ್ಥಾನಕ್ಕೆ ಕೆ. ಆರ್. ನಾರಾಯಣನ್‌ರವರೇ ಸೂಕ್ತವಾದ ಅಭ್ಯರ್ಥಿಯೆಂದು ಸಿಪಿಐ(ಎಂ) ಕೇಂದ್ರ ಸಮಿತಿಯು ನಿರ್ಧರಿಸಿದೆ. ಅವರು ಅಧ್ಯಕ್ಷರಾಗಿರುವ ಅವಧಿಯಲ್ಲಿನ ಕಾರ್ಯನಿರ್ವಹಣೆಯ ದಾಖಲೆ ಗಮನಿಸಿದರೆ ಎರಡನೇ ಬಾರಿಗೆ ಮುಂದೆವರೆಯಲು ಅವರೇ ಸೂಕ್ತ ಎಂದು ಅಭಿಪ್ರಾಯ ಪಡಲಾಗಿದೆ. ಈ ಕುರಿತು ಇತರೆ ಪಕ್ಷಗಳೊಂದಿಗೆ ಸಮಾಲೋಚನೆ ನಡೆಸಲಾಗುವುದು.

ಇತ್ತ ವಾಜಪೇಯಿಯವರು ಸರ್ವ ಸಮ್ಮತ ಅಭ್ಯರ್ಥಿ ಆರಿಸಬೇಕೆಂದು ವಿರೋಧಪಕ್ಷಗಳ ಮುಂದೆ ಹೇಳುತ್ತಾ ಹೊಸ ಹೊಸ ಹೆಸರುಗಳನ್ನು ಬಿಜೆಪಿ ಸೂಚಿಸುತ್ತಾ ಇದೆ. ಈಗಲಂತೂ ಎರಡನೇ ಅವಧಿಗೆ ಶ್ರೀ ಕೆ.ಆರ್.



ನಾರಾಯಣನ್ ಬೇಡ ಎಂದು ಬಹಿರಂಗ ಹೇಳಿಕೆ ನೀಡಿರುವುದು ಇಂತಹ ಚರ್ಚೆಯನ್ನೇ ಅರ್ಥಹೀನಗೊಳಿಸಿದೆ. ಅಲ್ಲದೇ ತನಗೆ ಬೇಕಾದುದನ್ನೇ ಮಾಡಲು, ನಿರ್ಧಾರ ಹೇರುವ ಕ್ರಮವಾಗಿದೆ. ಹೀಗಾದಲ್ಲಿ ಸರ್ವಸಮ್ಮತ ಎಂಬುದು ಎಲ್ಲಿಯ ಪ್ರಶ್ನೆ?

ಐಕ್ಯರಂಗಕ್ಕೆ ಯಾಕಪ್ಪಾ ವೆಬ್ ಸೈಟ್....

ಮಾಡಿದೆ. ಬೆಂಗಳೂರಲ್ಲಿ ನಡೆದ ಸಿಪಿಐ(ಎಂ) ಕೇಂದ್ರ ಸಮಿತಿ ಸಭೆ ಬಗ್ಗೆ ಸಂಕ್ಷಿಪ್ತ ಸುದ್ದಿಗಳನ್ನು ಪ್ರಕಟಿಸಿತು. ಕಾಮ್ರೇಡ್ ಸಿ.ನಂಜುಂಡಪ್ಪನವರ ನಿಧನದ ಸುದ್ದಿಯನ್ನು ತಕ್ಷಣ ಫ್ಲಾಷ್ ಮಾಡಿತು. ಕಳೆದ ಸಂಚಿಕೆ ಮತ್ತು ಕಳೆದ ಆಗಸ್ಟ್‌ನಲ್ಲಿ ತಂದ ವಿಶೇಷ ಸಂಚಿಕೆ ಈಗಾಗಲೇ ವೆಬ್‌ಸೈಟ್‌ನಲ್ಲಿದೆ. ಇದಲ್ಲದೆ ನೆಟ್ ಮಾಧ್ಯಮದ ಇತರ ಸಾಧ್ಯತೆಗಳನ್ನು ಐಕ್ಯರಂಗ ದುಡಿಸಿಕೊಳ್ಳಲಿದೆ. ನೆಟ್ ಸಂವಾದಿ ಮಾಧ್ಯಮ ಇತರ ಯಾವುದರ ಸಮೂಹಮಾಧ್ಯಮ (ಟಿ.ವಿ. ರೇಡಿಯೋ, ಪತ್ರಿಕೆ) ಗಳಿಗೆ ಇರದ ಗುಣ ಇದು. ಓದುಗರ ಪತ್ರಿಕೆಗೆ ತತ್‌ಕ್ಷಣ ಸ್ಪಂದಿಸಬಹುದು. ಓದುಗರು ಕಳಿಸಿದ 'ಇ-ಮೈಲ್' ಸಂದೇಶವನ್ನು ತತ್‌ಕ್ಷಣ ಪ್ರಸಾರ ಮಾಡಬಹುದು. ಈ ಮೂಲಕ ಐಕ್ಯರಂಗ ವೆಬ್‌ಸೈಟನ್ನು ಒಂದು **ಚರ್ಚಾ ವೇದಿಕೆ** ಸಹ ಮಾಡಬಹುದು. ಒಡನಾಡಿ ಪತ್ರಿಕೆಗಳನ್ನು ಮತ್ತು ಇತರ. ಉಪಯುಕ್ತ ಸಂಬಂದಪಟ್ಟ ಮಾಹಿತಿ ಇರುವ ವೆಬ್‌ಸೈಟ್‌ಗಳಿಗೆ 'ನೆಟ್ ಪತ್ರಿಕೆ' ಕೊಂಡಿಗಳನ್ನು ಕೊಡಬಹುದು. ಕರ್ನಾಟಕದ ಸಾಮಾಜಿಕ - ಸಾಂಸ್ಕೃತಿಕ ರಾಜಕೀಯ ಸ್ಥಿತಿ ಬಗ್ಗೆ, ವಿದ್ಯಮಾನಗಳ ಬಗ್ಗೆ ಆಕರಗಳನ್ನು ವೆಬ್ ಸೈಟ್ ಹೊರಬಹುದು. ಅಥವಾ ಕೊಂಡಿಗಳನ್ನು ಕೊಡಬಹುದು. ಈಗಾಗಲೇ ಕರ್ನಾಟಕದ ಮ್ಯಾಪ್‌ಗಳಿರುವ ಈ ವೆಬ್ ಸೈಟ್‌ಗೆ ಕೊಂಡಿ ಕೊಡಲಾಗಿದೆ. ಕರ್ನಾಟಕದ ಮ್ಯಾಪ್ ವೆಬ್‌ಸೈಟ್‌ನಲ್ಲೇ ಇದೆ.

'ಐಕ್ಯರಂಗ' ಸೈಬರ್ ಲೋಕದಲ್ಲಿ ಜಗತ್ತಿನಾದ್ಯಂತ ಪ್ರಗತಿಪರ ಚಳುವಳಿಗಳು 'ನೆಟ್'ನ್ನು ಪ್ರಭಾವೀ ಸಮೂಹ ಮಾಧ್ಯಮವಾಗಿ ಬಳಸುತ್ತಿವೆ. ಕರ್ನಾಟಕದ ಪ್ರಗತಿಪರ ಚಳುವಳಿ ಇದರಲ್ಲಿ ಹಿಂದೆ ಬೀಳಬಾರದು. ಐಕ್ಯರಂಗ ಈ ಪ್ರಯತ್ನಕ್ಕೆ ಮೆಲ್ಪಂಕ್ತಿ ಹಾಕಲಿದೆ.

ಬೆಂಗಳೂರು ಮಹಾ
ಕೋಮುವಾದಿಗಳ ವಿ

ಐಕ್ಯರಂಗ ವಿ


ಕೆಂಪು ಸಾಗರದಂತೆ ಹರಿದರು ಜನ

ಕೆಂಪಾದವೋ ಎಲ್ಲಾ ಕೆಂಪಾದವೋ

ಪ್ರಗತಿಪರ ಸಿನಿಮಾ ಹಾಡೊಂದನ್ನು ಕೇಳಿದ, ಅಲ್ಲ... ಅಲ್ಲ.. ನೋಡಿ ಅನುಭವಿಸಿದ ಸನ್ನಿವೇಶವದು! ಕರ್ನಾಟಕ ರಾಜಧಾನಿ ಉದ್ಯಾನನಗರಿಯಲ್ಲಿ ಮೇ ಹೂ ಅರಳಿ ಪ್ರಕೃತಿಯಲ್ಲಿ ಕೆಂಪು ಸೊಬಗು ತುಂಬಿತ್ತು. ಅದಕ್ಕೆ ಕೆಂಬಣ್ಣದ ರಂಗು ತುಂಬಿದವರು ರಕ್ತ-ಬೆವರು ಒಂದು ಮಾಡಿ ಮಹಡಿ ಮನೆ ಕಟ್ಟುವ ಕಾರ್ಮಿಕರು, ಹೊಟ್ಟೆಗೆ ಹಿಟ್ಟೊದಗಿಸುವ ರೈತರು ಒಟ್ಟಾರೆಯಾಗಿ ದುಡಿಯುವ ವರ್ಗದವರು.

ಮೇ 26, 2002 ರ ಭಾನುವಾರ ಬೆಂಗಳೂರು ಕೆಂಪಾಗಿತ್ತು. ರಾಜ್ಯದ ನಾನಾ ಭಾಗಗಳಿಂದ ಬಂದಿದ್ದ ಶ್ರಮಜೀವಿಗಳು ಹಿಡಿದಿದ್ದ ಕೆಂಬಾವುಟಗಳಿಂದ. ನಗರವನ್ನು ಶೃಂಗರಿಸಿದ್ದ ಕೆಂಬಾವುಟ - ಬಂಟಿಂಗ್‌ಗಳಿಂದ. ಹತ್ತಾರು ಸಾವಿರ ಜನರು ಹರಿದುಬಂದು ಕೆಂಪು ಸಾಗರವನ್ನೇ ಸೃಷ್ಟಿಸಿ ಕರ್ನಾಟಕದ ಎಡಪಂಥೀಯ ಚಳುವಳಿಯಲ್ಲಿ ಉತ್ಸಾಹದ ಬುಗ್ಗೆ ಹೆಚ್ಚಿಸಿದರು. ಹೊಸ ಇತಿಹಾಸ ಬರೆದರು.

ಭಾರತದ ಕ್ರಾಂತಿಕಾರಿ ಆಂದೋಲನದ ಮಾರ್ಗದರ್ಶಿ ಸ್ಥಾನದಲ್ಲಿರುವ ದುಡಿಯುವ ಜನತೆಯ ಹಿತರಕ್ಷಕ, ವಿಶ್ವಕ್ರಾಂತಿಯ ಸಂರಕ್ಷಕ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಪಾಲಿಟ್‌ಬ್ಯೂರೋ ಮತ್ತು ಕೇಂದ್ರ ಸಮಿತಿ ಸಭೆ ನಡೆದ ಮಹತ್ವದ ಘಳಿಗೆಯ ಸ್ಮರಣಾರ್ಥ ಮೆರವಣಿಗೆ-ರ್‍ಯಾಲಿಗಳನ್ನು ನಡೆಸಲಾಯಿತು.

ರಾಜ್ಯ ಸಿಪಿಐ(ಎಂ) ನ ಇತಿಹಾಸದಲ್ಲಿ ಅಕ್ಷರಶಃ ಇದೊಂದು ಅವಿಸ್ಮರಣೀಯ ದಿನ. ಬಿರು ಬಿಸಿಲು ಒಂದೆಡೆಯಾದರೆ ಬಿತ್ತನೆ ಕಾಲ ಸಮೀಪಿಸುತ್ತಿದ್ದ ಈ ಕಾಲಘಟ್ಟದಲ್ಲೂ ಅತಿ ಕಡಿಮೆ ದಿನಗಳ ಅವಧಿಯಲ್ಲಿ ಇಂಥದ್ದೊಂದು ಅಪೂರ್ವ ರ್‍ಯಾಲಿಯನ್ನು ಪಕ್ಷ ಸಂಘಟಿಸಿತು. ಹಲವು ಸಂಘಟನೆಗಳು ಪಕ್ಷಗಳು ಜಂಟಿಯಾಗಿ ನಡೆಸಿದರೂ ಅಣಿ ನೆರೆಯಿಸಲು ಆಗದಷ್ಟು ಜನರನ್ನು ಪಕ್ಷವೇ ಸ್ವತಂತ್ರವಾಗಿ ಒಟ್ಟುಗೂಡಿಸಿದ್ದು ಮಹತ್ವದ ಸಂಗತಿಯೇ ಸರಿ.

ಕಾರ್ಮಿಕ ಆಂದೋಲನದ ಅಪ್ಪಟ ಚಿನ್ನದ ನೇತಾರರನ್ನು, ಸ್ವಾತಂತ್ರ್ಯ ಸಮರದ ಸಮರ್ಥ ಸೇನಾನಿಗಳನ್ನು, ಕ್ರಾಂತಿಕಾರಿ ಚಳುವಳಿಯ ಕಂದೀಲು ಹಿಡಿದ ಮಹಾನ್ ಧುರೀಣರನ್ನು ಹತ್ತಿರದಿಂದ ಕಾಣಬೇಕು, ಅವರ ಮಾತುಗಳನ್ನು ಕೇಳಬೇಕು ಎಂಬ ಒತ್ತಾಸೆಯಿಂದ ಸಾವಿರಾರು ಮಂದಿ ಬಂದಿದ್ದರು.

ಬೆಂಗಳೂರು ಮಹಾನಗರದ ಹೃದಯ ಭಾಗದಲ್ಲಿರುವ ಚಿಕ್ಕಲಾಲ್‌ಬಾಗ್‌ನಿಂದ ಹೊರಟ ಮೆರವಣಿಗೆಯಲ್ಲಿ ರೈತರಿದ್ದರು, ಕಾರ್ಮಿಕರಿದ್ದರು, ವಿದ್ಯಾರ್ಥಿ, ಯುವಜನರಿದ್ದರು. ನೌಕರರು; ಬುದ್ಧಿಜೀವಿಗಳಿದ್ದರು. ಕಂಕುಳಲ್ಲಿ, ಹೆಗಲ ಮೇಲೆ ಮಕ್ಕಳನ್ನು ಹೊತ್ತ ತಂದೆ ತಾಯಂದಿರಿದ್ದರು. ಸಾಂಪ್ರದಾಯಿಕ ಉಡುಗೆ ಉಟ್ಟ ಲಂಬಾಣಿ ಹೆಂಗಸರಿದ್ದರು. ಬುರ್ಖಾ ತೊಟ್ಟ ಮುಸ್ಲಿಂ ಮಹಿಳೆಯರಿದ್ದರು. ಉತ್ತರ ಕರ್ನಾಟಕದ ಕೃಷಿ ಕಾರ್ಮಿಕರಿದ್ದರು, ದಕ್ಷಿಣ ಕನ್ನಡದ ಹಂಚು ಕಾರ್ಮಿಕರಿದ್ದರು. ಬೀಡಿ ಸುತ್ತುವ ಮಹಿಳೆಯರು ಇದ್ದರು.

ದೇಶವನ್ನು ಸುಡುತ್ತಿರುವ ಕೋಮುವಾದದ ವಿರುದ್ಧ ಮತ್ತು ವಿನಾಶಕಾರಿ ಆರ್ಥಿಕ ನೀತಿಗಳ ವಿರುದ್ಧ ಜನಪರ ಪರ್ಯಾಯಕ್ಕಾಗಿ ನಡೆದ ಈ ಮೆರವಣಿಗೆಯಲ್ಲಿ ಪಾಲ್ಗೊಂಡವರ ಕಂಠಗಳಿಂದ ಮತೀಯವಾದಿಗಳು-ನರರಾಕ್ಷಸರ ವಿರುದ್ಧ ಆಕ್ರೋಶದ ಘೋಷಣೆಗಳು ಮೊಳಗಿದವು. ಕಾಂಗ್ರೆಸ್ ಆರಂಭಿಸಿ ಬಿಜೆಪಿ ಮುಂದುವರಿಸಿರುವ ಜೀವಹಿಂಡುವ ಆರ್ಥಿಕ ನೀತಿಗಳ ವಿರುದ್ಧ ಘೋಷಣೆ ಮುಗಿಲು ಮುಟ್ಟಿತು.

ಕೆಂಪು ಜನಸಾಗರ ಕಂಡು ಮಹಾನಗರದ ಜನ ಒಂದುರೀತಿಯ ದಿಗಿಲು. ಅಬ್ಬಾ ಎಂಬ ಉದ್ಗಾರ. ಹಿಂದಿನ ದಿನವಷ್ಟೇ ಭಾರಿ ಮಳೆ ಸುರಿಸಿದ ಮುಗಿಲು ಈ ದಿನ ನಿರ್ಮಲವಾಗಿದ್ದು ದುಡಿಯುವ ಜನರ ಜತೆ ಸೌಹಾರ್ದ ವ್ಯಕ್ತಪಡಿಸಿತು! ಶನಿವಾರದಂತೆ ಭಾನುವಾರವೂ ಮಳೆ ಬರಲಿ, ಕಮ್ಯುನಿಸ್ಟರ ಕಾರ್ಯಕ್ರಮ ಕೊಚ್ಚಿ ಹೋಗಲಿ ಎಂದು ಅದೆಷ್ಟು ಮಂದಿ 'ವರುಣ'ನನ್ನು ಪ್ರಾರ್ಥಿಸಿದ್ದರೋ ಏನೋ, ಆದರೆ ಹಾಗಾಗಲಿಲ್ಲ. ಲಾಠಿ-ಗುಂಡಿನ ಮಳೆಯನ್ನೇ ದಿಟ್ಟತನದಿಂದ ಎದುರಿಸಿದ ಕೆಂಬಾವುಟದ ವೀರಪುತ್ರ-ಪುತ್ರಿಯರು ಮಳೆ ಬಂದರೂ ಹೆದರುತ್ತಿರಲಿಲ್ಲ ಬಿಡಿ.

ಮೆರವಣಿಗೆ ಮುಖ್ಯ ಬೀದಿಗಳಲ್ಲಿ ಸಾಗಿ ಮಲ್ಲೇಶ್ವರಂನ ಆಟದ ಮೈದಾನ ಸೇರಿತು. ಅಲ್ಲಿ ಬೃಹತ್ ಬಹಿರಂಗಸಭೆ ನಡೆಯಿತು. ಬಾವುಟ ಹಾಗೂ ಪತಾಕೆಗಳ ಅಲಂಕಾರದಿಂದಾಗಿ ಮಲ್ಲೇಶ್ವರಂ ಮೈದಾನ ಕೆಂಪು ಚಾದರ ಹೊದ್ದುಕೊಂಡಂತೆ ಕಾಣುತ್ತಿತ್ತು. ಕುಡುಗೋಲು ಸುತ್ತಿಗೆ ಹಿನ್ನೆಲೆಯ ಎತ್ತರದ ವೇದಿಕೆ ನಾಯಕರಿಗೆ ಆಸೀನವಾಗಲು ಸಜ್ಜುಗೊಂಡಿತ್ತು.

ಸಿಪಿಐ(ಎಂ) ರಾಜ್ಯ ಸಮಿತಿ ಕಾರ್ಯದರ್ಶಿ ಕಾಂ. ಎಸ್.ಸೂರ್ಯನಾರಾಯಣ ರಾವ್ ಬಹಿರಂಗಸಭೆಯ ಅಧ್ಯಕ್ಷತೆ ವಹಿಸಿದ್ದರು.



ಜನತೆಯನ್ನುದ್ದೇಶಿಸಿ ಜ್ಯೋತಿಬಸು, [illegible] ಹಿರಿಯ ನಾಯಕರು

ಸುರ್ಜಿತ್, ಬುದ್ಧದೇವ್ ಭಟ್ಟಾಚಾರ್ಯ, ಜ್ಯೋತಿಬಸು, ನಾಯನಾರ್ ಮೊದಲಾದ ಮುಖಂಡರನ್ನು ವೇದಿಕೆಗೆ ಬರಮಾಡಿಕೊಂಡಾಗ ನೆರೆದಿದ್ದ ಜನಸ್ತೋಮ ಶಿಳ್ಳೆ ಹಾಕಿ ಘೋಷಣೆ ಕೂಗಿ ಉತ್ಸಾಹದಿಂದ ಸ್ವಾಗತಿಸಿತು. ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರು ಮತ್ತು ಪಾಲಿಟ್‌ಬ್ಯೂರೋ ಸದಸ್ಯರು ವೇದಿಕೆ ಮೇಲೆ ಉಪಸ್ಥಿತರಿದ್ದರು.

ಸಿಪಿಐ(ಎಂ) ಪಾಲಿಟ್‌ಬ್ಯೂರೋ ಸದಸ್ಯ ಹಾಗೂ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಬುದ್ಧದೇವ್ ಭಟ್ಟಾಚಾರ್ಯ ಮೊದಲಿಗೆ ಮಾತನಾಡಿ ನಮ್ಮ ರಾಜ್ಯದ ಜನತೆಯ ಪರವಾಗಿ ಕ್ರಾಂತಿಕಾರಿ ಶುಭಾಶಯಗಳನ್ನು ಸಲ್ಲಿಸಿದರು. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನೇತೃತ್ವದ ಎಡರಂಗದಲ್ಲಿ ಪಶ್ಚಿಮಬಂಗಾಳದ ಜನರು ಸತತ ಆರನೇ ಬಾರಿ ವಿಶ್ವಾಸ ವ್ಯಕ್ತಪಡಿಸಿದ್ದಾರೆ ಎಂದರು.

ಕಾಲು ಶತಮಾನದಿಂದ ಪಶ್ಚಿಮ ಬಂಗಾಳದಲ್ಲಿ ಆಡಳಿತ ನಡೆಸುತ್ತಿರುವ ಎಡರಂಗ ಸರ್ಕಾರದ ಸಾಧನೆಗಳನ್ನು ಅವರು ವಿವರಿಸಿದರು. ಕ್ರಾಂತಿಕಾರಿ ಭೂಸುಧಾರಣೆ ಕ್ರಮಗಳನ್ನು ತಿಳಿಸಿದರು. ಹೆಚ್ಚುವರಿ ಜಮೀನನ್ನು ಭೂರಹಿತರಿಗೆ, ಸಣ್ಣ ರೈತರಿಗೆ ವಿತರಿಸಿರುವುದು, ದೇಶದಲ್ಲೇ ಪ್ರಪ್ರಥಮ ಬಾರಿಗೆ ಅಧಿಕಾರ ವಿಕೇಂದ್ರಿಕರಣದ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಜಾರಿಗೆ ತಂದಿದ್ದು, ದುಡಿಯುವ ವರ್ಗದ ಹಿತ ರಕ್ಷಿಸಿರುವುದು, ಸರಕಾರಿ ನೌಕರರಿಗೆ ಮುಷ್ಕರದ ಹಕ್ಕನ್ನು ಕೊಟ್ಟಿರುವುದು, ಪ್ರಜಾಸತ್ತಾತ್ಮಕ ಶಾಂತಿಯುತ ಹೋರಾಟಗಳಲ್ಲಿ ಪೋಲೀಸರು ಮಧ್ಯಪ್ರವೇಶ ಮಾಡದಂತೆ ತಡೆದಿರುವುದು ಮುಂತಾದ ಅಂಶಗಳನ್ನು

ಫ್ಯಾಸಿಸ್ಟ್ ಶಕ್ತಿಗಳನ್ನು ಎದುರಿಸಲೇಬೇಕು

ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಕಾಮ್ರೇಡ್ ಹರಿಕಿಷನ್ ಸಿಂಗ್ ಸುರ್ಜಿತ್ ದೇಶ್ದ ಏಕತೆಯನ್ನು ಮುರಿಯಲು ಕೋಮುವಾದಿ ಶಕ್ತಿಗಳು ಹೂಡಿರುವ ಕುಟಿಲೋಪಾಯಗಳನ್ನು ವಿವರಿಸಿದರು. ಕಳೆದ ಎರಡು ವರ್ಷಗಳಿಂದ ಹಿಂದೆಂದಿಗಿಂತಲೂ ದೊಡ್ಡ ಪ್ರಮಾಣದಲ್ಲಿ ಜಾತ್ಯಾತೀತತೆ ಮತ್ತು ಕೋಮುಸೌಹಾರ್ದಕ್ಕೆ ಕುತ್ತು ಬಂದಿದೆ ಎಂದರು.

ನಾನಾ ಜಾತಿಪಂಥಗಳ ಜನರು ಸೌಹಾರ್ದದಿಂದ ಬಾಳುವ ಭಾರತದ ಅಪೂರ್ವ ಪರಂಪರೆಗೆ ಫ್ಯಾಸಿಸ್ಟ್ ಶಕ್ತಿಗಳಿಂದ ಅಪಾಯ ಬಂದೊದಗಿದೆ ಎಂದು ಸುರ್ಜಿತ್ ಹೇಳಿದರು. ಭಾಷಾವಾರು ಪ್ರಾಂತ್ಯಗಳ ರಚನೆಯ ಮಹತ್ವವನ್ನು ವಿವರಿಸಿದ ಹಿರಿಯ ನೇತಾರ, ಬಿಜೆಪಿಯಿಂದ ಭಾಷಾವಾರು ರಾಜ್ಯಗಳ ಪರಿಕಲ್ಪನೆಗೆ ಕೂಡ ಧಕ್ಕೆ ಒದಗಿದೆ ಎಂದರು.

ತನ್ನ ಜನವಿರೋಧಿ ನೀತಿಗಳಿಂದ ಕಾಂಗ್ರೆಸ್ ಪಕ್ಷ ಮೂಲೆಗುಂಪಾಯಿತು ಎಂದು ನೆನಪಿಸಿದರು. ಸಮರ್ಥ ಹಾಗೂ ಪ್ರಬಲ ಪರ್ಯಾಯ ಇಲ್ಲದಿರುವ ಸನ್ನಿವೇಶದಲ್ಲಿ ಕಾಂಗ್ರೆಸ್‌ನ ದೌರ್ಬಲ್ಯಗಳನ್ನು ಬಳಸಿಕೊಂಡು ಕೋಮುವಾದಿ ಬಿಜೆಪಿ ರಾಕ್ಷಸಾಕಾರವಾಗಿ ಬೆಳೆದು ನಿಂತಿದೆ ಎಂದರು.

ಇತಿಹಾಸದ ಪಠ್ಯಪುಸ್ತಕಗಳ ಸಹಿತ ಎಲ್ಲವನ್ನು ಕೇಸರಿಗೊಳಿಸುವ ಬಿಜೆಪಿ ಹುನ್ನಾರವನ್ನು ಸುರ್ಜಿತ್ ಕಟುವಾಗಿ ಖಂಡಿಸಿದರು. ಗುಜರಾತ್


ಸಾಮ್ರಾಜ್ಯಶಾಹಿಗಳ ಹೊಸ ಧಾಳಿಗಳ ಬಗ್ಗೆ ಜನತೆಯನ್ನು ಎಚ್ಚರಿಸಿದ ಕಾಂ. ಸುರ್ಜಿತ್

ವಿದ್ಯಮಾನಗಳು ದೇಶದ ಘನತೆಗೆ ಕಪ್ಪುಚುಕ್ಕೆ ಎಂದು ವರ್ಣಿಸಿದರು.

ಪ್ರಜಾಪ್ರಭುತ್ವಕ್ಕೆ ಗಂಡಾಂತರ

ಪ್ರಧಾನಿಯೊಬ್ಬರು ಅಯ್ಕೆಯಾದರೆ ಅವರು ಸತತವಾಗಿ ಐದು ವರ್ಷ ಕಾಲ ಅಧಿಕಾರದಲ್ಲಿ ಮುಂದುವರಿಯಲು ಅವಕಾಶ ಮಾಡಿಕೊಡಬೇಕೆಂದು ಸಂವಿಧಾನ ಪುನರ್ ಪರಿಶೀಲನೆ ಸಮಿತಿಯ ಶಿಫಾರಸುಗಳನ್ನು ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಗೆ ಗಂಡಾಂತರ ತರುವ ವಿಚಾರವಾಗಿದೆ ಎಂದು ಸುರ್ಜಿತ್ ವಿಶ್ಲೇಷಿಸಿದರು. ಇದು ದೇಶದ ಪ್ರಜಾಪ್ರಭುತ್ವವಾದಿ ರಾಜಕೀಯ ವ್ಯವಸ್ಥೆಯನ್ನು ದುರ್ಬಲಗೊಳಿಸುವ ಸಂಚಿನ ಭಾಗವಾಗಿದೆ. ನ್ಯಾ. ವೆಂಕಟಾಚಲಯ್ಯ ಸಮಿತಿಯ ಶಿಫಾರಸುಗಳ ಜಾರಿಗೆ ನಮ್ಮ ಪಕ್ಷ ಅವಕಾಶ ಕೊಡುವುದಿಲ್ಲ ಎಂದು ಭಾರಿ ಕರತಾಡನದ ನಡುವೆ ಕಾಂ. ಸುರ್ಜಿತ್ ಘೋಷಿಸಿದರು.

ವಿದೇಶಾಂಗ ನೀತಿಯಲ್ಲೂ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ಎಡವಿರುವುದು, ಸಾಮ್ರಾಜ್ಯಶಾಹಿಗಳ ತಾಳಕ್ಕೆ ತಕ್ಕಂತೆ ಕುಣಿಯುತ್ತಿರುವುದನ್ನು ಅವರು ಛೇಡಿಸಿದರು.

ದೇಶಕ್ಕೆ 'ಕೈ' ಕೊಡುವವರು

ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಂಘ ಪರಿವಾರದ ಜನರ ಪಾತ್ರವೇನು? ಎಂದು ಸುರ್ಜಿತ್ ಪ್ರಶ್ನಿಸಿದರು. ವಾಸ್ತವವಾಗಿ ಸಂಘ ಪರಿವಾರದ ದೇಶಪ್ರೇಮ ಈಗಲೂ ಪ್ರಶ್ನಾರ್ಹವೇ ಎಂದರು. ಜಮ್ಮು ಕಾಶ್ಮೀರಕ್ಕೆ ಪೂರ್ಣ ಸ್ವಾಯತ್ತತೆ ನೀಡುವುದು ಕಾಶ್ಮೀರ ಸಮಸ್ಯೆಯ ಪರಿಹಾರದಲ್ಲಿ ಮಹತ್ವದ ಪಾತ್ರವಹಿಸುತ್ತದೆ ಆದರೆ ಸಂವಿಧಾನದ 370 ನೇ ವಿಧಿಯನ್ನು ವಿರೋಧಿಸುವ ಬಿಜೆಪಿ ಇದಕ್ಕೆ ಅಡ್ಡಿಯಾಗಿದೆ ಎಂದು ಟೀಕಿಸಿದರು.

ಜನತೆಯ ಹೋರಾಟಗಳಿಂದ ಪರ್ಯಾಯ 'ಪೀಪಲ್ಸ್ ಫ್ರಂಟ್' ಬಲವರ್ಧನೆ : ಬಸು

ಸರಿಸುಮಾರು ಕಾಲು ಶತಮಾನ ಕಾಲ ರಾಜ್ಯ ಸರ್ಕಾರವೊಂದರ ನೇತೃತ್ವ ವಹಿಸಿ ಜಗತ್ತಿನ ಸಂಸದೀಯ ಪ್ರಜಾಪ್ರಭುತ್ವ ಇತಿಹಾಸದಲ್ಲಿ ದಾಖಲೆ ನಿರ್ಮಿಸಿದ ಮುತ್ಸದ್ಧಿ ಕಾಮ್ರೇಡ್ ಜ್ಯೋತಿಬಸು ಭಾಷಣ ಕೇಳಲು ಜನ ಕಾತರರಾಗಿದ್ದರು.

ಪಶ್ಚಿಮ ಬಂಗಾಳದ ಎಡರಂಗದ ಸರಕಾರದಲ್ಲಿ ರಾಜ್ಯದ ಜನರು ಸತತ ಆರನೇ ಬಾರಿಗೆ ವಿಶ್ವಾಸ ವ್ಯಕ್ತಪಡಿಸುವ ಗುಟ್ಟನ್ನು ಅವರು ರಟ್ಟು ಮಾಡಿದರು. ಸಂವಿಧಾನದ ಚೌಕಟ್ಟಿನಲ್ಲಿ ತನ್ನ ಪರಿಮಿತಿಯಲ್ಲೇ ಎಡರಂಗ ಪ್ರಾಮಾಣಿಕವಾಗಿ ಅನುಸರಿಸಿದ ಜನಪರ ನೀತಿಗಳೇ ಸರಕಾರದ ಯಶಸ್ಸಿಗೆ ಕಾರಣ ಎಂದು ಹೇಳಿದರು.

ಭಾರತೀಯ ಜನತಾಪಕ್ಷ ದೇಶದ ವಿವಿಧತೆಯಲ್ಲಿ ಏಕತೆಯ ಪರಿಕಲ್ಪನೆಯನ್ನು



ನಾಶ ಮಾಡುತ್ತಿದೆ ಎಂದು ಬಸು ಆಪಾದಿಸಿದರು. ಹಿಂದೂ ಸಾಧು-ಸಂತರು ಧರ್ಮ ಸಹಿಷ್ಣುತೆಯನ್ನು ಬೋಧಿಸಿದ್ದರು. ಆದರೆ ಈಗ 'ಹಿಂದುತ್ವವಾದಿ'ಗಳು ಅದಕ್ಕೆ ವ್ಯತಿರಿಕ್ತವಾಗಿ ಪರಧರ್ಮಗಳ ಬಗ್ಗೆ ದ್ವೇಷವನ್ನು ಬಿತ್ತುತ್ತಿದ್ದಾರೆ ಎಂದು ಜ್ಯೋತಿಬಸು ಕಟಕಿಯಾಡಿದರು.

ಪಶ್ಚಿಮ ಬಂಗಾಳದ ಜನತೆ ತಮಗಾಗಿ ಮಾತ್ರ ಹೋರಾಡವುದಿಲ್ಲ, ಅವರು ಇಡೀ ಭಾರತದ ಜನತೆಯ ಪರವಾಗಿ ಹೋರಾಡುತ್ತಾರೆ ಎಂದು ಬಸು ಘೋಷಿಸಿದರು. ಬಸು ಎಡಪಕ್ಷಗಳು ಮತ್ತು ಜಾತ್ಯಾತೀತ ಪಕ್ಷಗಳ ಕೂಟವಾದ ಜನತಾರಂಗದ ಅಧ್ಯಕ್ಷರು ಆಗಿದ್ದಾರೆ. ಜನತಾರಂಗ ಈಗ ದುರ್ಬಲವಾಗಿರುವುದನ್ನು ಅವರು ಒಪ್ಪಿಕೊಂಡರು. ಆದರೆ ಬಿಜೆಪಿ ಹಾಗೂ ಕಾಂಗ್ರೆಸ್‌ಗಳೆರಡಕ್ಕೂ ಸಮರ್ಥ ಪರ್ಯಾಯವನ್ನು ಒದಗಿಸುವ ದಿಸೆಯಲ್ಲಿ ಜನತಾರಂಗವನ್ನು ಬಲಪಡಿಸಲು ಜನತೆಯ ಬೆಂಬಲದೊಂದಿಗೆ ತಾವು ಶ್ರಮಿಸುವುದಾಗಿ ನೆರೆದ ಜನಸ್ತೋಮದ ಹರ್ಷೋದ್ಗಾರಗಳ ನಡುವೆ ಕಾಮ್ರೇಡ್ ಬಸು ಪ್ರಕಟಿಸಿದರು.

ಕೆಂಪು ಜನಸಾಗರ

...ದ್ಧ ನೆರೆದ ಜನಸಾಗರ

... - ವಿಶ್ವ

ಬುದ್ದದೇವ್ ಸಭಿಕರ ಗಮನಕ್ಕೆ ತಂದರು.

ರಾಜ್ಯದ ಶೇಕಡಾ 70 ರಷ್ಟು ಜನರು ಸರಕಾರಿ ಆಸ್ಪತ್ರೆಗಳಲ್ಲಿ ಉಚಿತವಾಗಿ ವೈದ್ಯಕೀಯ ಸೌಲಭ್ಯಗಳನ್ನು ಪಡೆಯುತ್ತಿದ್ದಾರೆ ಎಂದರು.

ಪಶ್ಚಿಮ ಬಂಗಾಳ ಕೋಮು ಸೌಹಾರ್ದದ ಮಾದರಿಯನ್ನು ಅವರು ವಿವರಿಸಿದರು. ಇದರಲ್ಲಿ ಎಡಪಂಥೀಯರ ಪಾತ್ರ ಹಿರಿದಾದುದು ಎಂದರು.

ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದಾಗಿನಿಂದ ಪಶ್ಚಿಮ ಬಂಗಾಳ ಮಾತ್ರವಲ್ಲದೆ ಇಡೀ ದೇಶದ ಪರಿಸ್ಥಿತಿ ಬಿಗಡಾಯಿಸಿದೆ ಎಂದು ಕೇಂದ್ರದ ಆರ್ಥಿಕ - ಕೋಮುವಾದಿ ನೀತಿಗಳ ಮೇಲೆ ಬುದ್ದದೇವ್ ಹರಿಹಾಯ್ದರು. ಐಎಂಎಫ್-ವಿಶ್ವಬ್ಯಾಂಕ್ ತಾಳಕ್ಕೆ ತಕ್ಕಂತೆ ಕುಣಿಯುವಂಥ ಕೇಂದ್ರ ಸರ್ಕಾರದ ಆರ್ಥಿಕ ಒಡಂಬಡಿಕೆಗೆ ಸಹಿ ಹಾಕಲು ಪಶ್ಚಿಮ ಬಂಗಾಳ ಸರಕಾರ ದೃಢವಾಗಿ ತಿರಸ್ಕರಿಸಿದೆ ಎಂದು ನುಡಿದರು.

ಪಶ್ಚಿಮ ಬಂಗಾಳ ಮತ್ತು ಕರ್ನಾಟಕದ ಜನತೆ ದೇಶದ ಇತರ ಭಾಗಗಳ ಜನರ ಹೆಗಲಿಗೆ ಹೆಗಲು ಕೊಟ್ಟು ಮತಾಂಧ ಶಕ್ತಿಗಳನ್ನು ಸೋಲಿಸಬಹುದು ಎಂದು ಮುಖ್ಯಮಂತ್ರಿ ಅತೀವ ಆತ್ಮವಿಶ್ವಾಸದಿಂದ ಹೇಳಿದರು.

ಕೇರಳದ ಮಾಜಿಮುಖ್ಯಮಂತ್ರಿ ಕಾಂ. ಇ.ಕೆ.ನಾಯನಾರ್, ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರಲು ಕೇರಳದಲ್ಲಿ ಕೋಮುವಾದಿ ಶಕ್ತಿಗಳ ಜತೆ ಕೈ ಜೋಡಿಸುವ ಸಮಯಸಾಧಕ ರಾಜಕಾರಣ ಮಾಡಿದ್ದನ್ನು ಗಮನಕ್ಕೆ ತಂದರು. ಶಾಂತಿರೂಪ ಮಹಾತ್ಮ ಗಾಂಧಿಯ ನಾಡು ಹಿಂಸೆಯ ಬೀಡಾಗಿರುವುದಕ್ಕೆ ವಿಷಾದ ವ್ಯಕ್ತಪಡಿಸಿದರು.

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಕಾಂ.ಮಾರುತಿ ಮಾನ್ಪಡೆ ಸ್ವಾಗತಿಸಿ ರ್‍ಯಾಲಿಯ ಮಹತ್ವವನ್ನು ವಿವರಿಸಿದರು. ಕಾರ್ಯದರ್ಶಿ ಮಂಡಳಿಯ ಇನ್ನೊಬ್ಬ ಸದಸ್ಯ ಕಾಂ. ಎಸ್.ವೈ.ಗುರುಶಾಂತ್ ಧನ್ಯವಾದ ಅರ್ಪಿಸಿದರು. ಪಾಲಿಟ್‌ಬ್ಯೂರೋ ಹಾಗೂ ಕೇಂದ್ರ ಸಮಿತಿ ಸಭೆ ಯಶಸ್ವಿಯಾಗಿ ನಡೆಯಲು ಸಹಕರಿಸಿದ ಎಲ್ಲರ ಸಹಕಾರವನ್ನು ಅವರು ಸ್ಮರಿಸಿದರು.

ಸಿಪಿಐ(ಎಂ) ಬೆಂಗಳೂರು ಜಿಲ್ಲಾ ಕಾರ್ಯದರ್ಶಿ ಕಾಂ. ಕೆ.ಪ್ರಕಾಶ್ ಕಾರ್ಯಕ್ರಮ ನಿರೂಪಿಸಿದರು.

'ಭಾರತ ಉಳಿದರಷ್ಟೇ ನಾವೂ ಉಳಿಯುತ್ತೇವೆ'

ಬೃಂದಾ ಕಾರಟ್, ದೇಶದ ಮಹಿಳಾ ಆಂದೋಲನದ ಒಂದು ಪ್ರಮುಖ ಹೆಸರು. ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ (AIDWA) ಪ್ರಧಾನ ಕಾರ್ಯದರ್ಶಿ ಮಹಿಳೆಯರ ಮೇಲಿನ



ದೌರ್ಜನ್ಯಗಳ ವಿರುದ್ಧ ಸಿಡಿದೇಳುವುದರ ಜತೆಜತೆಯಲ್ಲೇ ಮಹಿಳೆಯರೂ ಪುರುಷರೂ ಜತೆಗೂಡಿ ಅಸಮಾನತೆಯನ್ನು ಹೊಡೆದೋಡಿಸುವ ಹೋರಾಟ ರೂಪಿಸಬೇಕೆಂದು ಪ್ರತಿಪಾದಿಸುವವರು. ಇವರು ಸಿಪಿಐ(ಎಂ) ಕೇಂದ್ರ ಸಮಿತಿ ಸದಸ್ಯರೂ ಹೌದು. ಬೆಂಗಳೂರು ರ್‍ಯಾಲಿಯಲ್ಲಿ ಕಾಮ್ರೇಡ್ ಬೃಂದಾ ಅವರ ಕಿಚ್ಚಿದೆಯ ಮಾತುಗಳು ಕೇಳಿಬಂತು.

ಹಾಸ್ಯ, ವ್ಯಂಗ್ಯ, ಟೀಕೆ, ಮೊನಚು ಮಾತುಗಳಿಂದ ಕೂಡಿದ ಬೃಂದಾರ ಹಿಂದಿ ಭಾಷಣ ಜನತೆಯನ್ನು ಆಕರ್ಷಿಸಿತು.

ಕಾಂ. ಬೃಂದಾ ತಮ್ಮ ಭಾಷಣದ ಆರಂಭದಲ್ಲಿ 12ನೇ ಶತಮಾನದ ಮಹಾನ್ ಕ್ರಾಂತಿಕಾರಿ ಸಮಾಜ ಸುಧಾರಕ ಬಸವಣ್ಣನವರನ್ನು ನೆನಪಿಸಿಕೊಂಡರು. ಈಗ ಇನ್ನೊಬ್ಬ ಬಸವನ ಹೆಸರು ಕರ್ನಾಟಕದಲ್ಲಿ ಚಲಾವಣೆಯಲ್ಲಿದೆ ಎಂದ ಬೃಂದಾ ಬಿಜೆಪಿ ರಾಜ್ಯಾಧ್ಯಕ್ಷ ಬಸವರಾಜ ಪಾಟೀಲ ಸೇಡಂರನ್ನು ಹೆಸರಿಸಿದರು. ಆದರೆ ಆ ಬಸವಣ್ಣ ಎಲ್ಲಿ, ಈ ಬಸವರಾಜ ಎಲ್ಲಿ ಎಂದು ಮಾರ್ಮಿಕವಾಗಿ ಪ್ರಶ್ನಿಸಿ; 12ನೇ ಶತಮಾನದ ಬಸವಣ್ಣ ಸಮಾಜದ ಸುಧಾರಣೆಗಾಗಿ ಶ್ರಮಿಸಿದರು. ಆದರೆ ಸೇಡಂ ದೇಶದ ಏಕತೆಯನ್ನು ಮುರಿಯಲು ಪಣ ತೊಟ್ಟಂತಿರುವ ಕೋಮುವಾದಿ ಪಕ್ಷವೊಂದರ ನಾಯಕತ್ವವನ್ನು ವಹಿಸಿದ್ದಾರೆ ಎಂದು ಛೇಡಿಸಿದರು.

ಜನಸಾಮಾನ್ಯರು ದೇವರನ್ನು ತಲುಪಲು ಧರ್ಮದ ನೆರವು ಪಡೆಯುತ್ತಾರೆ ಇನ್ನು ಕೆಲವರಿಗೆ ಅಧಿಕಾರ ಹಿಡಿಯಲು ಧರ್ಮ ಸಾಧನವಾಗಿದೆ ಎಂದು ಸಂಘ ಪರಿವಾರದ ಮೇಲೆ ಬೃಂದಾ ಹರಿಹಾಯ್ದರು.

ಮೆರವಣಿಗೆ ಬರುತ್ತಿದ್ದಾಗ ಒಂದು ಕಡೆ ಜನರ ಗುಂಪು ನಿಂತಿದ್ದನ್ನು ಕಂಡು ಯಾಕೆಂದು ವಿಚಾರಿಸಿದಾಗ 'ನಿನಗಾಗಿ' ಎಂಬ ಸಿನಿಮಾ ನಡೆಯುತ್ತಿದ್ದುದು ಗೊತ್ತಾಯಿತು. ಇದು ಸಿನಿಮಾದ ವಿಚಾರವಾಯಿತು. ನಮ್ಮ ದೇಶದ ಪ್ರಧಾನಿ ವಾಜಪೇಯಿ ಅವಿವಾಹಿತರು. ಅವರ ಜೀವನ ವೈಯಕ್ತಿಕವಾಗಿ 'ಯಾರಿಗಾಗಿಯೂ' ಆಗಲಿಲ್ಲ. ಆದರೆ ಅದೇ ವಾಜಪೇಯಿ 'ಇಡೀ ಭಾರತ ನಿನಗಾಗಿ... ನಿನಗಾಗಿ... ನಿನಗಾಗಿ...' ಎಂದು ದೇಶವನ್ನು ಅಮೆರಿಕಾದ ಪದತಲಕ್ಕೆ ಸಮರ್ಪಿಸುತ್ತಿದ್ದಾರೆ ಎಂದು ಅತ್ಯಂತ ಗಂಭೀರವಾದ ವಿಚಾರವನ್ನು ಬೃಂದಾ ಈ ರೀತಿಯಾಗಿ ಜನರ ಮುಂದಿಟ್ಟರು. ನೂರು ಕೋಟಿ ಜನಸಂಖ್ಯೆಯ ಬೃಹತ್ ದೇಶ ಸಾಮ್ರಾಜ್ಯಶಾಹಿ ಶಕ್ತಿಗಳ ಮುಂದೆ ಶರಣಾಗುತ್ತಿರುವ ಪರಿಯನ್ನು ಅವರು ಬಿಚ್ಚಿಟ್ಟರು.

ಗುಜರಾತ್ ಬಚಾವೋ... ಭಾರತ್ ಬಚಾವೋ

ಕೋಮುವಾದಿ, ಫ್ಯಾಸಿಸ್ಟ್ ಶಕ್ತಿಗಳಿಂದ ಇಡೀ ಭಾರತ ದೇಶವನ್ನು ಉಳಿಸಬೇಕಾಗಿದೆ. ಹಾಗೇನಾದರೂ ಆಗಬೇಕಿದ್ದಲ್ಲಿ ಮೊದಲು ಗುಜರಾತನ್ನು ಉಳಿಸಬೇಕಾಗಿದೆ ಎಂದು ಹೇಳಿದ ಬೃಂದಾ ಕಾರಟ್, ಅಲ್ಪಸಂಖ್ಯಾತರ ನರಮೇಧ ನಡೆಯುತ್ತಿರುವ ಗುಜರಾತಿಗೆ ತಾವು ಭೇಟಿ ನೀಡಿದ ವೇಳೆ ಕಂಡ ಅನುಭವಗಳನ್ನು ವಿವರಿಸಿದರು.

ಭಾರತ ಉಳಿದರಷ್ಟೇ ನಾವು ಉಳಿಯುತ್ತೇವೆ. ಈ ಸಂಘರ್ಷದಲ್ಲಿ ಗುಜರಾತ್ ಆದ್ಯತೆಯ ಪ್ರಶ್ನೆಯಾಗಿದೆ ಎಂದರು.

ಕೃಷ್ಣ ರಾಜ್ಯದಲ್ಲಿ ವಸ್ತ್ರಾಪಹರಣ...

ಕರ್ನಾಟಕದಲ್ಲಿ ಮಹಿಳೆಯ ಮೇಲೆ ನಡೆಯುತ್ತಿರುವ ದೌರ್ಜನ್ಯಗಳನ್ನು ಪ್ರಸ್ತಾಪಿಸಿದ ಬೃಂದಾ 'ಕೃಷ್ಣ ರಾಜ್ಯದಲ್ಲಿ ಸ್ತ್ರೀಯರ ವಸ್ತ್ರಾಪಹರಣ ಆಗುತ್ತಿದೆ' ಎಂದು ವ್ಯಂಗ್ಯವಾಡಿದರು.

ಅಮೇರಿಕದ ಜತೆ ಸೇನಾ ಸಹಕಾರಕ್ಕೆ ವಿರೋಧ:

ವಾಜಪೇಯಿ ಸರಕಾರ ಅಮೇರಿಕದ ಸೇನೆಯ ಜತೆ ಕೈಜೋಡಿಸುವ ಕಾರ್ಯಕ್ರಮ ಮುಂದುವರಿಸುವುದನ್ನು ಸಿಪಿಐ(ಎಂ) ಕೇಂದ್ರ ಸಮಿತಿ ತೀಕ್ಷ್ಣವಾಗಿ ಖಂಡಿಸಿತು. ಅಮೇರಿಕದ ವಿಶೇಷ ಪಡೆಗಳು ಮತ್ತು ಭಾರತೀಯ ಪ್ಯಾರಾಟ್ರೂಪರ್‌ಗಳು ಆಗ್ರಾದಲ್ಲಿ ಇತ್ತೀಚಿಗೆ ನಡೆಸಿದ ಜಂಟಿ ಕರಸತ್ತು ಭಾರತ ಅಮೇರಿಕ ಸೇನಾ ಸಹಕಾರದಲ್ಲಿ ಹೊಸ ಹಂತವಾಗಿದೆ. ತುಂಬಾ ಸೂಕ್ಷ್ಮ ಪ್ರದೇಶವಾಗಿರುವ ಈಶಾನ್ಯ ವಲಯದಲ್ಲಿ ಮುಂದಿನ ಕಾರ್ಯಾಚರಣೆ ನಡೆಯಲಿದೆ ಎಂಬ ವರದಿಗಳಿವೆ.

ಅಮೇರಿಕದ ಸಶಸ್ತ್ರ ಪಡೆಗಳು ಪಾಕಿಸ್ತಾನದಲ್ಲಿ ನೆಲೆನಿಂತಿವೆ. ಹಾಗೂ ಅಫಘಾನಿಸ್ತಾನ- ಪಾಕಿಸ್ತಾನ ಗಡಿಯಲ್ಲಿ ಕಾರ್ಯನಿರತವಾಗಿವೆ. ಪಾಕಿಸ್ತಾನದ ಜತೆ ನಿಕಟ ಹಾಗೂ ಅತೀ ಮಹತ್ವದ ಸಂಬಂಧ ಹೊಂದಿರುವುದರಿಂದ, ಜಮ್ಮು ಮತ್ತು ಕಾಶ್ಮೀರದಲ್ಲಿ ಚಟುವಟಿಕೆ ನಡೆಸುತ್ತಿರುವ ಮೂಲಭೂತವಾದಿ ಶಕ್ತಿಗಳನ್ನು ತಡೆಯುವಂತೆ ಪಾಕ್ ಅಧ್ಯಕ್ಷ ಮುಷರಫ್‌ರ ಮೇಲೆ ಅಮೇರಿಕ ಒತ್ತಡ ಹೇರುತ್ತಿಲ್ಲ.

ಈ ವಲಯದಲ್ಲಿ ಅಮೇರಿಕದ ಸೇನಾ ಹಿತ ಕಾಯಲು ಅದರ ಜತೆ ಕೈಜೋಡಿಸಲು ಒಪ್ಪುವ ಮೂಲಕ ವಾಜಪೇಯಿ ಸರಕಾರ, ಸ್ವತಃ ಭಾರತದ ವ್ಯೂಹಾತ್ಮಕ ಹಾಗೂ ಭದ್ರತಾ ಹಿತಾಸಕ್ತಿಗಳನ್ನು ಕಡೆಗಣಿಸಿದೆ ಮತ್ತು ಅಗೌರವಿಸಿದೆ.

ಅಮೇರಿಕ ಮತ್ತು ಪಾಕಿಸ್ತಾನದ ನಡುವಣ ಸೇನಾ ಸಹಕಾರದ ರೀತಿಯಲ್ಲೇ ಭಾರತವೂ ಅಮೇರಿಕದ ಜತೆ ಸೇನಾ ಸಹಕಾರ ಮಾಡಿಕೊಳ್ಳುವುದರಿಂದ ಉಂಟಾಗಿರುವ ಅಪಾಯವನ್ನು ಅರಿಯಲು ಎಲ್ಲಾ ಪ್ರಜಾಪ್ರಭುತ್ವವಾದಿ ಹಾಗೂ ದೇಶಪ್ರೇಮಿ ಜನರಿಗೆ ಸಿಪಿಐ(ಎಂ) ಕೇಂದ್ರ ಸಮಿತಿ ಮನವಿ ಮಾಡಿದೆ.

ಇಸ್ರೇಲ್ ದಾಳಿ - ಖಂಡನೆ:

ಪ್ಯಾಲೆಸ್ಟೈನ್ ಜನತೆಯ ವಿರುದ್ಧ ಇಸ್ರೇಲ್ ಆಕ್ರಮಣ ಮುಂದುವರಿಸುತ್ತಿರುವುದನ್ನು ಸಿಪಿಐ(ಎಂ) ಕೇಂದ್ರ ಸಮಿತಿ ಸಭೆ ಕಟುವಾಗಿ ಖಂಡಿಸಿತು. ಇಸ್ರೇಲ್ ಪಶ್ಚಿಮ ದಂಡೆಯಿಂದ ತನ್ನ ಸೈನ್ಯವನ್ನು ವಾಪಸ್ ಕರೆಸಿಕೊಂಡರೂ ಅದು ಪ್ಯಾಲೆಸ್ಟೈನ್ ಪಟ್ಟಣಗಳ ಮೇಲೆ ದಾಳಿ ನಡೆಸುವುದನ್ನು, ಕೊಲ್ಲುವುದನ್ನು ಹಾಗೂ ಬಂಧಿಸುವುದನ್ನು ಮುಂದುವರಿಸಿದೆ.

ಇಸ್ರೇಲ್ ಸರಕಾರದ ಜತೆ ನಿಕಟ ಬಾಂಧವ್ಯ ಬೆಳೆಸಿಕೊಂಡಿರುವ ಬಿಜೆಪಿ ಸರಕಾರ, ಇಸ್ರೇಲ್ ಸರಕಾರದ ಕ್ರಮಗಳನ್ನು ಖಂಡಿಸಲು ಹಾಗೂ ಪ್ಯಾಲೆಸ್ಟೈನ್ ಚಳವಳಿಗೆ ಪೂರ್ಣ ಬೆಂಬಲ ಸಾರಲು ಹಿಂದೇಟು ಹಾಕುತ್ತಿದೆ. ಸ್ವತಂತ್ರ ಪ್ಯಾಲೆಸ್ಟೈನ್ ರಾಷ್ಟ್ರ ರಚನೆಗಾಗಿ ಅಲ್ಲಿನ ಜನತೆ ನಡೆಸುತ್ತಿರುವ ನ್ಯಾಯಯುತ ಹೋರಾಟಕ್ಕೆ ಬೆಂಬಲ ಕ್ರೋಢೀಕರಿಸಲು ಕೇಂದ್ರ ಸಮಿತಿ ನಿರ್ಧರಿಸಿತು.

ಅಮೇರಿಕದ ಕೃಷಿ ಸಬ್ಸಿಡಿ:

ಅಮೇರಿಕದ ರೈತರಿಗೆ ಮುಂದಿನ 10 ವರ್ಷಗಳಲ್ಲಿ ಸಬ್ಸಿಡಿ ನೀಡುವ ಕುರಿತು ಕಾನೂನು ರೂಪಿಸಿರುವ ಅಮೇರಿಕ ಸರಕಾರದ ಇತ್ತೀಚಿನ ನಿರ್ಧಾರವನ್ನು ಕೇಂದ್ರ ಸಮಿತಿ ಕಟುವಾಗಿ ಟೀಕಿಸಿದೆ. ಇತರ ದೇಶಗಳ ಸರಕಾರಗಳು, ಮುಖ್ಯವಾಗಿ ಅಭಿವೃದ್ಧಿಶೀಲ ದೇಶಗಳು, ಕೃಷಿ ಸಬ್ಸಿಡಿ ನೀಡುವುದನ್ನು ಅಮೇರಿಕ ವಿರೋಧಿಸುತ್ತಿದೆ. ಆದರೆ ತನ್ನದೇ ದೇಶದ ಹಿತದ ಪ್ರಶ್ನೆ ಬಂದಾಗ ಅದು ದ್ವಿಮುಖ ಧೋರಣೆ ಅನುಸರಿಸುತ್ತದೆ ಎಂದು ಸಭೆ ದೂಷಿಸಿತು. ಭಾರತ ಸರಕಾರ ಈ ವಿಚಾರದಲ್ಲಿ ಒಂದು ಸ್ಪಷ್ಟ ಧೋರಣೆ ತಳೆಯಬೇಕು. ಭಾರತೀಯ ಕೃಷಿಗೆ ಸೂಕ್ತ ನೆರವು ನೀಡಲು ಅವಕಾಶ ಕೊಡಬೇಕೆಂದು ಒತ್ತಾಯಿಸಬೇಕು ಹಾಗೂ ಡಬ್ಲ್ಯುಟಿಓನಲ್ಲಿ ಅಮೇರಿಕದ ದ್ವಿಮುಖ ಧೋರಣೆಗಳನ್ನು ವಿರೋಧಿಸಬೇಕು ಎಂದು ಸಭೆ ಆಗ್ರಹಪಡಿಸಿತು.

ಸಹಮತದ, ಸಮಚಿತ್ತರದ ಸಂಗಾತಿ ಸಿ.ಎನ್.

ದೀರ್ಘಕಾಲದಿಂದಲೂ ಜೊತೆಜೊತೆಯಾಗಿ ಸಾಗಿ, ಕ್ರಾಂತಿಕಾರಿ ಹೋರಾಟದಲ್ಲಿ ಧುಮುಕಿ, ಶ್ರಮಿಸಿದ ಸಿಪಿಐ(ಎಂ) ನ ಸೆಕ್ರೆಟಾರಿಯೇಟ್ ಸದಸ್ಯರೂ, ಹಿರಿಯ ಸಂಗಾತಿಗಳಾದ ಕೆ.ಆರ್.ಶ್ರೀಯಾನ್, ವಿಜೆಕೆ ನಾಯರ್ ತಮ್ಮ ನೆನಪನ್ನು ಬಿಚ್ಚಿಟ್ಟಿದ್ದಾರೆ. ಸಿ.ಎನ್.ರವರ ವಿಶಿಷ್ಟ ಗುಣ, ಕೊಡುಗೆ, ಒಡನಾಟಗಳನ್ನು ಸ್ಮರಿಸಿದ್ದಾರೆ

ಕೆ.ಆರ್. ಶ್ರೀಯಾನ್


ಹರಿಹರ ಸಿಐಟಿಯು ಸಮ್ಮೇಳನದಲ್ಲಿ

ಮಾರ್ಕ್ಸ್‌ವಾದಿ ಸಿದ್ಧಾಂತದ ಬಗ್ಗೆ ಆಳವಾದ ಅಭ್ಯಾಸ ನಡೆಸಿ ಅದರ ಅನುಷ್ಠಾನಕ್ಕಾಗಿ ಅಚಲ ವಿಶ್ವಾಸದಿಂದ ತನ್ನ ಕೊನೆಯುಸಿರಿನ ತನಕವೂ ಚಿಂತಿಸುತ್ತಾ ಬಂದಿರುವ ಒಬ್ಬ ಆಧರಣೀಯ ಸಂಗತಿ ಕಾ. ಸಿ. ನಂಜುಂಡಪ್ಪನವರು ತಾ। 26-5-2002ರಂದು ಮಂಗಳೂರಿನಲ್ಲಿ ಸಿಪಿಐ(ಎಂ) ಪಕ್ಷದ ಜಿಲ್ಲಾ ಕಛೇರಿ ಎ.ಕೆ.ಜಿ. ಭವನದಲ್ಲಿ ನಿಧನರಾದರು. ಅವರ ನಿಧನವು ಪಕ್ಷಕ್ಕೆ ತುಂಬಲಾರದ ನಷ್ಟವಾಗಿದೆ.

ಕಷ್ಟದ ಬದುಕು

ದಿ.3.9.2939ರಂದು ಕೋಲಾರ ಜಿಲ್ಲೆಯ ಶಿಡ್ಲಘಟ್ಟ ತಾಲೂಕಿನ ಮುತ್ತೂರು ಎಂಬ ಊರಿನಲ್ಲಿ ಜನಿಸಿದ ಅವರು ಬಡತನದಲ್ಲೇ ಹುಟ್ಟಿ, ಬಾಲ್ಯದಲ್ಲೇ ತಂದೆ ತಾಯಿಗಳನ್ನು ಕಳೆದುಕೊಂಡ ಹುಡುಗ ನಂಜುಂಡಪ್ಪನವರು ಊರವರ ಸಹಕಾರದಿಂದ ವಾರಾನ್ನ ಉಂಡು ಬಹಳ ಕಷ್ಟದಲ್ಲೇ ವಿದ್ಯಾಭ್ಯಾಸ ನಡೆಸಿ ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಎಂ.ಕಾಂ. ಪದವಿ ಪಡೆದರು.

ನೌಕರಿಗೆ ರಾಜಿನಾಮೆ - ಪೂರ್ಣಾವಧಿ ಕ್ರಾಂತಿಕಾರಿ

1960ರಲ್ಲಿ ಬೆಂಗಳೂರು ಸಿಟಿ ಕಾರ್ಪೋರೇಶನ್ ನೀರು ಸರಬರಾಜು ಇಲಾಖೆಯಲ್ಲಿ ಸೂಪರ್‌ವೈಸರ್‌ರಾಗಿ 1961 ಜನವರಿಯಿಂದ ಜೂನ್‌ವರೆಗೆ ಸರಕಾರದ ಬೀದರ್ ಪಾಲಿಟೆಕ್ನಿಕ್‌ನಲ್ಲಿ ಗುಮಾಸ್ತ - ಸ್ಟೋರ್‌ಕೀಪರಾಗಿ, 1961 ಜೂನಿನಿಂದ 1968ರ ವರೆಗೆ ಕೇಂದ್ರ ಸರಕಾರದ ಹುಬ್ಬಳ್ಳಿ ಟೆಲಿಕಾಂ ಇಲಾಖೆಯಲ್ಲಿ ನೌಕರರಾಗಿ ಕೆಲಸ ಮಾಡಿದ ಕಾ.ಸಿ. ನಂಜುಂಡಪ್ಪನವರು ಈ ಕಾಲಾವಧಿಯಲ್ಲಿ ಪಕ್ಷದ ನಿಕಟ ಸಂಪರ್ಕವನ್ನಿಟ್ಟುಕೊಂಡು ಸದಾ ಮಾರ್ಕ್ಸ್‌ವಾದದ ಬಗ್ಗೆ ಅಭ್ಯಾಸವನ್ನು ಮುಂದುವರಿಸುತ್ತಾ ತಾನೊಬ್ಬ ಸರಕಾರಿ ನೌಕರಿಯಲ್ಲಿರುವುದಕ್ಕಿಂತ ಪಕ್ಷದ ಸದಸ್ಯನಾಗಿ ಪಕ್ಷಕ್ಕಾಗಿ ಜನತೆಗಾಗಿ ದುಡಿಯಬೇಕೆಂದು ಚಿಂತಿಸುತ್ತಲೇ ಇದ್ದರು.

1965 ಡಿಸೆಂಬರ್‌ನಲ್ಲಿ ಸಿಪಿಐ(ಎಂ) ಪಕ್ಷದ ಸದಸ್ಯರಾದರು. ಸಿಪಿಐ ಪಕ್ಷದ ಸುಧಾರಣಾವಾದೀ ಧೋರಣೆಯಿಂದ ಪ್ರತ್ಯೇಕವಾಗಿ 1964ರಲ್ಲಿ ಸಿಪಿಐ(ಎಂ) ಪಕ್ಷದ ಹೆಸರಿನಲ್ಲಿ ದೇಶದ ಕಾರ್ಮಿಕ ವರ್ಗವನ್ನು ಕ್ರಾಂತಿಕಾರಿ ಪಥದತ್ತ ಮುನ್ನಡೆಸಲು ಪಕ್ಷವು ತನ್ನ ಕಾರ್ಯಕ್ರಮವನ್ನು ನಿರೂಪಿಸಿದ ಮೇಲೆ ಕಾ.ಸಿ. ನಂಜುಂಡಪ್ಪನವರು 1965ರಲ್ಲಿ ಸಿಪಿಐ(ಎಂ) ಪಕ್ಷದ ಸದಸ್ಯರಾದರು. 1968ರಲ್ಲಿ ತನ್ನ ನೌಕರಿಗೆ ರಾಜಿನಾಮೆ ನೀಡಿ ಪಕ್ಷದ ಪೂರ್ಣಕಾಲ ಕಾರ್ಯಕರ್ತನಾಗಿ ದುಡಿಯಲು ತೀರ್ಮಾನಿಸಿದರು. ಆಗ ರಾಜ್ಯ ಸಮಿತಿ ಕಾರ್ಯದರ್ಶಿಯಾಗಿದ್ದ ಎಂ.ಎಚ್. ಕೃಷ್ಣಪ್ಪನವರ ನಿಕಟ ಸಂಪರ್ಕವನ್ನಿಟ್ಟುಕೊಂಡು ಅವರ ನಿರ್ದೇಶನದಂತೆ ಮಂಗಳೂರು ಕೇಂದ್ರವಾಗಿಟ್ಟುಕೊಂಡು ಕೆಲಸ ಮಾಡಲು ತೀರ್ಮಾನಿಸಿದರು. 1969 ಜನವರಿಯಿಂದ ಪೂರ್ಣಕಾಲ ಕಾರ್ಯಕರ್ತನಾಗಿ ದುಡಿಯಲು ಆರಂಭಿಸಿದರು. 1969 ಏಪ್ರಿಲ್ ಕೊನೆಗೆ ಮಂಗಳೂರಿಗೆ ಪಕ್ಷದ ತೀರ್ಮಾನದಂತೆ ಆಗಮಿಸಿದರು.

ಮಂಗಳೂರಿಗೆ ಬಸ್ಸಿನಲ್ಲೆ ಬಂದು ಇಳಿದ ಕಾ. ನಂಜುಡಪ್ಪನವರು ನೇರವಾಗಿ ಪಕ್ಷದ ಪ್ರೆಸ್‌ಗೆ ಬಂದರು. ಬಂದವರೇ ಆ ಪ್ರೆಸ್ಸಿನ ಜವಾಬ್ದಾರಿಯಲ್ಲಿದ್ದ ನನ್ನನ್ನು ಭೇಟಿಯಾಗಿ ರಾಜ್ಯ ಕಾರ್ಯದರ್ಶಿಯವರು ಕೊಟ್ಟಿರುವ ಪತ್ರವನ್ನು ನನಗೆ ತೋರಿಸಿ ಪರಿಚಯ ಮಾಡಿಕೊಂಡರು. ಹೀಗೆ ದ.ಕ. ಜಿಲ್ಲೆಗೆ ಆಗಮಿಸಿದ ಕಾ.ಸಿ. ನಂಜುಂಡಪ್ಪ ನವರನ್ನು ಪ್ರಥಮವಾಗಿ ಭೇಟಿಯಾದ ನಾನು ಮಂಗಳೂರು ಬೋಳಾರದಲ್ಲಿರುವ ಎಸ್.ಕೆ.ಟೈಲ್ ವರ್ಕರ್ಸ್ ಯೂನಿಯನಿನ ಕಚೇರಿಗೆ ಕರೆದುಕೊಂಡು ಹೋಗಿ ಅವರಿಗೆ ಬಳಸಿಕೊಳ್ಳಲು ವ್ಯವಸ್ಥೆಯನ್ನು ಮಾಡಿದೆ. ಅಂದಿನಿಂದ ಅವರ ಕೊನೆಯುಸಿರಿನವರೆಗೂ ನನ್ನ ಮತ್ತು ಅವರ ಸಂಬಂಧ ಬಹಳ ನಿಕಟವಾಗಿತ್ತು. ಎಷ್ಟೋ ವಿಷಯಗಳಲ್ಲಿ ನಮಗೆ ಸಹಮತವಿತ್ತು.

ಕಾರ್ಲ್‌ಮಾರ್ಕ್ಸ್ ಶಾಲೆ ಪ್ರಿನ್ಸಿಪಾಲ್

ದ.ಕ. ಜಿಲ್ಲೆಗೆ ಪಕ್ಷದ ಕೆಲಸಕ್ಕಾಗಿ ಬಂದಿರುವ ಕಾಂ। ನಂಜುಡಪ್ಪನವರನ್ನು ಪಕ್ಷದ ಜಿಲ್ಲಾ ಸಮಿತಿ ಕಾರ್ಯದರ್ಶಿ ಮಂಡಳಿ ಸದಸ್ಯರನ್ನಾಗಿ ಸೇರಿಸಿ ಅವರಿಗೆ ಪ್ರಥಮ ಜವಾಬ್ದಾರಿಯಾಗಿ ಅಂದು ಆರಂಭಿಸಿದ ಕಾರ್ಲ್‌ಮಾರ್ಕ್ಸ್ ಸ್ಕೂಲಿನ ಪ್ರಿನ್ಸಿಪಾಲರಾಗಿ ಜವಾಬ್ದಾರಿ ನೀಡಲಾಯಿತು. ಪಕ್ಷದ ಸದಸ್ಯರಿಗೆ ಓದುಬರಹ ಕಲಿಸುವುದರಿಂದ ಹಿಡಿದು ಮಾರ್ಕ್ಸ್‌ವಾದಿ ಸಿದ್ಧಾಂತವನ್ನು ಅನೇಕರಿಗೆ ಪರಿಚಯಿಸುವ ಕೆಲಸವನ್ನು ಅವರು ಯಶಸ್ವಿಯಾಗಿ ನಡೆಸಿದರು.

1970ರಲ್ಲಿ ಮಂಗಳೂರು ಕೇಂದ್ರವಾಗಿದ್ದುಕೊಂಡೇ ತೋಟ ಕಾರ್ಮಿಕರ ಮಧ್ಯೆ ಕೆಲಸ ಮಾಡಿ ಚಿಕ್ಕಮಗಳೂರಿಗೆ ಕಳುಹಿಸಿ ಕೊಡಲಾಯಿತು. ಚಿಕ್ಕಮಗಳೂರಿನ ತೋಟ ಕಾರ್ಮಿಕರ ಮಧ್ಯೆ ಕೆಲಸ ಆರಂಭಿಸಿದ ನಂಜುಂಡಪ್ಪನವರು ಅವರ ಸಂಘಟನೆಯಾದ ಕರ್ನಾಟಕ ಪ್ರೊವಿನಿಶಿಯಲ್


ಚೀನಾ ಪ್ರವಾಸದಲ್ಲಿ

ಪ್ಲಾಂಟೇಶನ್ ವರ್ಕ್‌ರ್ಸ್ ಯೂನಿಯನಿನ ಕಾರ್ಯದರ್ಶಿಯಾಗಿ ಕೆಲವು ವರುಷ ಕೆಲಸ ಮಾಡಿದರು. ಅವರ ಕಾಲದಲ್ಲಿ ತೋಟ ಕಾರ್ಮಿಕರ ಸಂಘಟನೆ ವಿಶಾಲವಾಗಿ ಬೆಳೆಯಿತು. ಕೆಲವು ಪೂರ್ಣಕಾಲ ಕಾರ್ಯಕರ್ತರನ್ನು ಅವರು ಆ ಸಂಘಟನೆಗೆ ತಂದರು. ಆ ಸಂಘಟನೆಯ ಕೆಲಸದಲ್ಲಿ ಒಂದು ವ್ಯವಸ್ಥೆಯನ್ನು ಮಾಡಿದ ಮುಖ್ಯ ಪಾತ್ರ ಅವರದ್ದಾಗಿತ್ತು. ತರುವಾಯ ಅದರ ಅಧ್ಯಕ್ಷರಾಗಿಯೂ ಕೆಲಸ ಮಾಡಿದರು. ಈ ಕಾಲಾವಧಿಯಲ್ಲಿ ಚಿಕ್ಕಮಗಳೂರಿನ ಕಾಫೀ ಕ್ಯೂರಿಂಗ್ ಮತ್ತು ಇತರ ಕಾರ್ಮಿಕರ ಸಂಘದ ಅಧ್ಯಕ್ಷರಾಗಿ, ಕಾಫಿ ಕ್ಯೂರಿಂಗ್ಸ ಸಾಮಿಲ್ಸ್ ಮತ್ತು ಇತರ ಕಾರ್ಮಿಕರ ಸಂಘ ಇದರ ಇಲ್ಲಿಯವರೆಗೆ ಇದರ ಕೋಶಾಧಿಕಾರಿಯಾಗಿ ಕೆಲಸ ಮಾಡಿದ್ದಾರೆ. ಸಿಐಟಿಯು ಸಂದೇಶದ ಸ್ಥಾಪಕ ಸಂಪಾದಕರಾಗಿ ಅವರು ಕೆಲವು ವರ್ಷ ಕಾರ್ಯನಿರ್ವಹಿಸಿದ್ದಾರೆ. ಕಾಫಿ ಬೋರ್ಡು ಸದಸ್ಯರಾಗಿ 2 ಬಾರಿ ಆಯ್ಕೆಯಾಗಿದ್ದರು. ಒಂದು ಬಾರಿ ಪ್ರಾವಿಡೆಂಟ್ ಫಂಡ್ ಕಮಿಟಿ ಸದಸ್ಯರಾಗಿ ಕೂಡಾ ಅವರು ಆಯ್ಕೆಯಾಗಿದ್ದಾರೆ.

ವಿದೇಶಿ ಭೇಟಿ

1986 ಆಗಸ್ಟ್, ಸೆಪ್ಟೆಂಬರ್ ತಿಂಗಳಲ್ಲಿ 22 ದಿವಸಗಳ ಕಾಲ ಚೀನಾ ಪ್ರವಾಸ ಕೈಗೊಂಡಿದ್ದರು. ಆ ಸಮಯದಲ್ಲಿ ಥೈಲೆಂಡ್ ಬ್ಯಾಂಕಾಕ್, ಬರ್ಮಾಗಳಿಗೆ ಭೇಟಿ ನೀಡಿದ್ದರು.

ಬರಹಗಾರ

1969 ರಿಂದ ಪೂರ್ಣಕಾಲ ಕಾರ್ಯಕರ್ತನಾಗಿ ತೋಟ ಕಾರ್ಮಿಕರ ಸಂಘಟನೆಗಳು ಹಾಗೂ ಸಿಐಟಿಯು ರಾಜ್ಯ ಸಮಿತಿ ಕಾರ್ಯದರ್ಶಿಯಾಗಿ ಪ್ರಾಮಾಣಿಕವಾಗಿ ಗೌರವಯುತವಾಗಿ ಕೆಲಸಮಾಡಿ ಸ್ಥಾಪಕ ಅಧ್ಯಕ್ಷರಾಗಿ ಕರ್ನಾಟಕ ಪ್ಲಾಂಟೇಷನ್ ಕಾರ್ಮಿಕರ ಸಮನ್ವಯ ಸಮಿತಿಯ ಸಂಚಾಲಕರಾಗಿ, ಅನಂತರ ಕರ್ನಾಟಕ ತೋಟ ಕಾರ್ಮಿಕರ ಒಕ್ಕೂಟದ ಅಧ್ಯಕ್ಷರಾಗಿ ಕೆಲಸ ಮಾಡಿದ್ದಾರೆ.

ಹೊಸ ಹೊಣೆ

1978 ಡಿಸೆಂಬರ್‌ನಿಂದ 1989 ಮಾರ್ಚ್‌ವರೆಗೆ ಸಿಐಟಿಯು ಕರ್ನಾಟಕ ರಾಜ್ಯ ಸಮಿತಿಯ ಪ್ರಧಾನ ಕಾರ್ಯದರ್ಶಿಯಾಗಿ ದುಡಿದರು. 1978 ಜನವರಿಯಲ್ಲಿ ಪಕ್ಷ ರಾಜ್ಯ ಸಮಿತಿಯ ಸದಸ್ಯರಾಗಿ ಆಯ್ಕೆಯಾದರು. 1978 ಆಗಸ್ಟ್ ನಿದಂ 1997 ಡಿಸೆಂಬರ್‌ವರೆಗೆ ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿಯ ಕಾರ್ಯದರ್ಶಿ ಮಂಡಲಿ ಸದಸ್ಯರಾಗಿ ಆಯ್ಕೆಯಾಗಿ ದುಡಿದರು. ಈ ಕಾಲಾವಧಿಯಲ್ಲಿ ಪಕ್ಷದ ತೀರ್ಮಾನದಂತೆ ರಾಜ್ಯ ಕೇಂದ್ರಕ್ಕೆ ಬೆಂಗಳೂರಿಗೆ ಬಂದು ಸಿಐಟಿಯು ಕೇಂದ್ರದಲ್ಲಿ ಮತ್ತು ಸಿಐಟಿಯು ಜವಾಬ್ದಾರಿ ಬಿಟ್ಟ ಬಳಿಕ ಪಕ್ಷದ ರಾಜ್ಯ ಸಮಿತಿ ಕೇಂದ್ರದಲ್ಲಿ ಕೆಲಸ ಮಾಡಿದರು.

1975 ರಿಂದ 1997ರ ವರೆಗೆ ಸಿಐಟಿಯು ಜನರಲ್ ಕೌನ್ಸಿಲ್ ಸದಸ್ಯರಾಗಿ, 1987ರಿಂದ 1997ರ ವರೆಗೆ ಸಿಐಟಿಯು ವರ್ಕಿಂಗ್ ಕಮಿಟಿ ಸದಸ್ಯರಾಗಿ 1972ರ ನವಂಬರಿನಿಂದ ಆಲ್ ಇಂಡಿಯಾ ಪ್ಲಾಂಟೇಶನ್ ವರ್ಕರ್ಸ್ ಫೆಡರೇಶನಿನ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ, 1975ರಿಂದ 1978ರ ವರೆಗೆ ಅದರ ಉಪಾಧ್ಯಕ್ಷರಾಗಿ ಅನಂತರ ಕಾರ್ಮಿಕರ ಮಧ್ಯೆ ಪಕ್ಷದ ಸದಸ್ಯರ ಮಧ್ಯೆಯೂ ಸ್ನೇಹಶೀಲ ವ್ಯಕ್ತಿಯಾಗಿ ಗುರುತಿಸಲ್ಪಟ್ಟಿದ್ದಾರೆ. ಸಂಗಾತಿಗಳು ಅವರನ್ನು ಸಿ.ಎನ್ ಎಂದೇ ಕರೆಯುತ್ತಿದ್ದರು. ಪಕ್ಷದ ಕಾರ್ಯದರ್ಶಿ ಮಂಡಲಿ ಸದಸ್ಯರಾಗಿ ರಾಜ್ಯ ಕೇಂದ್ರದಲ್ಲಿ 1978ರಿಂದ 1997ರ ವರೆಗೆ ಅವರು ವಿವಿಧ ಜವಾಬ್ದಾರಿಗಳನ್ನು ನಿರ್ವಹಿಸಿದ್ದಾರೆ. ಈ ಕಾಲಾವಧಿಯಲ್ಲಿ ಸುಮಾರು 10 ಪುಸ್ತಕಗಳನ್ನು, ಕಿರುಹೊತ್ತಿಗೆಗಳನ್ನು ಬರೆದು ಪ್ರಕಟಿಸಿದ್ದಾರೆ. ಅವರು ಬರೆದ ಕೊನೆಯ ಪುಸ್ತಕ ಸಿಐಟಿಯುನ ಎರಡು ದಶಕಗಳು ಈ ಪುಸ್ತಕದಲ್ಲಿ ಕಾರ್ಮಿಕ ಚಳುವಳಿಯ ಕುರಿತು ಬರೆದ ಸಂಗ್ರಹಗಳಿವೆ.

ಮತ್ತೇ ಬೆಂಗಳೂರಿಗೆ

ರಾಜ್ಯ ಕೇಂದ್ರದ ಜವಾಬ್ದಾರಿಯನ್ನು ಬಿಡಿಸಿ ಅವರನ್ನು ಪಕ್ಷವು ಮಂಗಳೂರು ಕೇಂದ್ರವಾಗಿದ್ದು ಕೆಲಸ ಮಾಡಲು ದ.ಕ. ಜಿಲ್ಲೆಗೆ ಕಳುಹಿಸಿಕೊಟ್ಟಿತ್ತು. 1998 ಫೆಬ್ರವರಿ ಮಂಗಳೂರಿಗೆ ಬಂದ ಕಾ.ಸಿ. ಎನ್. ದ.ಕ. ಜಿಲ್ಲಾ ಸಮಿತಿಯ ಕಾರ್ಯದರ್ಶಿ ಮಂಡಳಿ ಸದಸ್ಯರಾಗಿ ಜವಾಬ್ದಾರಿ ನಿರ್ವಹಿಸಿದ್ದಾರೆ. ದ.ಕ. ಜಿಲ್ಲೆಯಲ್ಲಿ ಪಕ್ಷದ ಸದಸ್ಯರಿಗೆ ಸೈದ್ಧಾಂತಿಕ ತರಬೇತಿ ಕ್ಲಾಸುಗಳಲ್ಲಿ ಒಬ್ಬ ಅಧ್ಯಾಪಕರಾಗಿ ಕೆಲಸ ಮಾಡಿದ್ದಾರೆ. ಚಳುವಳಿಗಳಿಗೆ ಸಂಬಂಧಿಸಿದ ಕರಪತ್ರ ಬರೆಯುವುದು ಚಳವಳಿಗಳಲ್ಲಿ ಭಾಗವಹಿಸುವುದು ಬೇರೆ ಬೇರೆ ಸಂಗಾತಿಗಳೊಂದಿಗೆ ವೈಯುಕ್ತಿಕವಾಗಿ ಸಂಪರ್ಕ ಇಟ್ಟುಕೊಂಡು ಅವರೊಂದಿಗೆ ಇಂದಿನ ರಾಜಕೀಯ ಬೆಳವಣಿಗೆಗಳ ಬಗ್ಗೆ ತನ್ನ ಅನುಭವವನ್ನು ಹೇಳುತ್ತಿದ್ದರು. ಪಕ್ಷದ ಹಿತೈಷಿಗಳನ್ನೂ ಗುರುತಿಸಿ ಅವರೊಂದಿಗೆ ಸದಾ ಸಂಪರ್ಕ ಇಟ್ಟುಕೊಳ್ಳುವುದರಲ್ಲಿ ಕಾ.ಸಿ. ಎನ್. ತುಂಬಾ ಮುತುವರ್ಜಿ ವಹಿಸುತ್ತಿದ್ದರು. ಅವರಿಗೆ ರಾಜ್ಯದಲ್ಲಿ ಅನೇಕ ಜಿಲ್ಲೆಗಳಲ್ಲಿ ವೈಯುಕ್ತಿಕವಾಗಿ ಇಂತಹ ಅನೇಕರೊಂದಿಗೆ ಸಂಪರ್ಕವಿದೆ. ಇದು ಅವರಲ್ಲಿದ್ದ ವಿಶಿಷ್ಟ ಗುಣವಾಗಿದೆ.

ನಾನು ಮತ್ತು ಕಾ.ಸಿ.ಎನ್. ಪಕ್ಷದಲ್ಲಿ ಬಹಳ ಆತ್ಮೀಯ ಸಂಗಾತಿಗಳು. ಎಷ್ಟೋ ಸಂದರ್ಭಗಳಲ್ಲಿ ನಾವು ತುಂಬಾ ಚರ್ಚೆ ಮಾಡುತ್ತಿದ್ದವು. ನಾನು ಬೆಂಗಳೂರಿಗೆ ರಾಜ್ಯ ಸಮಿತಿ ಸಭೆಗೆ ಹೋದಾಗಲೆಲ್ಲಾ ನಾವು ತುಂಬಾ ಚರ್ಚೆ ಮಾಡುತ್ತಿದ್ದವು. ನಾನು ಬೆಂಗಳೂರಿಗೆ ರಾಜ್ಯ ಸಮಿತಿ ಸಭೆಗೆ ಹೋದಾಗಲೆಲ್ಲಾ ಅವರ ರತನ್‌ಮಹಲ್ ರೂಮ್‌ಗೆ ಹೋಗಿ ಅವರೊಂದಿಗೆ ಇರುತ್ತಿದ್ದೆನು. ನನ್ನ ಮತ್ತು ಅವರ ಅಭಿಪ್ರಾಯಗಳು ಸಾಮಾನ್ಯ ಒಂದೇ ದಾರಿಯಲ್ಲಿ ಹೋಗುತ್ತಿದ್ದ ವೈಯಕ್ತಿಕವಾಗಿಯಾಗಲೀ ಸಮಿತಿ ಸಭೆಗಳಲ್ಲಾಗಲೀ ನಾವು ವ್ಯಕ್ತಪಡಿಸುತ್ತಿರುವ ಅಭಿಪ್ರಾಯಗಳಲ್ಲಿ ಹೆಚ್ಚು ಸಹಮತವಿರುತ್ತಿತ್ತು. ಯಾವುದೇ ಚಳವಳಿಯಲ್ಲಿರಲೀ ಯಾವುದೇ ವೇದಿಕೆಯಲ್ಲಿರಲಿ ನಾವು ಅತ್ಮೀಯ ಸಂಗಾತಿಗಳು. ಕಾ.ಸಿ.ಎನ್‌ರನ್ನು ಬೆಂಗಳೂರು ಕೇಂದ್ರದ ಜವಾಬ್ದಾರಿಯಿಂದ ಬದಲಿಸಿದಾಗ (1998ರಲ್ಲಿ ಅಂದು ರಾಜ್ಯ ಸಮಿತಿ ಸದಸ್ಯರಾಗಿ ಮಾತ್ರ ಇದ್ದ ಅವರು ಬೆಂಗಳೂರು ಕೇಂದ್ರ ಬಿಟ್ಟು ಬೇರೆ ಜಿಲ್ಲೆಗಳಿಗೆ ಹೋಗಿ ಕೆಲಸ ಮಾಡಬಹುದೆಂಬ ಅಬಿಪ್ರಾಯ ಬಂದಾಗ ಅವರನ್ನು ಅವರ ಇಚ್ಛೆ ಪ್ರಕಾರ ಮಂಗಳೂರಿಗೆ ಬರಲು ಅನುವು ಮಾಡಿಕೊಟ್ಟವರಲ್ಲಿ ನಾನು ಮುಖ್ಯ. ಪಕ್ಷಕ್ಕಾಗಿ ಎಲ್ಲವನ್ನೂ ತ್ಯಾಗಮಾಡಿ ಪಕ್ಷವೇ ತನ್ನ ಸರ್ವಸ್ವ ಎಂದು ನಂಬಿರುವ ಒಬ್ಬ ಬ್ರಹ್ಮಚಾರಿಯಾಗಿ, ತನ್ನ ಕುಟುಂಬ, ಕುಟುಂಬದ ತನ್ನವರೂಂತ ಯಾರೂ ಇಲ್ಲದ ಒಬ್ಬಂಟಿಗನಾಗಿಯೇ ಇದ್ದ ಸಂಗಾತಿಯನ್ನು ಆದರಿಸುವುದು ಪಕ್ಷದ ಕರ್ತವ್ಯವಾಗಿದೆ. ಈ ದೃಷ್ಟಿಯಿಂದ ಕಾ.ಸಿ.ಎನ್ ರವರನ್ನು ಮಂಗಳೂರಿಗೆ ಬರುವಂತೆ ಆಹ್ವಾನಿಸಿದ್ದು.

ಕಳೆದ ಒಂದು ವರುಷದಿಂದ ಅವರ ಆರೋಗ್ಯ ಕೆಡಲಾರಂಭಿಸಿತು. ಪ್ರಸಿದ್ಧ ನರತಜ್ಞ ಡಾಕ್ಟರರಿಂದ ಅವರನ್ನು ಪರೀಕ್ಷಿಸಲಾಗಿತ್ತು. ಡಾಕ್ಟರರು ಪರೀಕ್ಷೆ ಮಾಡಿ ಅವರ ಅನಾರೋಗ್ಯ ಎಮ್.ಎನ್.ಡಿ ಎಂದು ತಿಳಿಸಿದರು. ಅವರನ್ನು ಕೇರಳದ ಆಯುರ್ವೇದ ಕಾಲೇಜ್ ಆಸ್ಪತ್ರೆಗೆ ಕರೆದುಕೊಂಡು

ಹೋಗಿ ದಾಖಲಿಸಲಾಯಿತು. ಸುಮಾರು 3 ತಿಂಗಳು ಅಲ್ಲಿ ಶುಶ್ರೂಷೆ ಪಡೆದರು. ಆದರೆ ಅವರ ಆರೋಗ್ಯ ಮಾತ್ರ ಸುಧಾರಣೆಯಾಗಲಿಲ್ಲ. ಮಂಗಳೂರಿಗೆ ಹಂತಿರುಗಿದ ಮೇಲೆ ಕೆಲವು ದಿನಗಳ ಬಳಿಕ ಇನ್ನೊಬ್ಬ ನ್ಯೂರೋ ಸ್ಪೆಶಲಿಸ್ಟ್‌ರನ್ನು ಸಂಪರ್ಕಿಸಿ ಪರೀಕ್ಷಿಸಿಲಾಯಿತು. ಅವರೂ ಹಿಂದಿನ ಡಾಕ್ಟರರು ಹೇಳಿದ ಅಭಿಪ್ರಾಯವನ್ನೇ ಹೇಳಿದರು. ದಿನ ಸರಿದಂತೆ ಅವರ ಆರೋಗ್ಯ ಕೆಡುತ್ತಾ ಬಂತು. ಮಾತು ಬರದಾಯಿತು. ಬರವಣಿಗೆ ನಡೆಸಲು ಕಡೆಗೆ ಕೈಗಳಲ್ಲೂ ಶಕ್ತಿಇಲ್ಲದಂತಾಯಿತು. ಕಳೆದ ಫೆಬ್ರವರಿ ತಿಂಗಳ ತಾ. 9 ಮತ್ತು 10 ರಂದು ಮಂಗಳೂರು ಕೊಂಚಾಡಿಯಲ್ಲಿ ನಡೆದ ಕೊಂಚಾಡಿ ಯುವಕ ಕಲಾ ಮಂಡಳಿಯ ಸುವರ್ಣ ಮಹೋತ್ಸವದ ಸ್ಮರಣ ಸಂಚಿಕೆಗೆ ಅವರು ಬರೆದುಕೊಟ್ಟ ಲೇಖನ ಅವರ ಕೊನೆಯ ಲೇಖನವಾಗಿದೆ. ಇಡೀ ದೇಹಸ್ಥಿತಿಯೇ ತುಂಬಾ ಕ್ಷೀಣವಾಯಿತು. ಆಹಾರ ಸೇವಿಸಲೂ ಸಾಧ್ಯವಾಗಲಿಲ್ಲ. ನಡೆಯಲೂ ಸಾಧ್ಯವಾಗದ ಸ್ಥಿತಿ. ಪಕ್ಷದ ಕಚೇರಿ ನೋಡಿಕೊಳ್ಳುತ್ತಿದ್ದ ಕಾ. ಬಾಲಕೃಷ್ಣ ಶೆಟ್ಟರು ಅವರ ಎಲ್ಲಾ ರೀತಿಯ ಸೇವೆಯನ್ನೂ ಮಾಡುತ್ತಿದ್ದರು. ವರು ತನ್ನ ಸ್ವಂತ ಸಂಬಂಧಿಕನಿಗಿಂತಲೂ ಹೆಚ್ಚಾಗಿ ನೋಡಿಕೊಂಡರು. ಅವರಿಗೆ ಸಹಕಾರಿಯಾಗಿ ಗಿರಿಯಪ್ಪ, ಶಕಿಲಾ, ಜೆಸಿಂತ ಇವರೆಲ್ಲಾ ತಮ್ಮ ಕೈಲಾದಮಟ್ಟಿಗೆ ಕೊ'ಯತನಕವೂ ಸೇವೆ ಮಾಡಿದ್ದಾರೆ. ಆದರೂ ಕಾ.ಸಿ. ಎನ್. ಅವರ ರೋಗ ಉಲ್ಬಣಗೊಂಡು ಕೊನೆಗೆ ತಾ. 26.5.2002 ರಂದು ಸಂಜೆ ಘ. 5ಕ್ಕೆ ಕೊನೆಯುಸಿರೆಳೆದರು. ಅವರು ಅಂತಿಮ ಸಂಸ್ಕಾರವನ್ನು ಮರುದಿನ ತಾ। 26 ರಂದು ನಡೆಸಲಾಯಿತು. ಅಲ್ಲಿಯೇ ಶ್ರದ್ಧಾಂಜಲಿ ಸಭೆ ನಡೆಸಲಾಯಿತು. ಅಗಲಿದ ಸಂಗಾತಿಯ ಬಗ್ಗೆ ಕೆ.ಆರ್. ಶ್ರೀಯನ್, ವಿ.ಜೆ.ಕೆ. ನಾಯರ್, ಜಿ.ಎನ್. ನಾಗರಾಜ್, ಬಿ. ಮಾಧವ, ಕೆ. ಶಂಕರ್, ವಿ. ಸುಕುಮಾರ್ ಮತ್ತು ಶಿವಶಂಕರ್‌ರವರು ಮಾತನಾಡಿದರು. ಅವರಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು. ಅಂತ್ಯಕ್ರಿಯೆಯಲ್ಲಿ ನೂರಾರು ಜನ ಪಕ್ಷದ ಸದಸ್ಯರೂ, ಹಿತೈಷಿಗಳೂ ಭಾಗವಹಿಸಿದ್ದರು.

ಕರ್ನಾಟಕದಲ್ಲಿ ಪಕ್ಷವು ಒಬ್ಬ ಉತ್ತಮ ಕ್ರಾಂತಿಕಾರೀ ಮುಖಂಡರನ್ನು ಕಳೆದುಕೊಂಡಿದೆ. ಅದರಲ್ಲೂ ನನ್ನ ವೈಯುಕ್ತಿಕ ಮಟ್ಟಿಗೆ ಹೇಳುವುದಾದರೆ ನನ್ನ ಅತೀ ಆತ್ಮೀಯ ಸಂಗಾತಿಯನ್ನು ಕಳೆದುಕೊಂಡೆ ಅವರೊಂದಿಗೆ ಜಿಲ್ಲೆಯಿಂದ ಹಿಡಿದು ರಾಜ್ಯದ ರಾಷ್ಟ್ರೀಯ ಸಮ್ಮೇಳನಗಳಲ್ಲಿ ಭಾಗವಹಿಸಿದ್ದೆ. ಮಲೆನಾಡು ಪ್ರದೇಶದ ಜವಾಬ್ದಾರಿ ಕಾ.ಸಿ.ಎನ್ ಹೊತ್ತಿದ್ದಗ ಅವರೊಂದಿಗೆ ಹಾಸನ, ಚಿಕ್ಕಮಗಳೂರು, ಶಿವಮೊಗ್ಗ ಜಿಲ್ಲೆಗಳ ಸಮ್ಮೇಳನಗಳಲ್ಲಿ ನಾನು ಬಾಗವಹಿಸಿದ್ದೆ. ಪಕ್ಷದ ಕೇಂದ್ರ ಸಮಿತಿಯು ದೆಹಲಿಯಲ್ಲಿ ತರಬೇತಿ ಶಿಬಿರವನ್ನು ವ್ಯವಸ್ಥೆ ಮಾಡಿದಾಗ ನಾನೂ ಸಿ.ಎನ್.ರವರೂ ಅದರಲ್ಲಿ ಭಾಗವಹಿಸಿದ್ದೆವು. ನಾನು ಸೋವಿಯತ್ ಯೂನಿಯನ್‌ನ 1987ರಲ್ಲಿ ಹೋದಾಗ ಅವರು ಬೆಂಗಲೂರಿನಲ್ಲಿ ಇತರ ಸಂಗಾತಿಗಳೊಂದಿಗೆ ವಿಮಾನ ನಿಲ್ದಾಣದಲ್ಲಿ ನನ್ನನ್ನು ಬಿಳ್ಕೊಂಡಿದ್ದರು. ಪಕ್ಷದ 9ನೇ ಅಧಿವೇಶದ ಜಲಂಧರ್‌ನಲ್ಲಿ ನಡೆದಾಗ ನಾನೂ ಅವರೂ ಪ್ರತಿನಿಧಿಗಳಾಗಿ ಭಾಗವಹಿಸಿದ್ದೆವು. ಬಳಿಕ 10 ರಿಂದ 14ನೇ ಅಧಿವೇಶನದವರೆಗೂ ಅವರು ನನ್ನೊಂದಿಗೆ ಕರ್ನಾಟಕ ಪ್ರತಿನಿಧಿಯಾಗಿ ಭಾಗವಹಿಸಿದ್ದೆವು. ಬಳಿಕೆ 10 ರಂದ 14ನೇ ಅಧಿವೇಶದವರೆಗೂ ಅವರು ನನ್ನೊಂದಿಗೆ ಕರ್ನಾಟಕ ಪ್ರತಿನಿಧಿಯಾಗಿ ಭಾಗವಹಿಸಿದ್ದಾರೆ. ಸಿಐಟಿಯು ರಾಷ್ಟ್ರೀಯ ಸಮ್ಮೇಳನದಲ್ಲಿಯೂ ಒಂದೆರಡು ಬಾರೀ ನಾನೂ ಅವರೂ ಭಾಗವಹಿಸಿದ್ದೆವು. ನನಗೆ ಓದಲು ಪುಸ್ತಕಗಳನ್ನು ನೀಡಿ ಪ್ರೋತ್ಸಾಹಿಸುತ್ತಿದ್ದರು. ಕೆಲವು ವಿಷಯಗಳಲ್ಲಿ ನಾನು ಚಿಂತಿತನಾದಾಗ ಆ ಬಗ್ಗೆ ಅವರಲ್ಲೇ ಚರ್ಚಿಸಿದರೆ ಅದಕ್ಕೆ ಸರಿಯಾದ ಮಾರ್ಗ ಸೂಚಿಸುತ್ತಿದ್ದರು. ಪಕ್ಷದ ತೀರ್ಮಾನದಂತೆ ಎರಡು ಬಾರಿ ನಾನು ಉಳ್ಳಾಲ ವಿಧಾನಸಭಾ ಕ್ಷೇತರ್ದಲ್ಲಿ ಸ್ಪರ್ಧಿಸಿದಾಗ ಈ ಕ್ಷೇತ್ರಕ್ಕೆ ಪ್ರಚಾರಕ್ಕಾಗಿ ಬಂದಿದ್ದರು. ಹೀಗೆ ಒಬ್ಬ ಸ್ನೇಹಶೀಲ, ವಿಚಾರವಂತ ಉತ್ತಮ ಮಾರ್ಕ್ಸ್‌ವಾದಿ ಚಿಂತಕನನ್ನು ನಾವು (ವೈಯುಕ್ತಿಕವಾಗಿ ನಾನು) ಕಳಕೊಂಡಿದ್ದೇವೆ. ಅವರು ಕೂಡಿಟ್ಟ ನೂರಾರು ಮಾರ್ಕ್ಸ್‌ವಾದಿ ಸೈದ್ಧಾಂತಿಕ ಮತ್ತಿತರ ಜನರಲ್ ಪುಸ್ಕಗಳನ್ನು ಬಿಟ್ಟುಹೋಗಿದ್ದಾಗ ಅಧನ್ನು ಅವರ ಸ್ಮಾರಕ ಲೈಬ್ರೇರಿಯಾಗಿ ಪಕ್ಷ ಉಪಯೋಗಿಸಬಹುದು.



ಸಿಐಟಿಯು ಮೂರನೇ ರಾಜ್ಯ ಸಮ್ಮೇಳನದಲ್ಲಿ

ಸೂರಿ ಶ್ರದ್ಧಾಂಜಲಿ.....

ಪುಟ 3 ರಿಂದ

ವಾದದ ಅಲ್ಲದೇ ದುಡಿಯುವ ವರ್ಗದ ಚಳುವಳಿ, ರಾಷ್ಟ್ರೀಯ ಪ್ರಶ್ನೆ ಕುರಿತ ಹಲವಾರು ಉಪನ್ಯಾಸಗಳು, ಬರಹಗಳು ಕಿರು ಹೊತ್ತಿಗೆಗಳನ್ನು ಬರೆದಿದ್ದಾರೆ. ಅವರು ಐಕ್ಯರಂಗ ವಾರಪತ್ರಿಕೆಯ ಸಂಪಾದಕ ಮಂಡಳಿ ಸದಸ್ಯರಾಗಿದ್ದರು. ಸಿಐಟಿಯು ಸಂದೇಶ ಪತ್ರಿಕೆಯ ಸ್ಥಾಪಕ ಸಂಪಾದಕರೂ ಆಗಿದ್ದರು. ಅವರ ಬರಹಗಳು ಉಪನ್ಯಾಸಗಳ ಮೂಲಕ ದುಡಿವ ವರ್ಗದ, ಕಾರ್ಯಕರ್ತರ ಅರಿವನ್ನು ಹೆಚ್ಚಿಸಲು ಸಾಧ್ಯವಾಗಿದೆ.ಅವರ ತ್ಯಾಗ ಹಾಗೂ ಸ್ಮರಣೀಯ ಸ್ಫೂರ್ತಿದಾಯಕವಾದದ್ದಾಗಿದೆ.

ಮದುವೆಯಾದರೆ ಕ್ರಾಂತಿಕಾರಿ ಚಳುವಳಿಗೆ ತೊಂದರೆಯಾಗಬಹುದೆಂದು ನಿರ್ಧರಿಸಿ ಅವಿವಾಹಿತರಾಗಿಯೇ ಉಳಿದರು. ಪಕ್ಷವೇ ಅವರ ಮನೆ, ಕುಟುಂಬದಂತೆ ಇದ್ದದ್ದು. ಮಾರ್ಕ್ಸ್‌ವಾದ ಲೆನಿನ್‌ವಾದವನ್ನು ಎತ್ತಿಹಿಡಿದ ಅವರು ಪರಿಷ್ಕರಣ ವಾದವನ್ನು ವಿರೋಧಿಸಿದವರು. ಇಂತಹ ಒಬ್ಬ ಕ್ರಾಂತಿಕಾರಿಯಅಗಲಿಕೆ ದುಡಿಯುವ ವರ್ಗಕ್ಕೆ, ಸಿಪಿಐ(ಎಂ)ಗೆ ತುಂಬಲಾರದ ನಷ್ಟವಾಗಿದೆ.

ಅವರ ಅಂತ್ಯಕ್ರಿಯೆ ಇಂದು ಮಂಗಳೂರಿನಲ್ಲಿ ಜರುಗಿದ್ದು, ರಾಜ್ಯ ಸಮಿತಿಯ ಮುಖಂಡರಾದ ಜಿ.ಎನ್. ನಾಗರಾಜ್, ವಿ.ಜೆ.ಕೆ. ನಾಯರ್, ಬಿ.ಮಾಧವ, ಕೆ.ಆರ್.ಶ್ರೀಯಾನ್ ಮುಂತಾದವರು ಪಾಲ್ಗೊಂಡಿದ್ದರು. ಅವರ ನಿಧನಕ್ಕೆ ಸಿಪಿಐ(ಎಂ) ರಾಜ್ಯಸಮಿತಿ ತೀವ್ರವಾದ ಸಂತಾಪ ಸೂಚಿಸಿ ಶ್ರದ್ಧಾಂಜಲಿ ಅರ್ಪಿಸಿದೆ.

'ಕ್ರಾಂತಿಕಾರಿ ಸಿದ್ಧಾಂತದೊಂದಿಗೆ ಸನ್ನದ್ಧ ಸಂಗಾತಿ ಸಿ.ಎನ್.'

- ವಿ.ಜೆ.ಕೆ.ನಾಯರ್

ಕಾಮ್ರೇಡ್ ಸಿ.ಎನ್.ರವರ ದೀರ್ಘಕಾಲಿನ ಒಡನಾಡಿಯಾದ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರೂ, ಸಿಐಟಿಯು ವಿನ ಪ್ರಧಾನಕಾರ್ಯದರ್ಶಿಗಳಾದ ಸಂಗಾತಿ ವಿ.ಜೆ.ಕೆ.ಯವರು ತಮ್ಮ ನೆನಪುಗಳನ್ನು ಹಂಚಿಕೊಂಡಿದ್ದಾರೆ.

ಮೇ 26, 2002ರ ಸಂಜೆ ಮಂಗಳೂರಿನಲ್ಲಿ ಅವರು ನಿಧನರಾದರು. ಅವರಿಗೆ ಒಂದು ವರ್ಷದ ಹಿಂದೆ ಕೇಂದ್ರ ಚಾಲನಾ ನರ ರೋಗ ತಗುಲಿತ್ತೆಂದು ಡಾಕ್ಟರುಗಳು ಗುರುತಿಸಿದ ಮೇಲೆ ಅವರ ಜೀವವುಳಿಸಲು ಸಾಧ್ಯವಿಲ್ಲ ಎಂದು ತಿಳಿದಿದ್ದ ನಮಗೆ ಅವರು ಬದುಕಿರುವವರೆಗೆ ಅವರಿಗೆ ಉತ್ತಮ ಬೆಂಬಲ ಸಿಗುವಂತೆ ಮಾಡುವುದಷ್ಟೇ ಸಾಧ್ಯವಿತ್ತು. ಅವರ ಶವಸಂಸ್ಕಾರವನ್ನು ಮಂಗಳೂರಿನಲ್ಲಿ ನಡೆಸಲಾಯಿತು. ಇದರಲ್ಲಿ ಹಲವರು ಭಾಗವಹಿಸಿದ್ದರು, ನಾನು, ಜಿ.ಎನ್.ನಾಗರಾಜ್, ಕೆ.ಆರ್. ಶ್ರೀಯಾನ್, ಬಿ.ಮಾಧವ ಮತ್ತಿತರರಿದ್ದೆವು.

ಸರಳ ಪರಿಚಯ

ನಾನು ಸಿಎನ್.ರವರನ್ನು ಮೊದಲು ನೋಡಿದ್ದು ಎಪ್ಪತ್ತರ ದಶಕದಲ್ಲಿ ಆರಂಭದಲ್ಲಿ ಭಾರತ ಇಲೆಕ್ಟ್ರಾನಿಕ್ಸ್ ನೌಕರರ ಸಂಘದ ಬೆಳವಣಿಗೆಗಳನ್ನು ಆಗ ಮಂಗಳೂರಿನಲ್ಲಿ ಸೇರಿದ್ದ ರಾಜ್ಯ ಮುಖಂಡರಿಗೆ ವರದಿ ಮಾಡಲು ಹೋದಾಗ ಅವರೆಲ್ಲಾ ಎಕೆಜಿಯವರ ಭೇಟಿ ಸಂದರ್ಭದಲ್ಲಿ ಸೇರಿದ್ದರು.

ಕಾಮ್ರೇಡ್ ಸಿ.ಎನ್. ತಮ್ಮ ಸರಳ ಉಡುಗೆಯಲ್ಲಿದ್ದರೂ ಬೆನ್ನ ಹಿಂದೆ ಶರಟಿನ ಕಾಲರಿನಿಂದ ಒಂದು ಕೊಡೆ ನೇತಾಡುತ್ತಿತ್ತು. ಆಗಿನ ದ.ಕ. ಜಿಲ್ಲೆಯ ಉಸ್ತುವಾರಿಯೊಳಗಿದ್ದ ಚಿಕ್ಕಮಗಳೂರನ್ನು ಪ್ರತಿನಿಧಿಸುವ ಜಿಲ್ಲಾ ಸಮಿತಿ ಸದಸ್ಯ ಎಂದು ಅವರನ್ನು ನನಗೆ ಪರಿಚಯಿಸಲಾಯಿತು.

ಪ್ಲಾಂಟೇಷನ್ ಪ್ರದೇಶದತ್ತ

ನಂತರ ಕಾಮ್ರೇಡ್ ಸಿ.ಎನ್. ರನ್ನು ಬಹಳ ಹತ್ತಿರದಿಂದ ನೋಡಿದ್ದೇನೆ. ಕೋಲಾರ ಜಿಲ್ಲೆಯ ಮಳ್ಳೂರಿನಲ್ಲಿ ಒಬ್ಬ ಅನಾಥವಾಗಿ ಬೆಳೆದವರು ಅವರು. ಮಂಗಳೂರಿನಲ್ಲಿ ಸ್ನಾತಕೋತ್ತರ ಪದವಿ ಪಡೆದರು. ಅಂಚೆ-ತಂತಿ ಇಲಾಖೆಯಲ್ಲಿ ಸರ್ಕಾರಿ ಸೇವೆಗೆ ಸೇರಿದರು. ಅರವತ್ತರ ದಶಕದ ಅಂತ್ಯದಲ್ಲಿ ಅಲ್ಲಿ ಏರ್ಪಟ್ಟ ಒಂದು ಗುಂಪಿನಲ್ಲಿ ಭಾಗವಾಗಿದ್ದರು. ಆ ಗುಂಪಿನಲ್ಲಿದ್ದ ಇತರರೆಂದರೆ ಕಾಂ। ಸದಾನಂದ ಮತ್ತು ವೆಂಕೇಶ್. ಪ್ಲಾಂಟೇಶನ್ ಕಾರ್ಮಿಕರ ನಡುವೆ ಕೆಲಸ ಮಾಡಲು ಸಿ.ಎನ್. ರನ್ನು ಪಕ್ಷಕ್ಕೆ ಸೇರಿಸಿಕೊಳ್ಳಲಾಯಿತು. ಇಲ್ಲಿನ 'ಪ್ಲಾಂಟೇಶನ್ ಪಟ್ಟಿ' ಪಕ್ಷದ ಹೋರಾಟ ತಂತ್ರದಲ್ಲಿ ಮಹತ್ವದ್ದು ಎಂದು ಕಾಂ. ಪಿ.ಸುಂದರಯ್ಯ ಗುರುತಿಸಿದ್ದರು. ಕಾಂ. ಎಂ.ಹೆಚ್.ಕೃಷ್ಣಪ್ಪ ಸಿ.ಎನ್.ರನ್ನು ಅಲ್ಲಿ ನೆಲೆಗೊಳಿಸಿದರು.

ಬದಲಾವಣೆಯತ್ತ

ಎಪ್ಪತ್ತರ ದಶಕದ ಆರಂಭದಿಂದ 1978ರಲ್ಲಿ ವಿಶೇಷವಾಗಿ ಕಾಂ। ಇ.ಎಂ.ಎಸ್. ಹೇಳಿದಂತೆ ನಾವಿಬ್ಬರೂ ರಾಜ್ಯ ಕಾರ್ಯದರ್ಶಿ ಮಂಡಳಿ ಸೇರುವವರೆಗೆ ನಮ್ಮ ತಿಳುವಳಿಕೆಯಲ್ಲಿ ಅಪಾರ ಬದಲಾವಣೆಗಳನ್ನು ಅನುಭವಿಸಿದೆವು. ಆ ಅಲ್ಲೋಲ ಕಲ್ಲೋಲದ ದಿನಗಳಲ್ಲಿ ಪಕ್ಷವೂ ಬದಲಾವಣೆಗಳನ್ನು ಅನುಭವಿಸಿತು. 1973ರ **ಮುರುಪ್ಪರ್ ಪುರ್** ಮಾರ್ಗವನ್ನು 1976ರಲ್ಲಿ ಕೈಬಿಟ್ಟು ಅಂತಿಮವಾಗಿ **ಜಾಮಫರ್** ಮಾರ್ಗ ವಿಜಯಿಯಾಯಿತು. ಈ ಹಿಂದಿನ ಲೈನಿನ ಜ್ಯಾರಿಗಾಗಿ ಸೇರಿಸಿಕೊಂಡ ಸಿ.ಎನ್. ಅಂತಿಮ ವಾಗಿ ಅದನ್ನು ಬಿಟ್ಟು ಎರಡನೇ ಲೈನಿನ ಕ್ರಾಂತಿವಾದಕರಾದರು. ಆ ದಿನಗಳಲ್ಲಿ ಪಕ್ಷದೊಳಗಿನ ಅಲ್ಲೋಲ ಕಲ್ಲೋಲ ನೆನಪಾಗುತ್ತದೆ. ಪಕ್ಷದೊಳಗೆ ತೀವ್ರ ಚರ್ಚೆ ನಡೆದಿತ್ತು. ನಾನು ಮತ್ತು ಸಿ.ಎನ್. ಸಮತೋಲನದ, ಬದಲಾವಣೆಯ ಪರವಾದ ಅಭಿಪ್ರಾಯ ತಳೆಯುತ್ತಿದ್ದೆವು. ಆದ್ದರಿಂದ ಆಗಸ್ಟ್ 1978ರಲ್ಲಿ ಪುನರ್ರಚಿಸಿದ ಕಾರ್ಯದರ್ಶಿ ಮಂಡಳಿಗೆ ನಮ್ಮನ್ನು ಇಎಂಎಸ್ ಮತ್ತು ಪಿ. ರಾಮಮೂರ್ತಿಯವರ ಸಲಹೆಯಂತೆ ಆರಿಸಿದರು.

ಡಿಸೆಂಬರ್ 1978ರಲ್ಲಿ ಸಿಐಟಿಯುನ ಎರಡನೇ ರಾಜ್ಯ ಸಮ್ಮೇಳನ ನಡೆಯಿತು. ಸಿ.ಎನ್. ಪ್ರಧಾನ ಕಾರ್ಯದರ್ಶಿಯಾಗಿ ಚುನಾಯಿತರಾದರು. ನಾನು ಉತ್ತರ ಕರ್ನಾಟಕದಲ್ಲಿ ಕೆಲಸ ಮಾಡಲು ಮುಂದೆ ಬಂದೆ. ಅವರು ಪ್ರಧಾನ ಕಾರ್ಯದರ್ಶಿಯಾಗಿ ಕೇಂದ್ರದ ಕಾರ್ಯಗಳನ್ನು ಸಂಭಾಳಿಸುತ್ತಿದ್ದಂತೆ ಆ ಅವಧಿಯಲ್ಲಿ ಬೆಂಗಳೂರು ಮತ್ತು ರಾಜ್ಯದ ಎಲ್ಲೆಡೆ ವಿವಿಧ ಹೋರಾಟಗಳು ಮೂಡಿಬಂದವು.

1978ರಲ್ಲಿ ಮೆಟಲ್ ಬ್ಯಾಂಡ್ ಕ್ಯಾಪ್ಸ್ ಹೋರಾಟ, ಹೋಟೆಲ್ ಕಾರ್ಮಿಕರ ಹೋರಾಟ, 1980-81ರಲ್ಲಿ ಸಾರ್ವಜನಿಕ ವಲಯದ ಕಾರ್ಮಿಕರ ಹೋರಾಟ ಇತ್ಯಾದಿಗಳು ಮೂಡಿಬಂದವು. ಬಟ್ಟೆ ಗಿರಣಿಗಳು, ಮೈಕೋ, ಐಟಿಸಿ ಇತ್ಯಾದಿಗಳಲ್ಲಿ ನಾವು ಪ್ರವೇಶ ಗಳಿಸಿದೆವು.

ಹರಿಹರ, ಹುಬ್ಬಳ್ಳಿ, ಧಾರವಾಡ, ದಾಂಡೇಲಿ ಮತ್ತು ಬೆಳಗಾಂಗಳಲ್ಲಿ ಹಲವು ಹೋರಾಟಗಳು ನಡೆದವು.

ಈ ಅವಧಿಯಲ್ಲಿ ಸಿಐಟಿಯುನ ಹರಿಹರ, ಮಂಗಳೂರು ಸಮ್ಮೇಳನಗಳು ನಡೆದವು. ಹುಬ್ಬಳ್ಳಿಯಲ್ಲಿ ನಡೆದ 5ನೇ ಸಮ್ಮೇಳನದಲ್ಲಿ ಸಿ.ಎನ್. ಪ್ರಧಾನ ಕಾರ್ಯದರ್ಶಿ ಸ್ಥಾನವನ್ನು ಬಿಟ್ಟು ಉಪಾಧ್ಯಕ್ಷರಾದರು. 1998ರವರೆಗೆ ಸಿಐಟಿಯು ಸಂದೇಶದ ಸಂಪಾದಕರಾಗಿದ್ದರು.

ಸಿದ್ಧಾಂತದೊಂದಿಗೆ ಸನ್ನದ್ಧ

ಅವರು ಸತತವಾಗಿ ತನ್ನನ್ನು ಕ್ರಾಂತಿಯ ಸಿದ್ಧಾಂತದೊಂದಿಗೆ ಸನ್ನದ್ದಗೊಳಿಸುತ್ತಿದ್ದರು. ಸಿದ್ದಾಂತ ಕ್ಷೇತ್ರದಲ್ಲಿ ಗಮನಿಸಬಹುದಾದನ್ನೆಲ್ಲಾ ಗಮನಿಸುತ್ತಿದ್ದರು ಎಂಬುದಕ್ಕೆ ವಿವರಣೆ ಬೇಕಿಲ್ಲ. ಅವರು ರತನ್‌ಮಹಲ್, ಚಿಕ್ಕಮಗಳೂರು, ಮಂಗಳೂರುಗಳಲ್ಲಿ ಬಿಟ್ಟು ಹೋಗಿರುವ ನೂರಾರು ಪುಸ್ತಕಗಳೇ ಇದಕ್ಕೆ ಸಾಕ್ಷಿ.

ಕಾಮ್ರೇಡ್ ಸಿ.ಎನ್. ಕುಟುಂಬ ಜೀವನದ ಆಯಾಮವನ್ನು ತ್ಯಾಗ ಮಾಡಿದರು. ಏಕೆಂದರೆ ಪಕ್ಷವೇ ತನ್ನ ಕುಟುಂಬ ಎಂದು ಅವರು ಬಗೆದಿದ್ದರು. ಕ್ರಾಂತಿಗಾಗಿ ಬ್ರಹ್ಮಚರ್ಯದ ಪರಿಕಲ್ಪನೆ ಅವರದಾಗಿತ್ತು. ಇಂತಹ ಬದ್ಧತೆ ಕುಟುಂಬ ಜೀವನ ಅವರಿಗೆ ಎಷ್ಟರಮಟ್ಟಿಗೆ ಅಡ್ಡಿಯಾಗುತ್ತಿತ್ತು ಅಥವಾ ನೆರವಾಗುತ್ತಿತ್ತು ಎಂಬುದನ್ನು ಬೇರೆಯವರೇ ನಿರ್ಧರಿಸಬೇಕು.

ಸಿಎನ್ ಬಹಳ ಮುತುವರ್ಜಿಯಿಂದ ದಾಖಲೆಗಳನ್ನು ಇಡುತ್ತಿದ್ದರು. ಎಲ್ಲಾ ಮುಖಂಡರು, ಕಾರ್ಯಕರ್ತರ ಬಗ್ಗೆ ಅವರಲ್ಲಿ ಮಾಹಿತಿಯಿತ್ತು, ಸಂಬಂಧಪಟ್ಟ ಇತರರಿಗೂ ಆ ಮಾಹಿತಿ ಒದಗಿಸುತ್ತಿದ್ದರು. ಪ್ರತಿಯೊಬ್ಬ ಸಂಗಾತಿ ಚಲನವಲನಗಳನ್ನು ಅವರು ಸತತವಾಗಿ ಗಮನಿಸುತ್ತಿದ್ದರು.

ಈ ದಿನಗಳಲ್ಲಿ ಇತರರ ಬದುಕಿನ ಅವಧಿಯನ್ನು ನೋಡಿದರೆ ಸಿಎನ್ ಬೇಗನೇ ನಿಧನರಾದರು ಎನ್ನಬೇಕಾಗುತ್ತದೆ. ಇಂತಹ ಒಬ್ಬ ಒಳ್ಳೆ ಸಂಗಾತಿಯನ್ನು ಇಷ್ಟು ಬೇಗನೇ ಕಳಕೊಂಡಿದ್ದೇವೆಂದು ಬೇಸರವಾಗುತ್ತದೆ.

ಸಿಎನ್. ರವರಲ್ಲಿದ್ದ ಎಲ್ಲಾ ಉತ್ತಮ ಗುಣಗಳನ್ನು ನಮ್ಮಲ್ಲಿ ಪ್ರತಿಯೊಬ್ಬರೂ ಅನುಸರಿಸಲಿ ಹಾಗೂ ಆಂದೋಲನದಲ್ಲಿರುವ ನಮಗೆಲ್ಲರಿಗೂ ಸಿಗುವಂತೆ ಮಾಡಲಿ.

ಗುಜರಾತ್ ಹತ್ಯಾಕಾಂಡ........ ಮುಂದುವರೆದ ಭಾಗ

ತಲ್ಲಣಕಾರಿ ಅನುಭವ

ಗುಜರಾತಿನಲ್ಲಿ ಉರಿಯುತ್ತಿದ್ದ ಬೆಂಕಿಯ ಮೇಲೆ ಮರಳು ಸುರಿಯಲಾಗಿದೆ. ಹಾಗಾಗಿ ಮೇಲ್ನೋಟಕ್ಕೆ ನೋಡುಗರ ಕಣ್ಣಿಗೆ ಗುಜರಾತ್ ಸಹಜ ಸ್ಥಿತಿಗೆ ಬಂದಂತೆ ಭಾಸವಾಗುತ್ತಿದೆ. ಇದರ ಜೊತೆಗೆ ಕಾಲೂಚೌಕ್‌ನಲ್ಲಿ ನಡೆಸಿದ ಧಾಳಿ ಬರ್ಭರ ಹತ್ಯೆ ದಿನಪತ್ರಿಕೆಗಳಿಂದ ಗುಜರಾತ್‌ನ್ನು ಪಕ್ಕಕ್ಕೆ ಸರಿಸಿಧರೆ, ಗಡಿಯಲ್ಲಿ ಹಚ್ಚಿದ ಬೆಂಕಿ, ಗುಜರಾತಿನ ಬೆಂಕಿಯ ಪ್ರಖರತೆಯನ್ನು ಮರೆಯಾಗಿಸಿದೆ. ಸಿಕ್ಕ(ಸಿಕ್ಕಿಸಿಕೊಂಡ) ಅವಕಾಶ ವನ್ನೇ ಬಳಸಿಕೊಂಡು ಭಾಜಪದ ನಾಯಕರುಗಳು ಭಯೋತ್ಪಾದನೆಗೆ ಈ ಕ್ಷಣವೇ ಒಂದು ಕೊನೆ ಕಾಣಿಸಿ ಬಿಡುವ ವೀರಾವೇಶದ ಮಾತುಗಳನ್ನಾಡುತ್ತಿದ್ದಾರೆ. ಮತ್ತು ಯುದ್ಧ ನಿಶ್ಚಿತವೆಂಬ ವರದಿಯನ್ನು ಹರಿಬಿಟ್ಟು ಜನರನ್ನೊಂದು ಬಗೆಯ ಯುದ್ಧೋತ್ಸಾಹಿಗಳನ್ನಾಗಿಸುವ ಎಲ್ಲ ತಂತ್ರಗಳನ್ನೂ ಬಳಸಲಾಗುತ್ತಿದೆ.

ಹೇಗಾದರೂ ಯುದ್ಧವನ್ನು ಪ್ರಾರಂಭಿಸಿಯೇ ಬಿಡುವ ಪ್ರಯತ್ನದೊಂದಿಗೆ ಅದು ಪ್ರಾರಂಭವಾದ ತಕ್ಷಣವೇ ದೇಶದಾದ್ಯಂತ-ಹಳ್ಳಿ-ಗಲ್ಲಿಗಳನ್ನೂ ಬಿಡದೇ ಕಾರ್ಯಕರ್ತರು ಸುದ್ದಿ ಮೂಲಗಳಾಗಿ ಪಸರಿಸಿ ಬಿಡಲು ಸನ್ನದ್ಧರಾಗಿಸಲಾಗುತ್ತಿದೆ. ಒಟ್ಟಿನಲ್ಲಿ 'ಹಿಂದುತ್ವ'ದ ಅಜೆಂಡಾ ಅನಿರ್ಭಾಧಿತ ವಾಗಿ ಮುಂದುವರೆಯಲು ಎಲ್ಲ ಸಿದ್ಧತೆ ನಡೆದಿದೆ. ಇನ್ನು ಗುಜರಾತ್ ನರಮೇಧ...... ಪ್ರತ್ಯಕ್ಷವಾಗಿ ಪರೋಕ್ಷವಾಗಿ ಹಿಂಸೆ ನಡೆಯುತ್ತಲೇ ಇದೆ.

ಸಹಾಯ ನಿಧಿ ಹಿಡಿದುಹೋದ ನಿಯೋಗ

ಕೇವಲ 72 ಘಂಟೆಗಳಲ್ಲಿ ಗಲಭೆ ನಿಯಂತ್ರಿಸಿದ ಹೆಗ್ಗಳಿಕೆ ಹೇಳಿಕೊಂಡ ಮೋದಿ ದರ್ಬಾರಿನಲ್ಲಿ 72 ದಿನಗಳ ನಂತರವೂ ಕೊಲೆ ಲೂಟಿ ಬೆಂಕಿಗಳು ನಡೆಯುತ್ತಲೇ ಇವೆ. ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯು ಪ್ರತ್ಯಕ್ಷ ಮಾಹಿತಿ ಸಂಗ್ರಹಿಸಿ ಪ್ರಥಮ ಕಂತಿನ (2.50 ಲಕ್ಷ ರೂ.ಗಳ) ಸಹಾಯ ನಿಧಿ ನೀಡಿ ಬಂದ ನಂತರ ದೇಶದಾದ್ಯಂತ ಸಂಗ್ರಹಿಸಿದ ಹಣವನ್ನು ಗಲಭೆಗೆ ತುತ್ತಾದ ಕುಗ್ರಾಮಗಳಿಗೆ ನೀಡಬೇಕೆಂಬ ಅಭಿಪ್ರಾಯದಿಂದ ಎರಡನೇ ನಿಯೋಗವೊಂದು ಹಲವು ಹಳ್ಳಿಗಳಿಗೆ ಭೇಟಿ ನೀಡಿತ್ತು. ಬೆಂಕಿಯ ಮೇಲೆ ಸುರಿದ ಮರಳಿನ ಬಿಸಿ ಅಲ್ಲಿ ನಮಗೆ ವ್ಯಕ್ತವಾಗಿದ್ದು ಹೀಗೆ (ಈ ಬಾರಿಯ ಕೋಮು ಹತ್ಯೆ ಅತ್ಯಂತ ವ್ಯವಸ್ಥಿತವಾಗಿ ಮೂಲೆಯ ಹಳ್ಳಿಗಳಲ್ಲಿಯೂ ನಡೆದಿದೆ) ಸತ್ರಾಂಪುರದಲ್ಲಿ ಪರಿಸ್ಥಿತಿ ಹತೋಟಿಗೆ ಬಂದಿದೆಯೆಂದು ಕೆಲವು ಸ್ವಯಂ ಸೇವಾ ಸಂಸ್ಥೆಗಳು 8 ಮನೆಗಳನ್ನು ನಿರ್ಮಿಸುವ ಕೆಲಸ ಮಾಡಿದ್ದರೆ ಸಂಘ ಪರಿವಾರದ ಕಾರ್ಯಕರ್ತರು 24 ಘಂಟೆಯೊಳಗೆ 3

> **'ಮುಸ್ಲಿಂ ಗಳಿಸಿಡಲು ಅವಕಾಶವಿಲ್ಲ'**
> **'ಪ್ರಾರ್ಥನೆ ಮಸೀದಿಯಲ್ಲಲ್ಲ ಮನೆಯಲ್ಲಿ'**
> **ಫ್ಯಾಸಿಸ್ಟರ ಫರ್ಮಾನು**

ಕಟ್ಟಡಗಳನ್ನು ನೆಲಸಮಮಾಡಿ, ಕಟ್ಟಿದವರಿಗೆ ಎಚ್ಚರಿಕೆ ನೀಡಿದ್ದಾರೆ. ಗಲಭೆಯ ಸಂದರ್ಭದಲ್ಲಿ ಆ ಹಳ್ಳಿಯಲ್ಲಿ 125 ಮನೆಗಳನ್ನು ಲೂಟಿ ಮಾಡಲಾಗಿದೆ.

ವಿ.ಹಿಂ.ಪ. ಸಂವಿಧಾನ

ಸುಬ್‌ಸಾರ್‌ನಲ್ಲಿ-ಆರ್ಥಿಕವಾಗಿ ಸಬಲರಾಗಿದ್ದ ಮುಸಲ್ಮಾನರು ಬದುಕುತ್ತಿದ್ದ ಜಾಗವದು. ಮನೆ, ವರ್ಕ್‌ಶಾಪ್, ಅಂಗಡಿ, ವಾಹನಗಳು.... ಎಲ್ಲವನ್ನು ಸುಡಲಾಗಿದೆ. ಪರಿಸ್ಥಿತಿ ಹತೋಟಿಗೆ ಬಂದಿದೆ ಎಂದು ತಿಳಿದು ಎರಡೂ ಕೋಮಿನ ಜನರದೊಂದು ಸಭೆ ನಡೆಸಿದಾಗ ವಿ.ಎಚ್.ಪಿ ನಾಯಕರು ಅದೇ ಊರಿನಲ್ಲಿ ಬದುಕಿ ಬಾಳಿದ ಮುಸ್ಲಿಮ್ ಜನರಿಗೆ ಹಾಕಿದ ಷರತ್ತು..... ಈ ಊರಿನಲ್ಲಿ ಬದುಕಬೇಕೆಂದರೆ - ದಿನದ ದುಡಿಮೆಯನ್ನು ಆ ದಿನವೇ ಖರ್ಚು ಮಾಡಬೇಕು. ಗಳಿಸಿಡಲು ಅವಕಾಶವಿಲ್ಲ. ಪ್ರಾರ್ಥನೆ ಪೂಜೆಗಳನ್ನು ನಿಮ್ಮ ಮನೆಗಳಲ್ಲಷ್ಟೇ ಮಾಡಿಕೊಳ್ಳಬೇಕು. ಮಸೀದಿಗಳಲ್ಲಿ ಒಟ್ಟು ಸೇರುವ ಹಾಗಿಲ್ಲ. (ಇದು ಯಾರು ಬರೆದ ಸಂವಿಧಾನ?) ಅಲ್ಲಿ ಇನ್ನೂ ಒಂದು FIR ಕೂಡ ದಾಖಲಾಗಿಲ್ಲ. ಪುನರ್ವಸತಿಗಾಗಿ ಕೇಂದ್ರ ಸರ್ಕಾರ ಘೋಷಿಸಿದ ಸಹಾಯ ಕೂಡ ನಿರಾಶ್ರಿತರಿಗೆ ತಲುಪುತ್ತಿಲ್ಲ. ಇಂದಿರಾ ಆವಾಸ್/ ಜನತಾ ಮನೆಗಳಿಗೆಂದು ಸರ್ಕಾರ 25,000/- ಸಾವಿರ ರೂ.ಗಳನ್ನು ಕೊಡುತ್ತಿರುವ ಸಂದರ್ಭದಲ್ಲಿ ಪಕ್ಕಾ ಮನೆಗಳನ್ನು ಕಳೆದುಕೊಂಡ ಜನರಿಗೆ 51, 71 ರೂಗಳನ್ನು ಕೊಟ್ಟ ದಾಖಲೆಗಳಿವೆ. ಪರಿಹಾರ ಧನದಲ್ಲಿ ಅರ್ಧ ಹಣ ಅರ್ಧ ಬಾಂಡ್‌ರೂಪದಲ್ಲಿ ಕೊಡುವ ತೀರ್ಮಾನವನ್ನು ಸರ್ಕಾರ ಮಾಡಿದೆ. ಸಾವಿರಾರು ಜನರಿರುವ ಷಾ ಅಲಂ ಕ್ಯಾಂಪ್‌ನಲ್ಲಿ ನೀಡಿದ ಪರಿಹಾರದ ಅಧಿಕ ಮೊತ್ತ 22,000/- ರೂಗಳು. ಪಡೆದ ಅದೃಷ್ಟವಂತ ದಲಿತ ವರ್ಗಕ್ಕೆ ಸೇರಿದ ವ್ಯಕ್ತಿ.

ಪ್ರಭುತ್ವದ ಪಾತ್ರ: ಗಲಭೆ ದೊಡ್ಡ ಮಟ್ಟದಲ್ಲಿ ನಡೆಯುತ್ತಿದ್ದಾಗಲೂ ಕರ್ತವ್ಯ ನಿರ್ವಹಿಸದ ಪೋಲೀಸ್, ಪ್ರಭುತ್ವ ಇಂದಿಗೂ ಹಾಗೆಯೇ ಇದೆ. ಸಂತ್ ಹಳ್ಳಿಗಳಲ್ಲಿ ಜನ ಸಹಾಯಕ್ಕಾಗಿ ಮೊರೆ ಇಟ್ಟಾಗ, ಪೋಲೀಸ್ ಅಧಿಕಾರಿ ಗಳಿಂದ ಸಿಕ್ಕ ಉತ್ತರ "ನನ್ನ ಬಳಿ ಕೇವಲ 18 ಮಂದಿ ಪೋಲೀಸರಿದ್ದಾರೆ. ನಿಮ್ಮ ರಕ್ಷಣೆಯ ವ್ಯವಸ್ಥೆ ನೀವೇ ಮಾಡಿಕೊಳ್ಳಿ" ಎಂದು.



ಎಲ್ಲವನ್ನೂ ಕಳಕೊಂಡು ಕಂಗಾಲಾದ ಜನ

ಸುಬಾರ್‌ನಲ್ಲಿ ಲೂಟಿ ಮಾಡಿ ಬೆಂಕಿ ಇಟ್ಟವರಾರೆಂದು ನಿಖರ ಮವಾಗಿ ಪೋಲೀಸರಿಗೆ ತಿಳಿದಿದೆಯಾದರೂ ಇದುವರೆಗೂ FIR ದಾಖಲಾಗಿಲ್ಲ. ವ್ಯತಿ ರಿಕ್ತವಾಗಿ ಬರೋಡಾದಲ್ಲಿ ಹಿಂಸೆಗೊಳಗಾದವರು ಪ್ರತಿರೋಧ ವ್ಯಕ್ತಪಡಿಸಿದ ಕಾರಣಕ್ಕಾಗಿಯೇ ಪೋಲೀಸ್‌ರಿಂದ ಶೋಧ ಬೆದರಿಕೆ, ಹಿಂಸೆ, ಮಹಿಳೆಯರ ಮೇಲೆ ದೌರ್ಜನ್ಯ ಗಳು ಎಲ್ಲ ಕಾನೂನು, ಕಟ್ಟಳೆ ಮೀರಿ ನಡೆಸಲಾಗುತ್ತಿದೆ.

ಗುಜರಾತಿನ ಹಲವು ಭಾಗಗಳ ಹಳ್ಳಿಗಳಲ್ಲಿ ಕಂಡು/ಕೇಳಿ ಬರುತ್ತಿರುವ ಸಾಮಾನ್ಯ ಅಂಶ -ಬಿ.ಜೆ.ಪಿಯ ಶಾಸಕರು, ಮುಖ್ಯ ನಾಯಕರುಗಳು "ಗೋಧ್ರಾ" ಘಟನೆಯ ತಕ್ಷಣ ನಡೆಸಿದ ವ್ಯವಸ್ಥಿತ ಪ್ರಚಾರ ಹರಡಿದ ವಿಷಯದಿಂದಾಗಿ - ಅತ್ಯಂತ ನಿಕಟ ಸಂಬಂಧದಲ್ಲಿ ಬದುಕುವ ಗ್ರಾಮೀಣ ಜನರನ್ನು, ಮತ್ತು ಆದಿವಾಸಿಗಳನ್ನೂ ಮುಸ್ಲಿಂರ ವಿರುದ್ಧ ಎತ್ತಿ ಕಟ್ಟಲು ಸಾಧ್ಯವಾಗಿದೆ. ಸಾಮಾನ್ಯವಾಗಿ ಎಲ್ಲ ಕಡೆ - ಸಬರಮತಿ ರೈಲಿನಲ್ಲಿ ಹಿಂದೂ ಮಹಿಳೆಯರನ್ನು ಕೆಡಿಸಲಾಗಿದೆ. ಅದರ ವಿರುದ್ಧ ನಾವು ಸಿಡಿದೇಳಬೇಕೆಂದು ಹರಡಿದ್ದಾಗಿ ವರದಿಗಳಾಗುತ್ತಿವೆ. ಆದಿವಾಸಿಗಳ ಮಧ್ಯೆ - 'ಮುಸ್ಲಿಂರು ನಿಮ್ಮನ್ನು ಸಾಮೂಹಿಕವಾಗಿ ಹತ್ಯೆ ಮಾಡುತ್ತಾರೆ. ನೀವು ನಿಜವಾದ ಹಿಂದುಗಳಾಗಿದ್ದಲ್ಲಿ ಮುಸಲ್ಮಾನರು ಕಂಡಲ್ಲಿ ತುಂಡರಿಸಿ.....' ಎಂಬ ವಿಷ ಬಿತ್ತಿ ಅವರನ್ನು ಮುಸ್ಲಿಂರ ವಿರುದ್ಧ ಬಳಸಲಾಗಿದೆ.

ಇದಕ್ಕೆಲ್ಲ ವ್ಯತಿರಿಕ್ತವಾಗಿ - ಸಿಪಿಐ(ಎಂ) ಪಕ್ಷ ಮತ್ತು ಎಡ, .ಜನಪರ ಧೋರಣೆಯ ಸಂಘಟನೆಗಳು ಗಟ್ಟಿಯಾಗಿದ್ದ ಉಪಲೇಟಾದಲ್ಲಿ ಕನಿಷ್ಟ ಒಂದು ಹಿಂಸಾ ಪ್ರಕರಣ ಕೂಡ ನಡೆದಿಲ್ಲ. ಗೋಧ್ರಾ ಘಟನೆ ನಡೆದ ತಕ್ಷಣ ಶಾಂತಿ ಸಭೆಗಳನ್ನು ನಡೆಸಲಾಯಿತು ಮತ್ತು ಅಲ್ಪ ಸಂಖ್ಯಾತರನ್ನು ರಕ್ಷಿಸುವ ಭರವಸೆ ಉಂಟುಮಾಡಿ ವಿಶ್ವಾಸ ಬೆಳೆಸಲಾಯಿತು.

ಭಾವನಗರ್, ಸಿಹಾರ್, ರಾಜ್ ಕೋಟ್ ಗಳಲ್ಲಿ ಜನವಾದಿ ಸಂಘಟನೆಯ ಕಾರ್ಯಕರ್ತರು ರಾಜ್ಯಸಮಿತಿ ಸದಸ್ಯೆಯರು (ಹಲವರು ಮುಸ್ಲಿಂ ಸಮುದಾಯದವರು) ಹಲವು ರೀತಿಯ ಹಿಂಸೆಗಳ ನಡುವೆಯೂ ಅವರ ಮನೆಗಳೇ ಬೆಂಕಿಗೆ ಆಹುತಿ ಯಾಗಿವೆ. ಲೂಟಿಗಳಾಗಿವೆ. ಹಾಗಿದ್ದೂ ಪರಿಹಾರ ಕಾರ್ಯದಲ್ಲಿ ತೊಡಗಿದ್ದಾರೆ. ಜನರಲ್ಲಿ ವಿಶ್ವಾಸ, ಭರವಸೆ ಮೂಡಿಸುವ ಕಾರ್ಯದಲ್ಲಿ ನಿರತರಾಗಿದ್ದಾರೆ.

ಇದು ಎಲ್ಲರಿಗೂ ಮಾದರಿಯಾಗಬೇಕು.

- ಕೆ.ಎಸ್.ವಿಮಲಾ

ವಿಶ್ವಕಪ್ ಫುಟ್ಬಾಲ್....

ಪುಟ 12 ರಿಂದ

ಕಿರೀಟ ಧರಿಸಿದ ಫ್ರಾನ್ಸ್ ತಂಡ ವಿವಿಧ ಜನಾಂಗ, ಬಣ್ಣಗಳ ಸಮ್ಮಿಳಿತ ಆಟಗಾರರನ್ನು ಹೊಂದಿದ್ದು ತನ್ನ ಜನಾಂಗೀಯ ವೈವಿಧ್ಯತೆಯನ್ನು ಪುನಃ ಮೆರೆಸಲು ಈ ಬಾರಿ ಸಹಾ ಪ್ರಯತ್ನಿಸುತ್ತಿದೆ.

ಈ ಸಲವೂ ಫ್ರಾನ್ಸ್ ಪ್ರಶಸ್ತಿ ಗೆಲ್ಲುವ ನೆಚ್ಚಿನ ತಂಡವಾಗಿದೆ. ಆರ್ಥಿಕವಾಗಿ ದಿವಾಳಿಯಾಗಿರುವ ಅರ್ಜೆಂಟೀನಾ ವಿಶ್ವಕಪ್ ಫುಟ್ಬಾಲ್ ಮೂಲಕ ಹೊಸ ಬದುಕಿನತ್ತ ಸಾಗಲು ಹವಣಿಸುತ್ತಿದೆ. ಆತಿಥೇಯ ಜಪಾನ್ ಹಾಗೂ ದ.ಕೊರಿಯಾ ಹಿಂದೆ ಸರಿದಿರುವ ತಮ್ಮ ಆರ್ಥಿಕ ವ್ಯವಸ್ಥೆಯನ್ನು ಈ ಪಂದ್ಯಾವಳಿ ಮೂಲಕ ಸರಿದೂಗಿಸಲು ನೋಡುತ್ತಿದೆ. ಬಡತನ, ಆರ್ಥಿಕ ಸಂಕಷ್ಟದಿಂದ ಜರ್ಜರಿತವಾಗಿರುವ ಬ್ರೆಜಿಲ್ ತನ್ನ ದೇಶದ ಫುಟ್ಬಾಲ್ ಪ್ರತಿಷ್ಠೆ ಮೂಲಕ ಜಗತ್ತಿನಲ್ಲಿ ತಲೆ ಎತ್ತಲು ಬಯಸುತ್ತಿದೆ. ಸರ್ವಾಧಿಕಾರಿ ಆಡಳಿತದಿಂದ ತತ್ತರಿಸಿರುವ ನೈಜೀರಿಯಾ ಫುಟ್ಬಾಲ್ ಮೂಲಕ ಜಗತ್ತಿಗೆ ತನ್ನ ಹೊಸ ಪರಿಚಯ ನೀಡಲು ಹವಣಿಸುತ್ತಿದೆ.

ವೃತ್ತಿಪರತೆ - ಹಣದ ವಹಿವಾಟು

ಇಷ್ಟೆಲ್ಲಾ ಜನಪ್ರಿಯತೆ ನಡುವೆ ಫುಟ್ಬಾಲ್ ಇಂದು ಪಕ್ಕಾ ವೃತ್ತಿಪರ ಆಟವಾಗಿದೆ. ವೃತ್ತಿಪರ ಆಟಗಾರರಾಗಿ ಫುಟ್ಬಾಲ್ ಪಟುಗಳು ಇಂದು ಬಿಲಿಯಾಂತರ ರೂಪಾಯಿ ಆದಾಯ ಗಳಿಸುತ್ತಿದ್ದಾರೆ. ವಿಶ್ವಕಪ್ ಫುಟ್ಬಾಲ್‌ನ ಆರಂಭ ಪಂದ್ಯ ದ.ಕೋರಿಯಾ ಹಾಗೂ ಅಂತಿಮ ಪಂದ್ಯ ಜಪಾನ್‌ನಲ್ಲಿ ನಡೆಯಲಿದ್ದು ಪ್ರತಿ ರಾಷ್ಟ್ರಗಳಲ್ಲಿ ತಲಾ 10 ಕ್ರೀಡಾಂಗಣಗಳು ತಲಾ ಎರಡು ಬಿಲಿಯನ್ ಡಾಲರ್ ವೆಚ್ಚದಲ್ಲಿ ಸಜ್ಜಾಗಿವೆ. ಇಡೀ ಪಂದ್ಯಾವಳಿಯ ವೆಚ್ಚ 1200 ಮಿಲಿಯನ್ ಡಾಲರ್. ಗೆದ್ದ ತಂಡಕ್ಕೆ 5.33 ಮಿಲಿಯಾ ಡಾಲರ್ ಬಹುಮಾನ ದೊರೆಯುತ್ತದೆ. ಇದಲ್ಲದೆ ಭಾಗವಹಿಸುವ ಎಲ್ಲಾ 32 ರಾಷ್ಟ್ರ ತಂಡಗಳಿಗೆ ತಲಾ 6 ಲಕ್ಷ 12 ಸಾವಿರ ಡಾಲರ್ ಹಣ ದೊರೆಯಲಿದೆ. ಜಪಾನ್ ಹಾಗೂ ದ.ಕೋರಿಯಾ ರಾಷ್ಟ್ರಗಳಿಗೆ ವಿಶ್ವ ಫುಟ್ಬಾಲ್ ಸಂಸ್ಥೆಯಿಂದ ತಲಾ 110 ಮಿಲಿಯನ್ ಡಾಲರ್ ದೊರೆಯಲಿದೆ. ಅಲ್ಲದೇ ಟಿಕೆಟ್ ಮಾರಾಟದ ಮಿಲಿಯಾಂತರ ಡಾಲರ್ ಹಣ ಸಹ ಅತಿಥೇಯ ರಾಷ್ಟ್ರಗಳ ಪಾಲು- ಎಲ್ಲಿಂದ ಈ ಹಣ - ವಿಶ್ವಕಪ್ ಫುಟ್ಬಾಲ್ ಪ್ರಾಯೋಜಿತರಾಗಲು ಜಗತ್ತಿನ ಏಕಸ್ವಾಮ್ಯ ಬಂಡವಾಳ ಕಂಪನಿಗಳಲ್ಲಿ ತೀವ್ರ ಸ್ಪರ್ಧೆ. ಈ ಸಲದ ವಿಶ್ವಕಪ್‌ನ ಪ್ರಾಯೋಜಕರಲ್ಲಿ ಕ್ರೀಡಾ ಸಾಮಾಗ್ರಿ ಉತ್ಪನ್ನ ಕಂಪನಿ ಅಡಿಡಾಸ್, ಜಪಾನ್‌ನ ಫ್ಯುಜಿಫಿಲ್ಮ್ ಹಾಗೂ ಫ್ಯುಜಿ ಜಿರಾಕ್ಸ್ ಎಲೆಕ್ಟ್ರಾನಿಕ್ ದೈತ್ಯ ಜೆವಿಸಿ, ವಿಶ್ವದ ಪ್ರಮುಖ ಕ್ಷೌರ ಸಾಮಾಗ್ರಿ ಉತ್ಪಾದಕರಾದ ಜಿಲ್ಲೆಟ್, ಫಿಲಿಪ್ಸ್, ಕೋಕಾಕೋಲಾ, ಬಹುರಾಷ್ಟ್ರೀಯ ಸರಣಿ ಹೋಟೆಲ್ ದೈತ್ಯ ಕಂಪನಿ ಮೆಕ್‌ಡೋನಾಲ್ಡ್, ಜಪಾನಿನ ತೋಷಿಬಾ, ನಿಪ್ಪಾನ್, ಕೊರಿಯಾ ಟೆಲಿಕಾಮ್, ವಾಹನ ತಯಾರಕರಾದ ಹುಂಡಾಯ್ ಪ್ರಮುಖರು. ವಿಶ್ವಕಪ್ ಪಂದ್ಯಾವಳಿಯ ಸಮಯ ಕೆಲವೇ ಸೆಕೆಂಡುಗಳ ದೂರದರ್ಶನ ಜಾಹಿರಾತಿಗೆ ಹಲವು ಮಿಲಿಯ ಡಾಲರ್‌ಗಳನ್ನು ಈ ಪ್ರಾಯೋಜಕರು ವ್ಯಯಿಸಲಿದ್ದಾರೆ. ಕ್ರೀಡೆ ಇಂದು ವಿಶ್ವ ವ್ಯವಹಾರದ ಪ್ರಮುಖ ಭಾಗವಾಗಿ ಬಿಟ್ಟಿದೆ. ಇಂತಹದ್ದರ ಅವಾಂತರಕಾರಿ ಪರಿಣಾಮಗಳನ್ನು ಕ್ರಿಕೆಟ್‌ನ 'ಮ್ಯಾಚ್ ಫಿಕ್ಸಿಂಗ್'ನಲ್ಲಿ ದ್ವಾರ ಕಂಡಿದ್ದೇವೆ.

ದೂರ ದರ್ಶನ ಪ್ರಸಾರದ ಹಕ್ಕು:

ವಿಶ್ವಕಪ್ ದೂರದರ್ಶನ ಪ್ರಸಾರದ ಹಕ್ಕು ವಿಶ್ವ ಫುಟ್ಬಾಲ್ ಸಂಸ್ಥೆಯ ಪ್ರಮುಖ ಆದಾಯದ ಮಾರ್ಗವಾಗಿದೆ. ಸರಿಸುಮಾರು 800 ಮಿಲಿಯ ಜನತೆ ವಿಶ್ವಕಪ್ ಪಂದ್ಯಾವಳಿಗಳನ್ನು ದೂರ ದರ್ಶನದ ಮೂಲಕ ವೀಕ್ಷಿಸಲಿದ್ದಾರೆ. ವಿಶ್ವ ಫುಟ್ಬಾಲ್ ಸಂಸ್ಥೆಯಿಂದ ಈ ಸಲದ ವಿಶ್ವಕಪ್ ಫುಟ್ಬಾಲ್ ಪಂದ್ಯಾವಳಿಯ ನೇರ ಪ್ರಸಾರದ ಹಕ್ಕನ್ನು ಜರ್ಮನಿಯ ದೂರದರ್ಶನದ ಪ್ರಸಾರ ದೈತ್ಯ ಡಾ.ಲಿಯೊ ಕಿರ್ಚ್ ಒಡೆತನದ ಕಂಪನಿ 821 ಮಿಲಿಯ ಡಾಲರ್‌ಗಳಿಗೆ ಪಡೆದುಕೊಳ್ಳಲಿವೆ. ಬಿಬಿಸಿ ಪ್ರಸಾರದ ಹಕ್ಕಿಗಾಗಿ 170 ಮಿಲಿಯಡಾಲರ್ ನೀಡಿದೆ.

ಪ್ಯಾಲೆಸ್ಟೈನ್ ಮೇಲೆ ಇಸ್ರೇಲಿ ಆಕ್ರಮಣ ಕೊನೆಗೊಂಡಂತೆ ಕಾಣುತ್ತದೆ. ಆದರೆ ನಿಜವಾಗಿಯೂ ಪ್ಯಾಲೆಸ್ಟೈನ್‌ನ್ನು ಎಲ್ಲಾ ಅರ್ಥದಲ್ಲಿ ನಾಶ ಮಾಡುವ ಇಸ್ರೇಲಿ ಕಾರ್ಯಾಚರಣೆ ಮುಂದುವರೆದಿದೆ. 20ನೇ ಶತಮಾನದ ಕೊನೆಯ ರಾಷ್ಟ್ರೀಯ ವಿಮೋಚನಾ ಹೋರಾಟ ವಿಜಯಿಯಾಗದಂತೆ ಮಾಡಲು ಅಮೆರಿಕ-ಇಸ್ರೇಲಿ ದುಷ್ಟಕೂಟ ಶಕ್ತಿಮೀರಿ ಪ್ರಯತ್ನಿಸುತ್ತಿದೆ. ಆದರೆ ಇದು ಸಫಲವಾಗುವುದಿಲ್ಲ. ದಶಕಗಳ ಹೋರಾಟದ ಅನುಭವವಿರುವ ಪ್ಯಾಲೆಸ್ಟೈನ್ ವಿಮೋಚನಾ ಹೋರಾಟ ಮುಂದುವರೆದು ವಿಜಯಿಯಾಗುತ್ತದೆ. ಅಮೆರಿಕ ಮತ್ತು ಅದರ ಬಾಲಬಡುಕ ದೇಶಗಳ 'ಭಯೋತ್ಪಾದನೆ ಮೇಲೆ ಯುದ್ಧ'ದ ಹೆಸರಲ್ಲಿ ಪಶ್ಚಿಮ ಏಶ್ಯಾದ ತೈಲ ಶ್ರೀಮತ ಪ್ರದೇಶದ ಮೇಲೆ ಪೂರ್ಣ ಅಧಿಪತ್ಯ ಸಾಧಿಸುವ ಪ್ರಯತ್ನದಲ್ಲಿ ಪ್ಯಾಲೆಸ್ಟೈನ್ ಮುಳ್ಳಾಗಿದೆ. ಪ್ಯಾಲೆಸ್ಟೈನ್ ಹೋರಾಟ ಇಂದು ಸಾಮ್ರಾಜ್ಯಶಾಹಿ-ವಿರೋಧಿ ಹೋರಾಟದ ಕೇಂದ್ರ ಬಿಂದುವಾಗಬೇಕು. ಎಲ್ಲೆಡೆ 'ಭಯೋತ್ಪಾದನೆ ವಿರುದ್ಧ ಯುದ್ಧ'ದ ಹೆಸರಲ್ಲಿ ಅಧಿಪತ್ಯ ಸ್ಥಾಪಿಸುವ ಅಮೆರಿಕನ್ ಪ್ರಯತ್ನಕ್ಕೆ ಪ್ರತಿರೋಧದ ಪ್ರತೀಕವಾಗಲಿದೆ.

ಪ್ಯಾಲೆಸ್ಟೇನ್ : ೨೦ನೇ ಶತಮಾನದ ಮುಗಿಯದ ರಾಷ್ಟ್ರೀಯ ವಿಮೋಚನಾ ಹೋರಾಟ

ಶರತ್‌ಚಂದ್ರ

ಪ್ಯಾಲೆಸ್ಟೈನ್ ಅಧ್ಯಕ್ಷ ಯಾಸೆರ್ ಅರಾಫತ್ ರಮಲ್ಲಾ ಮುಖ್ಯ ಕಚೇರಿ ಮತ್ತು ಬೆತ್ಲೆಹೆಮ್ ಚರ್ಚಿನ ವಿರುದ್ಧ ಇಸ್ರೇಲಿ ದಿಗ್ಬಂದನದ ತೆರವಿನೊಂದಿಗೆ ಪ್ಯಾಲೆಸ್ಟೈನ್ ವಿರುದ್ಧ ನಡೆಸಿದ ಯುದ್ಧ ಮುಗಿದಂತೆ ಕಾಣುತ್ತದೆ. ಆದರೆ ಪ್ಯಾಲೆಸ್ಟೈನ್ ಸ್ವಾಯತ್ತತೆ, ಸ್ವಾತಂತ್ರ್ಯದ ವಿರುದ್ಧ ಇಸ್ರೇಲಿ ಯುದ್ಧ ಮುಂದುವರೆದಿದೆ. 1993 ರ ಒಸ್ಲೊ ಶಾಂತಿ ಒಪ್ಪಂದ ಸಾಧ್ಯ ಮಾಡಿದ ಸೀಮಿತ ಪ್ಯಾಲೆಸ್ಟೇನ್ ಸ್ವಾತಂತ್ರ್ಯ, ಸ್ವಾಯತ್ತತೆ, ಇಸ್ರೇಲಿ ಟ್ಯಾಂಕುಗಳು, ಕ್ಷಿಪಣಿಗಳು, ಸೈನಿಕರ ಬೂಟುಕಾಲಿನಡಿಯಲ್ಲಿ ಭಗ್ನವಾಗಿವೆ. ಪ್ಯಾಲೆಸ್ಟೈನ್ ಪ್ರಾಧಿಕಾರಕ್ಕೆ ಸೇರಿದ ಪಶ್ಚಿಮ ದಂಡೆಯ ಹೆಚ್ಚಿನ ಪ್ರದೇಶಗಳನ್ನು ಇಸ್ರೇಲಿ ಸೈನ್ಯ, ಭಯೋತ್ಪಾದನೆ ವಿರುದ್ಧ ಯುದ್ಧ' ದ ಹೆಸರಲ್ಲಿ ಪುನಃ ವಶಪಡಿಸಿಕೊಂಡಿದೆ. ಒಸ್ಲೊ ಶಾಂತಿ ಒಪ್ಪಂದದ ಪ್ರಕಾರ ಪ್ಯಾಲೆಸ್ಟೈನ್ ಪ್ರಾಧಿಕಾರಕ್ಕೆ ಸೇರಬೇಕಾಗಿದ್ದ ಪ್ರದೇಶದ ಶೇಕಡಾ 18 ರಷ್ಟು ಮಾತ್ರ ಇಸ್ರೇಲ್ ಬಿಟ್ಟುಕೊಟ್ಟಿತ್ತು. ಅದನ್ನು ಈಗ ಹೆಚ್ಚು ಕಡಿಮೆ ಪುನಃ ವಶಪಡಿಸಿಕೊಳ್ಳಲಾಗಿದೆ. 1993 ರ ನಂತರ ಪ್ಯಾಲೆಸ್ಟೈನ್‌ಗೆ ಸೇರಬೇಕಾಗಿದ್ದ ಪ್ರದೇಶಗಳಲ್ಲಿ ಇಸ್ರೇಲ್ ಸರ್ಕಾರ ಒಂದೂವರೆ ಲಕ್ಷಕ್ಕೂ ಹೆಚ್ಚು ಇಸ್ರೇಲಿಗಳನ್ನು ಕಾನೂನುಬಾಹಿರವಾಗಿ ನೆಲೆಸಿದೆ - ಇಸ್ರೇಲಿ ಸೈನ್ಯದ ಬೆಂಬಲದಿಂದ. 1993 ರ ಒಪ್ಪಂದದ ಪ್ರಕಾರ ಪಶ್ಚಿಮ ದಂಡೆಯಲ್ಲಿ ರಚನೆಯಾಗಬೇಕಾಗಿದ್ದ ಪ್ಯಾಲೆಸ್ಟೈನ್ ಪ್ರಾಧಿಕಾರ ಈಗ ಹಲವು ಪಾಳೆಯದಂತಹ ಸಣ್ಣ ಪ್ರದೇಶಗಳಲ್ಲಿ ಹರಿಹಂಚಿಹೋಗಿದೆ. ಈಗಿನ ಪ್ಯಾಲೆಸ್ಟೈನ್ ಸ್ವಾಯತ್ತತೆಯ ಸ್ಥಿತಿ ವರ್ಣಬೇಧದ ದಕ್ಷಿಣ ಆಫ್ರಿಕಾದಲ್ಲಿ ಸ್ವಾಯತ್ತ 'ಬಂಟುಸ್ತಾನ'ಗಳನ್ನು ನೆನಪಿಸುವಂತಹದು. ಅದರಷ್ಟೇ ಅರ್ಥಹೀನ ಮತ್ತು ಮೋಸದ ಸ್ವಾಯತ್ತತೆ.



ಪ್ಯಾಲೆಸ್ಟೈನ್ ಜನರ ವಿರುದ್ಧ ಇಸ್ರೇಲಿ ಯುದ್ದ ನಿಂತಿದೆ ಎಂಬುದು ಮೋಸದ ಮಾತು. ಇಸ್ರೇಲಿ ಸೈನ್ಯ ಮನಸ್ಸಿಗೆ ಬಂದಾಗಲೆಲ್ಲಾ ಪ್ಯಾಲೆಸ್ಟೈನ್ ಪಟ್ಟಣಗಳ ಮೇಲೆ ಆಕ್ರಮಣ ಮಾಡುತ್ತದೆ. ಹಲವು ವಾರಗಳ ಆಕ್ರಮಣ ರಮಲ್ಲಾ, ಜೆನಿನ್, ನಬ್ಲೂಸ್ ಮುಂತಾದ ಪಟ್ಟಣಗಳನ್ನು ಹೆಚ್ಚು ಕಡಿಮೆ ಪೂರ್ಣ ನಾಶ ಮಾಡಿದೆ. ಜನಜೀವನ ಪೂರ್ಣವಾಗಿ ವ್ಯಸ್ತಗೊಂಡಿದೆ. ಮುಕ್ಕಾಲು ಭಾಗ ಆರ್ಥಿಕ ಚಟುವಟಿಕೆ ಸ್ತಬ್ಧವಾಗಿದೆ. ಮುಕ್ಕಾಲಿಗಿಂತಲೂ ಹೆಚ್ಚು ಜನ ತಾತ್ಕಾಲಿಕವಾಗಿ ಅಥವಾ ಶಾಶ್ವತವಾಗಿ ನಿರುದ್ಯೋಗಿಗಳಾಗಿದ್ದಾರೆ.

ಪ್ಯಾಲೆಸ್ಟೇನ್ ರಾಜಕೀಯ ನಾಯಕತ್ವದ ನಾಶಕ್ಕೆ ಯತ್ನ

ಇಸ್ರೇಲಿನ ಈ ಇತ್ತೀಚಿನ ಪ್ಯಾಲೆಸ್ಟೈನ್ ಮೇಲೆ ಯುದ್ಧದ ಉದ್ದೇಶ ಪ್ಯಾಲೆಸ್ಟೈನ್ ಪ್ರಾಧಿಕಾರ ಮತ್ತು ರಾಜಕೀಯ ನಾಯಕತ್ವವನ್ನು ನಾಶ ಮಾಡುವುದು. 1993 ರ ಒಸ್ಲೊ ಒಪ್ಪಂದವನ್ನು ಪೂರ್ಣ ಅರ್ಥಹೀನ ಮಾಡಿದ್ದರಿಂದ ಪುನಃ ಆರಂಭವಾಗಿದ್ದ ಎರಡನೇ 'ಇಂತಿಫಾದಾ' ಸೆಪ್ಟೆಂಬರ್ 2000 ದಿಂದ ಆರಂಭವಾದ ಜನತಾ ಹೋರಾಟವನ್ನು ಬಗ್ಗು ಬಡಿಯಲು ಇಸ್ರೇಲಿ ಸರ್ಕಾರ ಹುನ್ನಾರ ನಡೆಸುತಿತ್ತು. ಇದಕ್ಕೆ ಅಮೆರಿಕಾದ ಪೂರ್ಣ ಬೆಂಬಲವಿತ್ತು. ಸೆಪ್ಟೆಂಬರ್ 2001 ರ ವಿಶ್ವವಾಣಿಜ್ಯ ಕೇಂದ್ರದ ಮೇಲಿನ ಭೀಕರ ಭಯೋತ್ಪಾದಕ ಕೃತ್ಯದ ನಂತರ ಇಸ್ರೇಲಿ-ಅಮೆರಿಕ ದುಷ್ಟಕೂಟ 'ಭಯೋತ್ಪಾದನೆ ವಿರುದ್ಧ ಹೋರಾಟ' ವನ್ನು ನೆಪ ಮಾಡಲು ನಿರ್ಧರಿಸಿತು. ಆಗಿನಿಂದ ಇಸ್ರೇಲಿ ಸೈನ್ಯ (ಅಮೇರಿಕದ ಪೂರ್ಣ ಬೆಂಬಲದೊಂದಿಗೆ) ಈ ಕೆಲಸದಲ್ಲಿ ಮಗ್ನವಾಗಿದೆ. ಇತ್ತೀಚಿನ 34 ದಿನಗಳ ಅರಾಫತ್ ಮೇಲೆ ದಿಗ್ಬಂದನ ಅದೇ ಕಾರ್ಯಾಚರಣೆಯ ಭಾಗ. ಈ ಬಗ್ಗೆ ಅಮೆರಿಕಕ್ಕೆ ಪೂರ್ಣ ಮಾಹಿತಿ ಇತ್ತು. ಇದು ಜಂಟಿಯಾಗಿ ನಡೆಸಿದ ಕಾರ್ಯಾಚರಣೆ. ಇಸ್ರೇಲಿ ಯೋಜನೆಗೆ ಅಮೆರಿಕ ಹಾಕಿದ್ದ ಒಂದೇ ಕಡಿವಾಣ ಎಂದರೆ ಯಾಸರ್ ಅರಾಫತ್ ಕೊಲೆ ಆಗಬಾರದು ಅಂತ.

ಈ ಯುದ್ಧದಲ್ಲಿ ಪ್ಯಾಲೆಸ್ಟೇನ್ ಪ್ರಾಧಿಕಾರದ ಕಟ್ಟಡಗಳು, ಸಚಿವಾಲಯಗಳು, ಆಫೀಸುಗಳು, ಇಲ್ಲವೇ ದಾಖಲೆಗಳನ್ನು ಇಸ್ರೇಲಿ ಸೈನ್ಯ ನಾಶ ಮಾಡಿತು ಅಥವಾ ವಶಪಡಸಿಕೊಂಡಿತು. ಸೈನ್ಯ ಅಂಗಡಿಗಳಿಂದ, ಮನೆಗಳಿಂದ, ಬ್ಯಾಂಕುಗಳಿಂದ ಹಣ, ವಸ್ತುಗಳ ಲೂಟಿ ನಡೆಸಿದೆ. ಉಳಿದಿರುವ ಪ್ರದೇಶಗಳಲ್ಲೂ ಪ್ಯಾಲೆಸ್ಟೇನ್ ಪ್ರಾಧಿಕಾರ ಯಾವುದೇ ಕೆಲಸ ನಡೆಸದಂತೆ ಮಾಡಿದೆ. ಇಸ್ರೇಲ್ ತನ್ನ ಬರ್ಬರ ಮಿಲಿಟರಿ ಕಾರ್ಯಾಚರಣೆ ನಂತರ ಮಾಡಲಾಗದ್ದನ್ನು ಅಮೆರಿಕ 'ಶಾಂತಿ'ಯ ಹೆಸರಲ್ಲಿ ಮಾಡಿತು. ಅಮೆರಿಕ, ಇಸ್ರೇಲಿ ಸೈನ್ಯದ ದಿಗ್ಬಂದನದ ಒತ್ತಡದಿಂದ ಇಸ್ರೇಲ್ ಹೆಸರಿಸಿದ ಎಲ್ಲಾ ಪ್ಯಾಲೆಸ್ಟೇನ್ ರಾಜಕೀಯ ನಾಯಕತ್ವದ ಸದಸ್ಯರನ್ನು ಇಸ್ರೇಲಿಗೆ ಒಪ್ಪಿಸಲಾಯಿತು. ಇದರಲ್ಲಿ ಎರಡನೇ ಅತಿದೊಡ್ಡ (ಅರಾಫತ್‌ರ ಅಲ್-ಫತಾಹ್ ನಂತರ) ಮತ್ತು ಎಡ-ಪಂಥೀಯ ಒಲವಿನ ಪ್ಯಾಲೆಸ್ಟೇನ್ ವಿಮೋಚನಾ ಜನತಾ ರಂಗ (PFLP) ಯ ಹೊಸದಾಗಿ ಆಯ್ಕೆಯಾದ ಪ್ರಧಾನ ಕಾರ್ಯದರ್ಶಿ ಅಹ್ಮದ್ ಸಾರತ್ ಸಹ ಸೇರಿದ್ದಾರೆ. ಇದು ಅರಾಫತ್ ಮಾಡಿದ ಅತ್ಯಂತ ನಾಚಿಕೆಗೇಡಿನ ಮತ್ತು ರಾಜಕೀಯ ಶರಣಾಗತಿಯ ಕ್ರಮ. ಆಗಸ್ಟ್ 2001 ರಲ್ಲೇ PFLP ಯ ಹಿಂದಿನ ಪ್ರಧಾನ ಕಾರ್ಯದರ್ಶಿ ಅಬು ಅಲಿ ಮುಸ್ತಾಫರನ್ನು ಅವರ ಕಚೇರಿಯಲ್ಲಿ ಅಮೆರಿಕನ್ ಹೆಲಿಕಾಪ್ಟರ್‌ಗಳನ್ನು ಬಳಸಿ ಇಸ್ರೇಲಿ ಸೈನ್ಯ ಕೊಲೆ ಮಾಡಿತ್ತು. ಇದಕ್ಕೆ ಪ್ರತೀಕಾರವಾಗಿ PFLP ಇಸ್ರೇಲಿ ಮಂತ್ರಿಮಂಡಲದ ರೆಹವಾಮ್ ಝೀವಿಯರನ್ನು ಮುಗಿಸಿತ್ತು. ಝೀವಿಯ ಕೊಲೆಗಾರರನ್ನು ಅರಾಫತ್ ಹಿಡಿಯಲಾಗಲಿಲ್ಲ ಎಂದು ಇಸ್ರೇಲಿ ಆರೋಪ. ಬುಶ್-ಶಾರೋನ್ ದುಷ್ಟಕೂಟದ 'ಭಯೋತ್ಪಾದನೆ ವಿರುದ್ಧ ಯುದ್ಧ' ದ ವಿಪರ್ಯಾಸ ನೋಡಿ PFLP ಕಾರ್ಯದರ್ಶಿ ಮುಸ್ತಾಫಾರನ್ನು ಆತನ ಕಚೇರಿಯಲ್ಲೇ ಕೊಲೆ ಮಾಡಿದ್ದು ಭಯೋತ್ಪಾದನೆಯಲ್ಲ! ಅದಕ್ಕೆ ಪ್ರತೀಕಾರವಾಗಿ ಝೀವಿ ಕೊಲೆ ಭಯೋತ್ಪಾದನೆ! ಏಕೆಂದರೆ ಮುಸ್ತಾಫಾ ಕೊಲೆ ಮಾಡಿದ್ದು ಇಸ್ರೇಲಿ ಸೈನ್ಯ ಮತ್ತು ಸಿಐಎ ಸಲಹೆಗಾರರು! ಬುಶ್ - ಶಾರೋನ್ ದುಷ್ಟಕೂಟ. ಪ್ಯಾಲೆಸ್ಟೈನ್‌ನ ಸರ್ಕಾರ ಮತ್ತು ರಾಜಕೀಯ ನಾಯಕತ್ವದ ಬಹುಭಾಗವನ್ನು ನಾಶ ಮಾಡುವುದರಲ್ಲಿ ತೊಡಗಿದ್ದಾರೆ. ಇದಕ್ಕೆ ಭಯೋತ್ಪಾದನೆ ವಿರುದ್ಧ ಯುದ್ಧ' ದ ಮುಖವಾಡ.

'ಆತ್ಮಹತ್ಯಾದಳ'ಗಳು ಏಕೆ ಹುಟ್ಟುತ್ತವೆ?

ಒಸ್ಲೊ ಶಾಂತಿ ಒಪ್ಪಂದವೇ ಪ್ಯಾಲೆಸ್ಟೈನ್ ಜನತೆ ವಿರುದ್ಧ ವಾಲಿದ್ದ ಒಪ್ಪಂದ.ಅದರ ಕಲಮುಗಳನ್ನು ಜಾರಿ ಮಾಡಲು ಒತ್ತಾಯ ಹೇರುವಲ್ಲಿ ಅರಾಫತ್ ವಿಫಲವಾದದ್ದು ಈಗಿನ ಸ್ಥಿತಿ ನಿರ್ಮಾಣವಾಗಿದೆ. ಪ್ಯಾಲೆಸ್ಟೈನ್ ಭದ್ರತಾ ಪಡೆಗಳ ತರಬೇತಿಗೆ ಅಮೆರಿಕದತ್ತ ನೋಡಿದ್ದು ಅರಾಫತ್‌ರ ಇನ್ನೊಂದು ಪ್ರಮಾದ. ಅಮೆರಿಕದ ಸಿಐಎಗೆ ಪ್ಯಾಲೆಸ್ಟೇನ್ ಭದ್ರತಾ ಪಡೆಯ ಎಲ್ಲಾ ಅಧಿಕಾರಿಗಳ ಬಗ್ಗೆ ಗೊತ್ತಿತ್ತು. ಆ ಮಾಹಿತಿಯನ್ನು ಈ ಯುದ್ಧದಲ್ಲಿ ಪೂರ್ಣವಾಗಿ ಬಳಸಲಾಯಿತು. ಇಸ್ರೇಲಿನಲ್ಲಿ ದಾಳಿ ಮಾಡುತ್ತಿದ್ದ ಹಾಮಾಸ್ 'ಆತ್ಮಹತ್ಯಾದಳ' ವನ್ನು ಹಿಡಿಯಲು, ತಡೆಯಲು ಸಾಧ್ಯವಾಗಿಲ್ಲ ಎಂಬ ನೆಪದಲ್ಲಿ ಪ್ಯಾಲೆಸ್ಟೇನ್ ಭದ್ರತಾ ಪಡೆಗಳನ್ನು ನಿರ್ನಾಮ ಮಾಡಲಾಗಿದೆ. ಅರಾಫತ್‌ರ ಸರ್ಕಾರವನ್ನು ಮುನಿಸಿಪಾಲಿಟಿಯೂ ಅಲ್ಲ, ವಾರ್ಡ್ ಆಫೀಸಿನ ಹಂತಕ್ಕೆ ತಳ್ಳಲಾಗಿದೆ. ಬುಶ್-ಶಾರೂನ್ ದುಷ್ಟಕೂಟ ಕೊಟ್ಟ 'ಭಯೋತ್ಪಾದಕರ' ಪಟ್ಟಿಯಲ್ಲಿನ ಎಲ್ಲರನ್ನು ಅವರಿಗೆ ಒಪ್ಪಿಸುವ ಅರಾಫತ್‌ರ ನಿರ್ಧಾರವನ್ನು ಪ್ಯಾಲೆಸ್ಟೈನ್‌ನ ಎಲ್ಲಾ ರಾಜಕೀಯ ಶಕ್ತಿಗಳು ಖಂಡಿಸಿವೆ.



ಪ್ಯಾಲೆಸ್ಟೈನ್ ನಗರದಲ್ಲಿ ಇಸ್ರೇಲಿ ಸೈನಿಕರು

ಈ ಪ್ರತಿಕೂಲ ಪರಿಸ್ಥಿತಿಯಲ್ಲೂ ಪ್ಯಾಲೆಸ್ಟೈನ್ ಸ್ವಾತಂತ್ರ್ಯ ಹೋರಾಟ ಮತ್ತು ಅದರ ರಾಜಕೀಯ ನಾಯಕತ್ವ ಪ್ರಬಲವಾಗಿದೆ. ಪ್ಯಾಲೆಸ್ಟೈನ್ ಜನತೆಯ ವಿಮೋಚನಾ ಹೋರಾಟ ಮುಂದುವರೆಯುತ್ತದೆ. ಇಸ್ರೇಲ್ ಕಳೆದ ಹಲವು ದಶಕಗಳಿಂದ ಅದರ ರಾಜಕೀಯ, ಮಿಲಿಟರಿ ನಾಯಕತ್ವ ನಾಶ ಮಾಡುತ್ತಾ ಬಂದಿದೆ. ಆದರೆ ವಿಮೋಚನಾ ಹೋರಾಟ ನಿಂತಿಲ್ಲ. ಪ್ಯಾಲೆಸ್ಟೈನ್ ಜನತೆಯ ಬದುಕುವ ಹಕ್ಕು ಕಸಿದುಕೊಂಡು ಅವರ ಎಲ್ಲಾ ಹೋರಾಟಗಳೂ ನಾಶ ಮಾಡಲು ಇಸ್ರೇಲಿ ಫ್ಯಾಸಿಸ್ಟ್ ಕೃತ್ಯಗಳ ವಿರುದ್ಧ ಪ್ರತಿರೋಧ ಈಗ 'ಆತ್ಯಹತ್ಯಾ ದಳ'ಗಳ ರೂಪ ಪಡೆದಿದ್ದಕ್ಕೆ ಇಸ್ರೇಲಿ-ಅಮೆರಿಕದ ದುಷ್ಟ ಕೂಟವೇ ಹೊಣೆ. ಅರಾಫತ್ ಮತ್ತು ಇತರ ಗುಂಪುಗಳು ಶಾಂತಿಯುತವಾಗಿ ಮಾತುಕತೆಗಳ ಮೂಲಕ ನಡೆಸಿದ ಯತ್ನದ ಮೇಲೆ (ಅವಮಾನಕಾರಿ ಶರತ್ತುಗಳು ಒಪ್ಪಿಯೂ) ತಣ್ಣೀರು ಎರಚುತ್ತಾ ಹೋದಾಗ, ಈ ನಿರಾಶ್ರಿತ ಶಿಬಿರಗಳಲ್ಲಿ ಹುಟ್ಟಿ ಬೆಳೆದ ಪ್ಯಾಲೆಸ್ಟೈನ್ ಯುವಕ/ಯುವತಿಯರ ಮುಂದೆ ಇನ್ನೊಂದು ಬದಲಿ ಇದೆ, ಬುಶ್-ಶಾರೋನ್ ದುಷ್ಟಕೂಟ ಪ್ಯಾಲೆಸ್ಟೇನ್ ಸ್ವಾತಂತ್ರ್ಯ, ಸ್ವಾಯತ್ತತೆ ಮನ್ನಿಸುವವರೆಗೆ ಜನತೆಯ ಹೋರಾಟ ಮುಂದುವರೆಯುತ್ತದೆ.

ಸಾಮ್ರಾಜ್ಯಶಾಹಿ-ವಿರೋಧಿ ಹೋರಾಟದ ಕೇಂದ್ರಬಿಂದು

ಪ್ಯಾಲೆಸ್ಟೈನ್‌ನ ವಿಮೋಚನಾ ಹೋರಾಟ ಇಪ್ಪತ್ತನೇ ಶತಮಾನದ ಮಧ್ಯದಲ್ಲಿ ಆರಂಭವಾಗಿ ಸಫಲವಾಗಿ ಕೊನೆಗೊಳ್ಳದ ಏಕಮಾತ್ರ ಹೋರಾಟ. ಇತರ ಎಲ್ಲಾ ಪ್ರಮುಖ ಇಪ್ಪತ್ತನೇ ಶತಮಾನದ ವಿಮೋಚನಾ ಹೋರಾಟಗಳು ಸಫಲವಾಗಿದ್ದವು. ಆದ್ದರಿಂದ ಪ್ಯಾಲೆಸ್ಟೈನ್ ಹೋರಾಟ ಸಾಮ್ರಾಜ್ಯಶಾಹಿ-ವಿರೋಧಿ ಹೋರಾಟದ ಕೇಂದ್ರ ಬಿಂದು ಈಗ. 'ಭಯೋತ್ಪಾದನೆ' ವಿರುದ್ಧ ಯುದ್ಧ'ದ ಹೆಸರಲ್ಲಿ ಜನತೆಯ ಹೋರಾಟವನ್ನು ದಮನ ಮಾಡಿ ಅಮೆರಿಕ ಮತ್ತು ಅದರ ಬಾಲಬಡುಕ ಇತರ ದೇಶಗಳ ಆಳುವ ವರ್ಗಗಳು ಅಧಿಪತ್ಯ ಹೇರುವ ಪ್ರಯತ್ನದ ವಿರುದ್ಧ ಪ್ರತಿರೋಧದ ಪ್ರತೀಕ ಪ್ಯಾಲೆಸ್ಟೇನ್. ಪ್ಯಾಲೆಸ್ಟೈನ್ ಗೆಲ್ಲುವುದು ಈ ಸಾಮ್ರಾಜ್ಯಶಾಹಿ ಅಧಿಪತ್ಯದ ವಿರುದ್ಧ ಪ್ರತಿರೋಧಕ್ಕೆ ಪ್ರಾಮುಖ್ಯವಾದದ್ದು. ಆದ್ದರಿಂದ ಇಂದು ಪ್ಯಾಲೆಸ್ಟೈನ್ ಹೋರಾಟಕ್ಕೆ ಸಾಮ್ರಾಜ್ಯಶಾಹಿ-ವಿರೋಧಿ ಶಕ್ತಿಗಳು ಏಕಕಂಠದಿಂದ ಬೆಂಬಲಿಸಬೇಕು. ಎಲ್ಲಾ ಸಾಧ್ಯವಾದ ರೀತಿಯ ಸಹಾಯ ಮಾಡಬೇಕು.



ನಿರಾಶ್ರಿತರ ಶಿಬಿರದಲ್ಲಿ ಪ್ಯಾಲೆಸ್ಟೇನ್ ಪ್ರಜೆಗಳು

2002

ಫಿಫಾ ವಿಶ್ವಕಪ್
ಕೊರಿಯಾ-ಜಪಾನ್

17ನೇ ವಿಶ್ವಕಪ್ ಫುಟ್ಬಾಲ್ ಪಂದ್ಯಾವಳಿಗಳು ಇದೇ ಮೇ 31ರಂದು ದ.ಕೋರಿಯಾದ ಸಿಯೋಲ್‌ನಲ್ಲಿ ಆರಂಭವಾಗಲಿದೆ. ವಿಶ್ವಕಪ್ ಫುಟ್ಬಾಲ್ ಜಗತ್ತಿನ ಬೃಹತ್ ಕ್ರಿಡೋತ್ಸವ. ಭಾಗವಹಿಸುವ ರಾಷ್ಟ್ರಗಳ ಸಂಖ್ಯೆ ನೇರ ಹಾಗೂ ಪರೋಕ್ಷ ಪ್ರೇಕ್ಷಕರ ಸಂಖ್ಯೆ, ಉತ್ಸಾಹದಲ್ಲಿ ಒಲಂಪಿಕ್ಸ್ ಅನ್ನು ಹಿಂದೆ ಹಾಕುತ್ತದೆ. ಏಕೆ ವಿಶ್ವಕಪ್ ಫುಟ್ಬಾಲ್ ಜಗತ್ತಿನ ಜನಪ್ರಿಯ ಹಾಗೂ ಬೃಹತ್ ಕ್ರೀಡೋತ್ಸವ ಎಂಬ ಬಗ್ಗೆ ಸಣ್ಣ ಹಿನ್ನೋಟ ಹರಿಸೋಣ.

ವಿಶ್ವಕಪ್ ಫುಟ್ಬಾಲ್ ಜಗತ್ತಿನ ಬೃಹತ್ ಕ್ರೀಡೋತ್ಸವ



ಆರ್.ಡಿ.ಮಿರ್ಕ್ಯೋರ್

ಫುಟ್ಬಾಲ್ ಜಗತ್ತಿನ ಜನಪ್ರಿಯ ಕ್ರೀಡೆ, ವಿಶ್ವದಲ್ಲಿ ಫುಟ್ಬಾಲ್ ಆಡದ ರಾಷ್ಟ್ರಗಳೇ ಇಲ್ಲ. ಏಕೆ ಈ ಜನಪ್ರಿಯತೆ? ಫುಟ್ಬಾಲ್ ಆಟವನ್ನು ಕ್ರೀಡೆಗಳ ರಾಜ ಎಂದು ಕರೆಯಲಾಗುತ್ತಿದೆ. ನಿಜ ಏಕೆಂದರೆ ಫುಟ್ಬಾಲ್ ಜನ ಸಾಮಾನ್ಯರ, ಜನ ಸಮೂಹದ ಆಟ. ಇದೊಂದು ಸುಲಭವಾದ ಆಟ. ಒದೆಯಲು ಒಂದು ಚೆಂಡು ಹಾಗೂ ಆಡಲು ಒಂದಿಷ್ಟು ಮೈದಾನ, ಯಾವ ಪರಿಕರಗಳ ಅವಶ್ಯಕತೆ ಇಲ್ಲ. ಬ್ರೆಜಿಲ್‌ನ ಸಮುದ್ರತೀರದಿಂದ ಆಫ್ರೀಕಾದ ಮರುಭೂಮಿವರೆಗೆ, ಸ್ಕಾಟ್‌ಲ್ಯಾಂಡಿನ ಪರ್ವತ ಪ್ರದೇಶಗಳಿಂದ ಹಿಡಿದು ಇಟಲಿಯ ಸುಂದರ ಬೀದಿಗಳವರೆಗೆ, ವಿಶ್ವದ ಮೂಲೆಯಿಂದ ಮೂಲೆಗೆ ಈ ಆಟ ಜನಪ್ರಿಯ. ಫುಟ್ಬಾಲ್ ಕಾರ್ಮಿಕರ, ದುಡಿಯುವ ಜನರ ಆಟ, ಇದಕ್ಕಾಗಿಯೇ ಈ ಆಟ ಪ್ರಖ್ಯಾತವಾಯಿತು. ಜನಜೀವನದೊಡನೆ ಬೆರೆತು ಬೆಳೆಯಿತು. ಈ ಹಿಂದೆ ಯುರೋಪ್‌ನ ವಸಾಹತುಗಳಾಗಿದ್ದ ಲ್ಯಾಟಿನ್ ಅಮೇರಿಕಾ ರಾಷ್ಟ್ರಗಳ ಕಾರ್ಮಿಕರು ವಾಸಿಸುವ ಕೊಳಚೆ ಪ್ರದೇಶ, ಗಲ್ಲಿಗಳಲ್ಲಿ ಯುರೋಪ್‌ನ ಕೈಗಾರಿಕಾ ಪ್ರದೇಶ, ಗಣಿಕಾರ್ಮಿಕರ ವಸತಿ ಪ್ರದೇಶಗಳಲ್ಲಿ, ಸಾಮ್ರಾಜ್ಯ ಶಾಹಿಗಳ ವಸಾಹತು ಆಗಿದ್ದ ಇಡೀ ಆಫ್ರಿಕಾ ಖಂಡದಲ್ಲಿ ಫುಟ್ಬಾಲ್ ಅತ್ಯಂತ ಜನಪ್ರಿಯ ಹಾಗೂ ಸಮೃದ್ಧಿ ಕಂಡಿದೆ. ಯುರೋಪ್ ಹಾಗೂ ಲ್ಯಾಟಿನ್ ಅಮೇರಿಕಾ ರಾಷ್ಟ್ರಗಳ, ಕತ್ತಲೆಯ ಖಂಡ ಆಫ್ರಿಕಾದಿಂದ ನೂರಾರು ಫುಟ್ಬಾಲ್ ಕ್ರೀಡಾಪಟುಗಳು ಉದಯಿಸಿದ್ದಾರೆ ಹಾಗೂ ದಂತಕಥೆಗಳಾಗಿದ್ದಾರೆ. ವರ್ಣಭೇದ, ಜನಾಂಗೀಯ ದ್ವೇಶ, ಮತೀಯ ವಾದಗಳ ನಡುವೆ ವಿಶ್ವ ತತ್ತರಿಸುತ್ತಿರುವ ಸಮಯದಲ್ಲಿ ವಿಶ್ವಕಪ್ ಫುಟ್ಬಾಲ್ ತನ್ನ ಪ್ರಾಮುಖ್ಯತೆಯಿಂದ ಜನಾಂಗಗಳನ್ನು, ರಾಷ್ಟ್ರಗಳನ್ನು ಬೆಸೆಯುತ್ತಿದೆ. ಆಫ್ರಿಕಾದಿಂದ ಗುಲಾಮರಾಗಿ ವಿಶ್ವದಾದ್ಯಂತ ಮಾರಾಟವಾಗಿದ್ದ ನೀಗ್ರೋ ಸಂಜಾತರು ಇಂದು ವಿಶ್ವದ ಎಲ್ಲಾ ರಾಷ್ಟ್ರಗಳ ಫುಟ್ಬಾಲ್ ತಂಡಗಳ ಪ್ರಮುಖ ತಾರೆಯರಾಗಿರುತ್ತಾರೆ. ಇಡೀ ಜಗತ್ತಿನಲ್ಲಿ ಜರ್ಮನರ ಜನಾಂಗೀಯ ಕ್ರೂರ ಮನೋಭಾವ ಎಲ್ಲರಿಗೂ ತಿಳಿದಿದೆ. ಜರ್ಮನಿಯಲ್ಲಿ ಜನಾಂಗೀಯ ಹಾಗೂ ವರ್ಣಭೇದ ಈಗಲೂ ಪ್ರಬಲ. ಈ ನಡುವೆ ಆಫ್ರಿಕಾದ ಘಾನಾದಲ್ಲಿ ಹುಟ್ಟಿದ ಜೆರಾಲ್ಡ್ ಅಸಮೊಹ್ ಎಂಬ ಕಪ್ಪು ವರ್ಣೀಯ ಆಟಗಾರ ಮೊದಲ ಬಾರಿಗೆ ಜರ್ಮನಿಯನ್ನು ವಿಶ್ವಕಪ್ ಫುಟ್ಬಾಲ್‌ನಲ್ಲಿ ಈ ಬಾರಿ ಪ್ರತಿನಿಧಿಸುತ್ತಿದ್ದಾನೆ. ಕಪ್ಪು ವರ್ಣೀಯ ಆಟಗಾರ ಇನ್ಸ್ ಹಿಂದೆ ಇಂಗ್ಲೆಂಡ್‌ನ ನಾಯಕನಾಗಿದ್ದ. ಇಂದು ಫ್ರಾನ್ಸ್‌ನ ನಾಯಕ ಮಾರ್ಸೆಲ್ ಡಿಸೇಲಿ ಕೂಡ ನೀಗ್ರೋ ಸಂಜಾತ.

ಉಗಮ:

ಸರಿಸುಮಾರು ಎರಡು ಸಾವಿರ ವರ್ಷಗಳ ಹಿಂದೆ ಚೀನಾದಲ್ಲಿ ತ್ಸುಚ್ಯು ಎಂಬ ಫುಟ್ಬಾಲ್ ಹೋಲುವಂತಹ ಆಟವಿತ್ತು. ತ್ಸು ಎಂದರೆ ಒದೆ, ಚ್ಯು ಎಂದರೆ ಚರ್ಮದ ಚೆಂಡು ಎಂದು ಅರ್ಥ. ಪ್ರಾಚೀನ ಗ್ರೀಕ್‌ನಲ್ಲಿ ಫುಟ್ಬಾಲ್ ತರಹದ ಆಟವಿದ್ದು ಮುಂದೆ ರೋಮ್‌ಗೆ ತಲುಪಿ, ರೋಮ್ ಸಾಮ್ರಾಜ್ಯದ ಬೆಳವಣಿಗೆಯೊಂದಿಗೆ ಇಂಗ್ಲೆಂಡ್ ತಲುಪಿತು. ಇಂಗ್ಲೆಂಡ್‌ನಲ್ಲಿ 13 ನೇ ಶತಮಾನದಲ್ಲಿ ಈ ಆಟ ವ್ಯವಸ್ಥಿತವಾಗಿ ನೆಲೆಯೂರಲು ಆರಂಭವಾಯಿತು. ಕೈಗಾರಿಕಾ ಕ್ರಾಂತಿಯೊಡನೆ ಫುಟ್ಬಾಲ್ ಯುರೋಪ್‌ನ ನಗರ ಪ್ರದೇಶಗಳಲ್ಲಿ ಜನಪ್ರಿಯವಾಯಿತು. ಕ್ರಿ.ಶ 1314ರಲ್ಲಿ ಹಾಗೂ 1572ರಲ್ಲಿ ಕ್ರಮವಾಗಿ ಎರಡನೇ ಎಡ್ವರ್ಡ್ ಚಕ್ರವರ್ತಿ ಹಾಗೂ ಎಲಿಜಬೆತ್ ರಾಣಿ ಫುಟ್ಬಾಲ್ ಅನ್ನು ನಿಷೇಧಿಸಿದ್ದರು. ಪೌರುಷದ ಕ್ರೀಡೆಯಾದ ಬಿಲ್ಲುಗಾರಿಕೆಯನ್ನು ಫುಟ್ಬಾಲ್ ಹಿಮ್ಮೆಟ್ಟುತ್ತದೆ ಎಂಬ ಕಾರಣಕ್ಕಾಗಿ ಈ ನಿಷೇಧ ಹೇರಲಾಗಿತ್ತು. ಈ ಎಲ್ಲದರ ನಡುವೆ ಇತರೆ ಕ್ರೀಡೆಗಳಿಗಿಂತ ಫುಟ್ಬಾಲ್ ಸಮೃದ್ಧ ಬೆಳವಣಿಗೆ ಕಂಡಿತು. 1904ರಲ್ಲಿ ಅಂತರಾಷ್ಟ್ರೀಯ ಫುಟ್ಬಾಲ್ ಸಂಸ್ಥೆ (FIFA) ಪ್ಯಾರಿಸ್‌ನಲ್ಲಿ ಜನ್ಮ ತಾಳಿತು. ಈ ಸಂಸ್ಥೆ ಅಡಿಯಲ್ಲಿ ಪ್ರಥಮ ವಿಶ್ವಕಪ್ ಪಂದ್ಯಾವಳಿ 1930ರಲ್ಲಿ ಉರುಗ್ವೆಯಲ್ಲಿ ನಡೆಯಿತು. ಅಥಿತೇಯ ಉರುಗ್ವೇ ಪ್ರಥಮ ವಿಶ್ವಕಪ್ ವಿಜೇತ ರಾಷ್ಟ್ರ 1930ರಿಂದ 1998ರವರೆಗೆ 16 ಪಂದ್ಯಾವಳಿಗಳು ನಡೆದಿವೆ. 1930ರಲ್ಲಿ ಕೇವಲ ಎಂಟು ರಾಷ್ಟ್ರಗಳಿಗೆ ಸೀಮಿತವಾದ ಸ್ಪರ್ಧೆ 2002ರಲ್ಲಿ ಅಂತಿಮ ಸುತ್ತಿಗೆ 32 ರಾಷ್ಟ್ರಗಳು ಆಯ್ಕೆಯಾಗಿವೆ. ಈ ಆಯ್ಕೆ ಪ್ರಕ್ರಿಯೆ ಎರಡು ವರ್ಷಗಳ ಮೊದಲೇ ಆರಂಭಗೊಳ್ಳುತ್ತದೆ. ವಿಶ್ವದ ಎಲ್ಲಾ ಖಂಡಗಳ ಒಟ್ಟು 193 ರಾಷ್ಟ್ರಗಳು ಅರ್ಹತಾ ಸುತ್ತಿನ ಸ್ಪರ್ಧೆಯಲ್ಲಿ ಪಾಲ್ಗೊಂಡು ಅಂತಿಮ ಸುತ್ತಿಗೆ 32 ರಾಷ್ಟ್ರಗಳು ಆಯ್ಕೆಯಾಗಿವೆ. ಇದರಲ್ಲಿ ಯೂರೋಪ್ ಖಂಡಕ್ಕೆ - 15 ಅಮೇರಿಕಾ ಖಂಡಕ್ಕೆ - 8, ಆಫ್ರಿಕಾ ಖಂಡಕ್ಕೆ - 5 ಹಾಗೂ ಏಷ್ಯಾ ಖಂಡಕ್ಕೆ -4 ಸ್ಥಾನಗಳು ಲಭಿಸುತ್ತವೆ.. ಈ ಸಲ ವಿಶ್ವಕಪ್ ಫುಟ್ಬಾಲ್ ಪಂದ್ಯಾವಳಿಗಳು ಪ್ರಥಮ ಬಾರಿಗೆ ಏಷ್ಯ ಖಂಡದಲ್ಲಿ ಜರುಗುತ್ತಿವೆ ಹಾಗೂ ಜಪಾನ್ ಹಾಗೂ ದ.ಕೊರಿಯಾ ರಾಷ್ಟ್ರಗಳು ಜಂಟಿಯಾಗಿ ಈ ಬೃಹತ್ ಕ್ರೀಡೋತ್ಸವವನ್ನು ನಡೆಸುತ್ತಿವೆ. ಎರಡು ರಾಷ್ಟ್ರಗಳು ತಮ್ಮ ಶತಮಾನಗಳ ರಾಜಕೀಯ ವೈರತ್ವವನ್ನು ಇತ್ತೀಚಿನ ಕೈಗಾರಿಕಾ ವೈರತ್ವವನ್ನು ಫುಟ್ಬಾಲ್ ಮೂಲಕ ಮರೆತಿವೆ. ಕೊರಿಯಾ ಜಪಾನ್‌ನ ವಸಾಹತು ಆಗಿತ್ತು. ಏಷ್ಯಾದಿಂದ ಚೀನಾ ಪ್ರಥಮ ಬಾರಿಗೆ ಅಂತಿಮ ಸುತ್ತಿನಲ್ಲಿ ಆಡಲು ಅರ್ಹತೆ ಗಳಿಸಿವೆ. ಜೊತೆಗೆ ಸೌದಿ ಅರೇಬಿಯಾ ಕೂಡಾ ಇದೆ. ಅಥಿತೀಯ ರಾಷ್ಟ್ರಗಳಾಗಿ ಜಪಾನ್, ದ.ಕೋರಿಯಾ ಭಾಗವಹಿಸಲಿವೆ. ಮುಂದಿನ ಒಂದು ತಿಂಗಳು ಬಿಲಿಯಾಂತರ ಜನರು ವಿಶ್ವದ ಭೌಗೋಳಿಕ ಎಲ್ಲೆಗಳನ್ನು ಮೀರಿ, ಜನಾಂಗ, ವರ್ಣ ಬೇಧಗಳನ್ನು ಮರೆತು ತಿಂಗಳ ಕಾಲ ಒಂದಾಗಿ ವಿಶ್ವಕಪ್ ಫುಟ್ಬಾಲ್ ಎಂಬ ಏಕಮಂತ್ರ ಜಪಿಸಲಿದ್ದಾರೆ.

ಕ್ರೀಡೆಯ ಜನಪ್ರೀಯತೆ ಈ ರೀತಿ ಇದೆ. ವಿಶ್ವಕಪ್ ಕ್ರೀಡೆ ಸಮಯದಲ್ಲಿ ವಿಶ್ವದೆಲ್ಲೆಡೆ ಉತ್ಪಾದನೆ ಕಡಿಮೆಯಾಗುತ್ತದೆ, ಅಪರಾಧಗಳ ಸಂಖ್ಯೆ ಕುಂಟುತ್ತದೆ ಎಂದು ಸಂಖ್ಯಾಶಾಸ್ತ್ರಜ್ಞರುಗಳು ಹೇಳುತ್ತಾರೆ. ವಿಶ್ವಕಪ್ ಫುಟ್ಬಾಲ್ ಪಂದ್ಯಾವಳಿಗಾಗಿ ಅನೇಕ ರಾಷ್ಟ್ರಗಳಲ್ಲಿ ಕೆಲಸದ ಪಾಳಿಯ ವೇಳೆ ಬದಲಾಯಿಸಲಾಗಿದೆ. ಸಂಸದ್, ಶಾಸನ ಸಭೆಗಳನ್ನು ಮುಂದೂಡುತ್ತಾರೆ. ಫುಟ್ಬಾಲ್ ಲ್ಯಾಟಿನ್ ಅಮೇರಿಕಾ ರಾಷ್ಟ್ರಗಳ ಮುಖ್ಯವಾಗಿ ಬ್ರೆಜಿಲ್‌ನ ಜಾನಪದ, ಯೂರೋಪ್‌ನ ಜೀವನದ ಶೈಲಿ ಆಗಿದೆ. ವಿಶ್ವಕಪ್ ಅರ್ಹತಾ ಪಂದ್ಯಾವಳಿ ಸಂಬಂಧಪಟ್ಟಂತೆ 1969ರಲ್ಲಿ ಎಲ್‌ಸಾಲ್ವಾಡೋರ್ ಹಾಗೂ ಹೋಂಡೂರಾಸ್ ರಾಷ್ಟ್ರಗಳ ನಡುವೆ ಯುದ್ಧ ನಡೆದು 200 ಜನ ಸತ್ತು 1000ಕ್ಕೂ ಹೆಚ್ಚು ಮಂದಿ ಗಾಯಗೊಂಡರು. ಇದು ಫುಟ್ಬಾಲ್ ಯುದ್ಧವೆಂದೇ ದಾಖಲಾಗಿದೆ.

ವಿಶ್ವಕಪ್ ಫುಟ್ಬಾಲ್ ಪಂದ್ಯಾವಳಿಯನ್ನು ಒಂದೇ ಸ್ಥಳದಲ್ಲಿ ನಾಲ್ಕು ವರ್ಷಕ್ಕೊಮ್ಮೆ ನಡೆಯುವ "ವಿಶ್ವ ಸಮರ' ವೆಂದು ಕರೆಯಲಾಗುತ್ತಿದೆ. 1985ರಲ್ಲಿ ಇಂಗ್ಲೆಂಡ್‌ನ ವಸಾಹತು ಆಗಿದ್ದ ಫಾಕ್‌ಲ್ಯಾಂಡ್ ದ್ವೀಪವನ್ನು ಅರ್ಜೆಂಟೀನಾ ವಶಪಡಿಸಿಕೊಂಡ ನಂತರ 1986ರ ಮೆಕ್ಸಿಕೋ ವಿಶ್ವಕಪ್ ಪಂದ್ಯದಲ್ಲಿ ಇಂಗ್ಲೆಂಡ್ ಹಾಗೂ ಅರ್ಜೆಂಟೀನಾ ನಡುವೆ ನಡೆದ ಫುಟ್ಬಾಲ್ ಪಂದ್ಯವನ್ನು ಫಾಕ್‌ಲ್ಯಾಂಡ್ ಯುದ್ಧವೆಂದು ಕರೆಯಲಾಗುತ್ತಿದೆ. ಈ ಪಂದ್ಯದಲ್ಲಿ ಅರ್ಜೆಂಟೀನಾ ಇಂಗ್ಲೆಂಡನ್ನು ಸೋಲಿಸಿತು. ಅನೇಕ ವಿಶ್ವಕಪ್‌ನ ಪಂದ್ಯಗಳು ಯುದ್ಧದ ಹೆಸರಿನಲ್ಲಿ ಪ್ರಖ್ಯಾತವಾಗಿವೆ. 1934ರಲ್ಲಿ ಇಂಗ್ಲೆಂಡ್ ಹಾಗೂ ಇಟಲಿ ನಡುವೆ ನಡೆದ ಪಂದ್ಯವನ್ನು ಹೈಬರಿ ಯುದ್ಧವೆಂದು 1954ರಲ್ಲಿ ಹಂಗೇರಿ ಹಾಗೂ ಬ್ರೆಜಿಲ್ ನಡುವೆ ನಡೆದ ಪಂದ್ಯವನ್ನು ಬರ್ನ್ ಯುದ್ಧವೆಂದು 1962ರಲ್ಲಿ ಚಿಲಿ ಹಾಗೂ ಇಟಲಿ ನಡುವೆ ನಡೆದ ಪಂದ್ಯವನ್ನು ಸ್ಯಾಂಟಿಯಾಗೋ ಯುದ್ಧವೆಂದು ಕರೆಯಲಾಗುತ್ತಿದೆ. ವಿಶ್ವಕಪ್ ಫುಟ್ಬಾಲ್‌ನ ಅಂತಿಮ ಸುತ್ತಿನಲ್ಲಿ ಭಾಗವಹಿಸುವ ಹಾಗೂ ಗೆಲ್ಲುವ ಮೂಲಕ ಅನೇಕ ರಾಷ್ಟ್ರಗಳು ವಿವಿಧ ರೀತಿಯಲ್ಲಿ ಪ್ರಾಬಲ್ಯ ಸಾಧಿಸಲು ಹೊರಟಿವೆ. 1998ರಲ್ಲಿ

ಪುಟ 10 ನೋಡಿ



ಭಾರತ ಸರ್ಕಾರದ ಅಸಡ್ಡೆ

ಈ ಹಿಂದಿನ ವಿಶ್ವಕಪ್ ಪಂದ್ಯಾವಳಿಗಳನ್ನು ರಾಷ್ಟ್ರೀಯ ದೂರದರ್ಶನ ಬಿತ್ತರಿಸಿತ್ತು. ಫುಟ್ಬಾಲ್ ಭಾರತದಲ್ಲೂ ಜನಪ್ರಿಯ ಕ್ರೀಡೆ. ಆದರೆ ಈ ಸಲ ಕೇಂದ್ರ ಸರ್ಕಾರ ಈ ಬಗ್ಗೆ ಅಸಡ್ಡೆ ತೋರಿದೆ. ದೇಶದಲ್ಲಿ ವಿಶ್ವಕಪ್ ಪ್ರಸಾರದ ಹಕ್ಕನ್ನು ದುಬೈನ ಶೇಕ್ ಬುಕ್ತಿಯಾರ್ ಒಡೆತನದ ಖಾಸಗಿ ಚಾನೆಲ್ ಟೆನ್‌ಸ್ಪೋರ್ಟ್ಸ್ ಪಡೆದುಕೊಂಡಿದೆ. ರಾಷ್ಟ್ರೀಯ ದೂರದರ್ಶನದಿಂದ ಪ್ರಸಾರದ ಹಕ್ಕನ್ನು ಕಸಿದುಕೊಳ್ಳುವಲ್ಲಿ ಟೆನ್‌ಸ್ಪೋರ್ಟ್ಸ್ ಹಣದ ಅವ್ಯವಹಾರ ನಡೆಸಿರಬಹುದು ಎಂಬ ಪಿಸು ಮಾತಿದೆ. (ಕೇಂದ್ರ ಬಿಜೆಪಿ ಸರಕಾರಕ್ಕೆ ಭ್ರಷ್ಟಾಚಾರ ಹೊಸತಲ್ಲ) ದೇಶದ ಜನಸಾಮಾನ್ಯ ದೂರದರ್ಶನದಲ್ಲಿ ವಿಶ್ವಕಪ್ ಫುಟ್ಬಾಲ್ ಪಂದ್ಯಾವಳಿ ನೋಡುವುದರಿಂದ ವಂಚಿತರಾಗುವ ಸಂಭವವಿದೆ. ಈ ಬಗ್ಗೆ ಕಲ್ಕತ್ತಾದಲ್ಲಿ DYFI ಕೇಂದ್ರ ಸರಕಾರದ ವಿರುದ್ಧ ಪ್ರತಿಭಟನೆ ನಡೆಸಿದೆ (ಪ.ಬಂಗಾಳದಲ್ಲಿ ಫುಟ್ಬಾಲ್ ಜಯಪ್ರೀಯ ಕ್ರೀಡೆ). ಇದಲ್ಲದೆ ಪಶ್ಚಿಮ ಬಂಗಾಳ ಸರಕಾರದ ವಿದ್ಯುತ್ ಮಂತ್ರಿ ಕೇಂದ್ರ ಸರಕಾರಕ್ಕೆ ವಿಶ್ವಕಪ್ ಫುಟ್ಬಾಲ್ ನಡೆಯುತ್ತಿರುವ ಸಂದರ್ಭದಲ್ಲಿ ಕೇಂದ್ರ ವಿದ್ಯುತ್‌ಚ್ಛಕ್ತಿ ಮಂಡಳಿಯಿಂದ ವಿದ್ಯುತ್ ಸರಬರಾಜಿಗೆ ತೊಂದರೆ ಆಗಬಾರದು ಎಂದು ಮನವಿ ಕೊಟ್ಟಿದ್ದಾರೆ. ಹಾಗೆಯೇ ಅತ್ಯಂತ ಪ್ರತಿಭಾನ್ವಿತ ಆಟಗಾರರನ್ನು ನೀಡಿರುವ ಕೇರಳದ ಕಣ್ಣೂರು ಜಿಲ್ಲೆಯಲ್ಲಿ ಡಿವೈಎಫ್‌ಐ ಮತ್ತಿತರೆ ಸಂಘಟನೆಗಳಿಂದ ದೂರದರ್ಶನದ ಪ್ರಸಾರಕ್ಕಾಗಿ ಭಾರಿ ಪ್ರತಿಭಟನೆ ನಡೆದಿದೆ.

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2002

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡ ರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹಾಸ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.

Printed & Published by Communist Party of India(Marxist), Karnataka State Committee. Editor: S.Y.GURUSHANTH